epaper - karnatakamalla.com

ಕರ್ನಾಟಕ ಮಲ್ಲ

TEL: 24715208, Fax:24715237 | ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ | KARNATAKA MALLA, MUMBAI

ಸಂಪುಟ : 35 ಸಂಚಿಕೆ : 140 ಸೋಮವಾರ 22-06-2026 ಬೆಲೆ : ₹ 6 ಪುಟಗಳು - 10 | ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ



ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷರಾಗಿ ಹಿರಿಯ ನಾಯಕ ಬಿ.ಕೆ. ಹರಿಪ್ರಸಾದ್ ಪದಗ್ರಹಣ.

3 ಸರಕಾರದ ಸಾಲ ಮನ್ನಾ ಮೋಸದಿಂದ ಕೂಡಿದೆ,ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೇಕು; ಎಂವಿಎ ನಾಯಕರ ಬೇಡಿಕೆ

ಅಮೆರಿಕ, ಇರಾನ್,ಮಧ್ಯವರ್ತಿಗಳಿಂದ ಶಾಂತಿ ಒಪ್ಪಂದ ಅನುಷ್ಠಾನದ ಕುರಿತು ಮಾತುಕತೆ ಆರಂಭ **5**

ಸಹಾಯ ಎನ್ನುವುದು ಎಂತಹ ಘಟನೆ ಎಂದರೆ ಮಾಡಿದರೆ ಜನರು ಮರೆತುಬಿಡುತ್ತಾರೆ. ಮಾಡದಿದ್ದರೆ ನೆನಪಿನಲ್ಲಿ ಟ್ಟುಕೊಳ್ಳುತ್ತಾರೆ.



ವೈಭವ್ ಸಿಡಿಲಬ್ಬರ; ಶ್ರೀಲಂಕಾ 'ಎ' ಸದೆಬಡಿದು ತ್ರಿಕೋನ ಸರಣಿ ಗೆದ್ದ ಭಾರತ 'ಎ' ತಂಡ

ದಂಬುಲ್ಲಾ , ಜೂ.21 - ಭರವಸೆಯ ಆಟಗಾರ ವೈಭವ್ ಸೂರ್ಯವಂಶಿ (94 ರನ್) ಅವರ ಭರ್ಜರಿ ಪ್ರದರ್ಶನದ ಬಲದಿಂದ ಭಾರತ 'ಎ' ತಂಡ ಶ್ರೀಲಂಕಾದಲ್ಲಿ ನಡೆದ ತ್ರಿಕೋನ ಸರಣಿಯ ಫೈನಲ್ ಪಂದ್ಯದಲ್ಲಿ ಆತಿಥೇಯ ಶ್ರೀಲಂಕಾ 'ಎ' ತಂಡವನ್ನು 66 ರನ್‌ಗಳಿಂದ ಮಣಿಸಿ ಅಬ್ಬರಿಸಿತು. ಆತಿಥೇಯ ತಂಡವನ್ನು ಸೋಲಿಸಿದ ಭಾರತ 'ಎ' ತಂಡ ತ್ರಿಕೋನ ಸರಣಿಯನ್ನು ತನ್ನ ತೆಕ್ಕೆಗೆ ಹಾಕಿಕೊಂಡಿದೆ.

ಈ ಫೈನಲ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ಎ ತಂಡ ವೈಭವ್ ಸೂರ್ಯವಂಶಿ ಅವರ ಸ್ಫೋಟಕ ಬ್ಯಾಟಿಂಗ್‌ನಿಂದಾಗಿ ನಿಗದಿತ 50 ಓವರ್‌ಗಳಲ್ಲಿ 377 ರನ್ ಕಲೆಹಾಕಿತು. ಈ ಗುರಿ ಬೆನ್ನಟ್ಟಿದ ಶ್ರೀಲಂಕಾ ನಿಯಮಿತ ಅಂತರಗಳಲ್ಲಿ ವಿಕೆಟ್ ಕಳೆದುಕೊಂಡು ಸೋಲಿಗೆ ಶರಣಾಯಿತು. ಈ ಮೂಲಕ ಭಾರತ ತಂಡ ಸತತ 7ನೇ ತ್ರಿಕೋನ ಸರಣಿಯನ್ನು ಗೆದ್ದ ದಾಖಲೆಯೊಂದಿಗೆ ಈ ಪ್ರವಾಸವನ್ನು ಅಂತ್ಯಗೊಳಿಸಿದೆ.

ಈ ಗುರಿಯನ್ನು ಬೆನ್ನಟ್ಟಿದ ಶ್ರೀಲಂಕಾ ಎ ತಂಡ ಕಳಪೆ ಆರಂಭ ಪಡೆದುಕೊಂಡಿತು. ಮಧ್ಯಮ ಓವರ್‌ಗಳಲ್ಲಿ ಪ್ರತಿರೋಧ ತೋರಿತ್ತಾದರೂ ಭಾರತೀಯ ಬೌಲರ್‌ಗಳ ಒತ್ತಡಕ್ಕೆ ಮಣಿದು 47.1 ಓವರ್‌ಗಳಲ್ಲಿ ಕೇವಲ 311 ರನ್‌ಗಳಿಗೆ ಆಲ್ ಔಟ್ ಆಯಿತು. ತಂಡದ ಪರ ವನಜಾ ಸಹನ್ 62 ರನ್ ಬಾರಿಸಿದರೆ, ಸದೇರಾ ಸಮರವಿಕ್ರಮ 52 ರನ್ ಗಳಿಸಿದರು. ವಿಜಯಕಾಂತ್ ವ್ಯಾಸಕಾಂತ್ 39 ಮತ್ತು ನಾಯಕ ಸಹನ್ ಅರಚ್ಚಿಗೆ 38 ರನ್‌ಗಳ ಕಾಣಿಕೆ ನೀಡಿದರಾದರೂ ತಂಡವನ್ನು ಗೆಲುವಿನ ದಡ ಮುಟ್ಟಿಸಲು ಸಾಧ್ಯವಾಗಲಿಲ್ಲ.

5ನೇ ಪುಟಕ್ಕೆ

ಯೋಗ 'ಜೀವಿತಾವಧಿಯ ಅಭ್ಯಾಸ'ವಾಗಬೇಕು; ಪ್ರಧಾನಿ ಮೋದಿ

ಕೊಲ್ಕತ್ತಾದಲ್ಲಿ ಸಾವಿರಾರು ಜನರೊಂದಿಗೆ ಯೋಗ ಪ್ರದರ್ಶನ, ಸ್ಥಳೀಯವಾಗಿ ನಿರ್ಮಿತ 3 ನೌಕಾ ಹಡಗುಗಳು ಸೇವೆಗೆ ಅರ್ಪಣೆ





ಕೊಲ್ಕತ್ತಾ, ಜೂ.21 - ಭಾರತದ ಭವಿಷ್ಯಕ್ಕಾಗಿ ವಿಶಾಲ ದೃಷ್ಟಿಕೋನವನ್ನು ರೂಪಿಸಲು ಪ್ರಧಾನಿ ನರೇಂದ್ರ ಮೋದಿ ಅವರಿಂದು ಕೊಲ್ಕತ್ತಾದಲ್ಲಿ ಯೋಗದ ಮೂಲಕ ಆಂತರಿಕ ಸಮತೋಲನ ಹಾಗೂ ಸಾಮೂಹಿಕ ಯೋಗಕ್ಷೇಮ ಮತ್ತು ರಾಷ್ಟ್ರೀಯ ಸ್ವಾವಲಂಬನೆ ಹಾಗೂ ಸಮುದ್ರಬಲ ಕುರಿತ ಎರಡು ಪ್ರಮುಖ ಸಾರ್ವಜನಿಕ ಕಾರ್ಯಕ್ರಮಗಳನ್ನು ಬಳಸಿಕೊಂಡರು.

ನಗರದ ಐಕಾನಿಕ್ ರೆಡ್‌ರೋಡ್‌ನಲ್ಲಿ 12 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಮತ್ತು ಬಳಿಕ ಶ್ಯಾಮ ಪ್ರಸಾದ್ ಮುಖರ್ಜಿ ಬಂದರಿನಲ್ಲಿ ಸ್ಥಳೀಯವಾಗಿ ನಿರ್ಮಿಸಲಾದ ಮೂರು ನೌಕಾ ಹಡಗುಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ ಅವರು, ವೈಯಕ್ತಿಕ ಶಿಸ್ತು ಹಾಗೂ ರಾಷ್ಟ್ರೀಯ ಸಾಮರ್ಥ್ಯವು ಒಟ್ಟಾಗಿ ಬಲವಾದ, ಹೆಚ್ಚು ಆತ್ಮವಿಶ್ವಾಸದ ಭಾರತವನ್ನು ಹೇಗೆ ರೂಪಿಸುತ್ತದೆ ಎಂಬುದನ್ನು ಎತ್ತಿ ತೋರಿಸಿದರು.

ಅವರ ಒಂದು ಸಂದೇಶವು ಸಾಮರಸ್ಯ, ಆರೋಗ್ಯ ಮತ್ತು ಶಾಂತಿಯ ಮೇಲೆ ಕೇಂದ್ರೀಕೃತವಾಗಿದ್ದರೆ, ಇನ್ನೊಂದು ಭದ್ರತೆ, ತಾಂತ್ರಿಕ ಪ್ರಗತಿ ಮತ್ತು ಕಾರ್ಯತಂತ್ರದ ಪ್ರಭಾವವನ್ನು ಒತ್ತಿಹೇಳುತ್ತದೆ.

ಅಂತಾರಾಷ್ಟ್ರೀಯ ಯೋಗ ದಿನಾಚರಣೆಗಾಗಿ ರೆಡ್ ರೋಡ್‌ನಲ್ಲಿ ನೆರೆದಿದ್ದ ಸಾವಿರಾರು ಜನರನ್ನು ಉದ್ದೇಶಿಸಿ ಮಾತನಾಡಿದ ಮೋದಿ, ವೈಯಕ್ತಿಕ ಆರೋಗ್ಯವನ್ನು ಹೆಚ್ಚಿಸುವಲ್ಲಿ ಮಾತ್ರವಲ್ಲದೆ ವಿಶ್ವ ಶಾಂತಿಗೆ ವೇಗವರ್ಧಕವಾಗಿಯೂ ಯೋಗದ ಉಪಯುಕ್ತತೆಯನ್ನು ಪ್ರತಿಪಾದಿಸಿದರು. ಬಹು ಜಾಗತಿಕ ಸಂಘರ್ಷಗಳು ಮತ್ತು ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳ ಹಿನ್ನೆಲೆಯಲ್ಲಿ, ಈ ಪ್ರಾಚೀನ ಭಾರತೀಯ ಅಭ್ಯಾಸವು ದೈಹಿಕ ಸ್ವಾಸ್ಥ್ಯವನ್ನು ಮೀರಿ ಪ್ರಸ್ತುತವಾಗಿದೆ ಎಂದು ಅವರು ವಾದಿಸಿದರು. 5ನೇ ಪುಟಕ್ಕೆ

ಭಾರೀ ಬಿಗಿ ಭದ್ರತೆಯಲ್ಲಿ ನಡೆದ ನೀಟ್- ಯುಜಿ ಮರು ಪರೀಕ್ಷೆ

ಹೊಸದಿಲ್ಲಿ, ಜೂ. 21- ಮೇ 3ರಂದು ನಡೆದಿದ್ದ ನೀಟ್ ಪ್ರಶ್ನೆ ಪತ್ರಿಕೆಗಳ ಸೋರಿಕೆಯಿಂದಾಗಿ ರದ್ದಾಗಿದ್ದ ನೀಟ್-ಯುಜಿ ಮರು ಪರೀಕ್ಷೆ ರವಿವಾರ ದೇಶದಾದ್ಯಂತ ಕಟ್ಟೆಚ್ಚರದ ಭದ್ರತೆಯಲ್ಲಿ ನಡೆದಿದ್ದು ಮರು ಪರೀಕ್ಷೆ ಸರಕಾರಕ್ಕೆ ಬಿಸಿ ತುಪ್ಪವಾಗಿದ್ದು, ಪ್ರಶ್ನೆ ಪತ್ರಿಕೆ ಸೋರಿಕೆ ವಿರುದ್ಧ ವ್ಯಾಪಕ ಆಕ್ರೋಶ ಮತ್ತು ಪ್ರತಿಭಟನೆಗೆ ಕಾರಣವಾಗಿತ್ತು.

ಭಾರತದ 551 ನಗರಗಳ 5,440 ಕೇಂದ್ರಗಳು ಮತ್ತು ವಿದೇಶಗಳ 14 ಕೇಂದ್ರಗಳಲ್ಲಿ ಇಂದು ಮರು ಪರೀಕ್ಷೆ ನಡೆದಿದೆ. 95,000 ಪರೀಕ್ಷಾ ಕೊಠಡಿಗಳಲ್ಲಿ ನಡೆದ ಪರೀಕ್ಷೆಗೆ 1.38 ಲಕ್ಷಕ್ಕೂ ಹೆಚ್ಚು ಸಿಸಿಟಿವಿ ಕೆಮರಾಗಳ ಕಣ್ಗಾವಲು ನಡೆಸಲಾಗಿತ್ತು.

ಎಲೆಕ್ಟ್ರಾನಿಕ್ ದುಷ್ಕೃತ್ಯದಿಂದ ಮರು ಪರೀಕ್ಷೆಯನ್ನು ಸುರಕ್ಷಿತವಾಗಿರಿಸಲು 51,311 ಜಾಮರ್‌ಗಳನ್ನು ಅಳವಡಿಸಲಾಗಿತ್ತು.



ಮರು ಪರೀಕ್ಷೆಯ ವ್ಯವಸ್ಥೆಗಳ ಬಗ್ಗೆ ಈ ಮೊದಲು ಕೇಂದ್ರ ಶಿಕ್ಷಣ ಮಂತ್ರಿ ಧರ್ಮೇಂದ್ರ ಪ್ರಧಾನ್ ಎನ್‌ಟಿಎ ಪ್ರಧಾನ ಕಚೇರಿಯಲ್ಲಿ ಪರಿಶೀಲನೆ ನಡೆಸಿದ್ದರು.

ನೀಟ್-ಯುಜಿ ಪರೀಕ್ಷೆ ಇಂಗ್ಲಿಷ್ ಮತ್ತು 12 ಭಾರತೀಯ ಭಾಷೆಗಳಲ್ಲಿ ನಡೆದಿದೆ. ಅಪರಾಹ್ನ ಗಂಟೆ 2ರಿಂದ ಸಂಜೆ ಗಂಟೆ 5.15ರ ತನಕ ಪರೀಕ್ಷಾ ಅವಧಿಯಾಗಿತ್ತು. ವಿದ್ಯಾರ್ಥಿಗಳು ಒತ್ತಡಕ್ಕೆ ಒಳಗಾಗದಂತೆ ಮಾಡಲು 15 ನಿಮಿಷಗಳ ಹೆಚ್ಚುವರಿ ಸಮಯವನ್ನು ಮರು ಪರೀಕ್ಷೆಗೆ ನೀಡಲಾಗಿತ್ತು. ಇಲ್ಲದೇ ಇದ್ದರೆ ಪರೀಕ್ಷಾ ಅವಧಿ 3 ಗಂಟೆ ಆಗಿರುತ್ತಿತ್ತು. ವಿವಿಧ ರೀತಿಯ ಆರೋಗ್ಯ ಸಮಸ್ಯೆ ಇರುವ ಅಭ್ಯರ್ಥಿಗಳಿಗೆ ಸಂಜೆ ಗಂಟೆ 6.20ರ ತನಕ ಸಮಯ ನೀಡಲಾಗಿತ್ತು. 5ನೇ ಪುಟಕ್ಕೆ

ಮಹಾರಾಷ್ಟ್ರದಲ್ಲಿ ಮಳೆ ಪರಿಸ್ಥಿತಿ ಕಳವಳಕಾರಿ; ಮುಖ್ಯಮಂತ್ರಿ ಫಡ್ನವೀಸ್

ವಿಪಕ್ಷಗಳಿಂದ ಸಾಂಪ್ರದಾಯಿಕ ಚಹಾಕೂಟಕ್ಕೆ ಬಹಿಷ್ಕಾರ; ಫಡ್ನವೀಸ್ ತರಾಟೆ

ಮುಂಬಯಿ, ಜೂ.21 - ಮಹಾರಾಷ್ಟ್ರದಲ್ಲಿ ಪ್ರಸ್ತುತ ಮಳೆಯ ಪರಿಸ್ಥಿತಿಯನ್ನು 'ಗಂಭೀರ ಕಳವಳಕಾರಿ ವಿಷಯ' ಎಂದು ಬಣ್ಣಿಸಿದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು, ಕೆಲವು ಜಿಲ್ಲೆಗಳಲ್ಲಿ ಒಂದೇ ಒಂದು ಹನಿ ಮಳೆಯೂ ಬಿದ್ದಿಲ್ಲ ಎಂದು ಹೇಳಿದರು.

ರಾಜ್ಯ ವಿಧಾನಸಭೆಯ ಮುಂಗಾರು ಅಧಿವೇಶನದ ಮುನ್ನಾದಿನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಳೆ ಚಟುವಟಿಕೆಗಳು ಸುಧಾರಿಸದಿದ್ದರೆ ಮಹಾರಾಷ್ಟ್ರವು ದೊಡ್ಡ ಕುಡಿಯುವ ನೀರಿನ ಬಿಕ್ಕಟ್ಟನ್ನು ಎದುರಿಸಬಹುದು ಎಂದು ಹೇಳಿ,ನೀರನ್ನು ಸಂರಕ್ಷಿಸಲು ಪ್ರಯತ್ನಿಸಬೇಕು ಎಂದು ಕರೆ ನೀಡಿದರು.

ರಾಜ್ಯ ವಿಧಾನಸಭೆಯ ಮುಂಗಾರು ಅಧಿವೇಶನವು



ಜೂ. 22 ರಿಂದ ಜು.10 ರವರೆಗೆ ನಡೆಯಲಿದೆ.

ಮಹಿಳಾ ರೈತರಿಗೆ ಕಾನೂನು ಸ್ಥಾನಮಾನ ನೀಡುವ ಮಸೂದೆ ಸೇರಿದಂತೆ ಸುಮಾರು 10 ಮಸೂದೆಗಳನ್ನು ಅನುಮೋದನೆಗೆ ತೆಗೆದುಕೊಳ್ಳಲಾಗುವುದು ಎಂದ ಅವರು, ಅಧಿವೇಶನಕ್ಕೂ ಮುನ್ನ ಸರಕಾರದ ಸಾಂಪ್ರದಾಯಿಕ ಚಹಾ ಕೂಟವನ್ನು ಬಹಿಷ್ಕರಿಸಿದ್ದಕ್ಕಾಗಿ ವಿರೋಧ ಪಕ್ಷವನ್ನು ತರಾಟೆಗೆ ತೆಗೆದುಕೊಂಡರು.

ವಿರೋಧ ಪಕ್ಷಗಳು ವಿವಿಧ ರಂಗಗಳಲ್ಲಿ ಸರಕಾರದ ವೈಫಲ್ಯವನ್ನು ಪ್ರತಿಭಟಿಸಿ ರವಿವಾರ ಸಂಜೆ ನಡೆದ ಸರಕಾರದ ಸಾಂಪ್ರದಾಯಿಕ ಚಹಾಕೂಟವನ್ನು ಬಹಿಷ್ಕರಿಸಿದವು.

'ಮಳೆ ವಿಳಂಬವಾಗಿರುವುದರಿಂದ ಮತ್ತು ಭಾರೀ ಮಳೆಯ ಕೊರತೆ ಇರುವುದರಿಂದ ರಾಜ್ಯದಲ್ಲಿ ತುಂಬಾ ಕಠಿಣ ಪರಿಸ್ಥಿತಿ ನಿರ್ಮಾಣವಾಗಿದೆ. ಜೂನ್‌ನಲ್ಲಿ ಇಲ್ಲಿಯವರೆಗೆ, ಮಹಾರಾಷ್ಟ್ರವು ಸಾಮಾನ್ಯಕ್ಕಿಂತ ಸುಮಾರು ಶೇ.80 ರಷ್ಟು ಕಡಿಮೆ ಮಳೆಯಾಗಿದೆ. ಕೆಲವು ಜಿಲ್ಲೆಗಳಲ್ಲಿ, ಒಂದು ಹನಿ ಮಳೆಯೂ ಬಿದ್ದಿಲ್ಲ' ಎಂದು ಅವರು ಹೇಳಿದರು. 5ನೇ ಪುಟಕ್ಕೆ

ಬೆಸ್ಟ್ ಮುಷ್ಕರ: ನೀಟ್ ಮರುಪರೀಕ್ಷೆಯ ವಿದ್ಯಾರ್ಥಿಗಳಿಗಾಗಿ 180 ವಿಶೇಷ ಬಸ್‌ಗಳ ಓಡಾಟ

ಮುಂಬಯಿ, ಜೂ.21 - ಬೃಹನ್ಮುಂಬಯಿ ವಿದ್ಯುತ್ ಸರಬರಾಜು ಮತ್ತು ಸಾರಿಗೆ (ಬೆಸ್ಟ್) ಸಂಸ್ಥೆಯು ರವಿವಾರ ರಾಷ್ಟ್ರೀಯ ಅರ್ಹತಾ-ಪ್ರವೇಶ ಪರೀಕ್ಷೆ (ನೀಟ್) ಮರುಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗಾಗಿ ವಿಶೇಷ ಸೇವೆಗಳನ್ನು ಏರ್ಪಡಿಸಿದ್ದು,ಅವರ ಸುಗಮ ಪ್ರಯಾಣಯನ್ನು ಖಚಿತಪಡಿಸಿಕೊಳ್ಳಲು ಸುಮಾರು 180 ಬಸ್‌ಗಳ ಒಡಾಟವನ್ನು ವ್ಯವಸ್ಥೆ ಮಾಡಿತ್ತು.

ಶುಕ್ರವಾರದಿಂದ ಮುಷ್ಕರ ನಡೆಸುತ್ತಿರುವ ಪಾಲಿಕೆ ಸ್ವಾಮ್ಯದ ಸಾರಿಗೆ ವ್ಯವಸ್ಥೆಯ ವಿಶೇಷ ಸೇವೆಗಳನ್ನು ಮುಂಬಯಿಯ 63 ಪರೀಕ್ಷಾ ಕೇಂದ್ರಗಳಲ್ಲಿ ಹಾಜರಾಗುವ ವಿದ್ಯಾರ್ಥಿಗಳಿಗಾಗಿ ಯೋಜಿಸಲಾಗಿತ್ತು ಎಂದು ಬೃಹನ್ಮುಂಬಯಿ ಮುನ್ಸಿಪಲ್ ಕಾರ್ಪೊರೇಷನ್ (ಬಿಎಂಸಿ) ಪ್ರಕಟಣೆಯಲ್ಲಿ ತಿಳಿಸಿದೆ.

ನಗರದಾದ್ಯಂತ ಪರೀಕ್ಷಾ ಕೇಂದ್ರಗಳಿಗೆ ಪ್ರಯಾಣಿಸಲು ಅನುಕೂಲವಾಗುವಂತೆ ಬೆಸ್ಟ್ 24



ಮಾರ್ಗಗಳಲ್ಲಿ 60 ಬಸ್‌ಗಳನ್ನು ನಿಯೋಜಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಸುಗಮ ಪ್ರಯಾಣವನ್ನು ಖಚಿತಪಡಿಸಿಕೊಳ್ಳಲು ಹಗಲಿನಲ್ಲಿ ಸುಮಾರು 180 ಬಸ್ ಟ್ರಿಪ್‌ಗಳನ್ನು ನಿರ್ವಹಿಸಲಾಯಿತು. ಕುರ್ಲಾ, ದಾದರ್, ಮಲಾಡ್ ಮತ್ತು ಮುಲುಂಡ್ ಸೇರಿದಂತೆ ಪ್ರಮುಖ ಸ್ಥಳಗಳಿಂದ ವಿವಿಧ ಪರೀಕ್ಷಾ ಕೇಂದ್ರಗಳಿಗೆ ನೇರ ಬಸ್ ಸಂಪರ್ಕವನ್ನು ಒದಗಿಸಲಾಗಿದೆ ಎಂದು ಪ್ರಕಟಣೆ ವಿವರಿಸಿದೆ.

ಶನಿವಾರ, ಬೆಸ್ಟ್ ಸರಕಾರಿ ಸ್ವಾಮ್ಯದ ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ (ಎಂಎಸ್‌ಆರ್‌ಟಿಸಿ) 100ಕ್ಕೂ ಹೆಚ್ಚು ಬಸ್‌ಗಳಿಗಾಗಿ ಕೋರಿತ್ತು. ಇದರಲ್ಲಿ 60 ಬಸ್‌ಗಳು ಬೆಸ್ಟ್ ನೌಕರರ ಮುಷ್ಕರದ ನಡುವೆ ನೀಟ್ ಅಭ್ಯರ್ಥಿಗಳಿಗೆ ವಿಶೇಷ ಸೇವೆಗಳನ್ನು ಒದಗಿಸಲು ಸೇರಿವೆ. ನೀಟ್‌ಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ, ಬೆಸ್ಟ್ ಮುಂಬಯಿನಾದ್ಯಂತ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಮತ್ತು ಸಂಜೆ 5 ರಿಂದ ಸಂಜೆ 7 ಗಂಟೆಯವರೆಗೆ ವಿಶೇಷ ಬಸ್‌ಗಳನ್ನು ಯೋಜಿಸಿತ್ತು. ವಿಶೇಷ ಬಸ್ ಸೇವೆಗಳನ್ನು ಪಡೆದುಕೊಳ್ಳಲು ಮತ್ತು ತಮ್ಮ ಪರೀಕ್ಷಾ ಕೇಂದ್ರಗಳನ್ನು ಸುರಕ್ಷಿತವಾಗಿ ಮತ್ತು ಸಮಯಕ್ಕೆ ತಲುಪಲು ವಿದ್ಯಾರ್ಥಿಗಳಿಗೆ ಮನವಿ ಮಾಡಿದೆ. 5ನೇ ಪುಟಕ್ಕೆ

ರೋಗ ದೂರವಿಡಲು ಯೋಗ 'ದಿವ್ಯ ಔಷಧ'; ಮುಖ್ಯಮಂತ್ರಿ ಫಡ್ನವೀಸ್

ಜುಹೂಬೀಚ್‌ನ ಫುಡ್ ಕೋರ್ಟ್ ಬಳಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಮುಂಬಯಿ,ಜೂ.21 - ಜೀವನಶೈಲಿಯಲ್ಲಿನ ಬದಲಾವಣೆಗಳಿಂದಾಗಿ ರೋಗಗಳ ಪ್ರಮಾಣ ಹೆಚ್ಚಾಗಿದೆ. ಈ ರೋಗಗಳನ್ನು ದೂರವಿಡಲು ಯೋಗವೇ ದಿವ್ಯ ಔಷಧ. ಆದ್ದರಿಂದ, ನಿಯಮಿತವಾಗಿ ಯೋಗ ಮಾಡುವ ಮೂಲಕ ಜೀವನಶೈಲಿ ಕಾಯಿಲೆಗಳನ್ನು ದೂರವಿಡಬೇಕು ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಫಡ್ನವೀಸ್ ಯೋಗದ ಮಹತ್ವವನ್ನು ಒತ್ತಿ ಹೇಳಿದರು.

ಜುಹೂ ಬೀಚ್‌ನ ಫುಡ್ ಕೋರ್ಟ್ ಬಳಿ ಆಯೋಜಿಸಲಾಗಿದ್ದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಂದರ್ಭದಲ್ಲಿ ಮುಖ್ಯಮಂತ್ರಿ ಫಡ್ನವೀಸ್ ಮಾತನಾಡುತ್ತಿದ್ದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ತಿನ ಸಭಾಪತಿ ರಾಮ್ ಶಿಂಧೆ, ಸಂಸದ ರವೀಂದ್ರ ವೈಕರ್, ಶಾಸಕ ಅಮಿತ್ ಸಾಟಮ್, ಶಿವಪ್ರಕಾಶ್, ಕೇಶವ್ ಉಪಾಧ್ಯೆ,



ಪವನ್ ತ್ರಿಪಾಠಿ, ದೀಪ್ತಿ ವೈಕರ್, ಉಷಾ ಬೆನ್ ಮುಂತಾದವರು ಹಾಜರಿದ್ದರು.

ಯೋಗವನ್ನು ನಿರಂತರವಾಗಿ ಅಭ್ಯಾಸ ಮಾಡುವ ವ್ಯಕ್ತಿಯು ತಮ್ಮ ಮಾನಸಿಕ ಸ್ಥಿತಿಯನ್ನು ಲೆಕ್ಕಿಸದೆ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಬಹುದು. ಆದ್ದರಿಂದ, ಯೋಗ ವಿಜ್ಞಾನವನ್ನು ಉತ್ತೇಜಿಸಬೇಕು ಮತ್ತು ಹರಡಬೇಕು ಎಂದ ಫಡ್ನವೀಸ್ ಅವರು, ನಿಯಮಿತವಾಗಿ ಯೋಗವನ್ನು ಅಭ್ಯಾಸ ಮಾಡುವ ಮೂಲಕ ನಮ್ಮ ದೇಹವನ್ನು ಆರೋಗ್ಯವಾಗಿ ಮತ್ತು ಮನಸ್ಸನ್ನು ಸಂತೋಷವಾಗಿಡಲು ಮನವಿ ಮಾಡಿದರು.

ಜೂ.21 ರಂದು ವಿಶ್ವಾದ್ಯಂತ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲು ಭಾರತವು ವಿಶ್ವ ಸಂಸ್ಥೆಯಲ್ಲಿ ಪ್ರಸ್ತಾಪಿಸಿತು. ವಿಶ್ವಸಂಸ್ಥೆಯ ಇತಿಹಾಸದಲ್ಲಿ ಅತಿ ಕಡಿಮೆ ಸಮಯದಲ್ಲಿ ಮತ್ತು ಯಾವುದೇ ವಿರೋಧವಿಲ್ಲದೆ ಅಂಗೀಕರಿಸಲ್ಪಟ್ಟ ಪ್ರಸ್ತಾಪ ಇದಾಗಿದೆ. ಭಾರತ ನೀಡಿದ ಪ್ರಸ್ತಾವನೆಯ ಪ್ರಕಾರ, ಇಂದು ಪ್ರಪಂಚದಾದ್ಯಂತ ಯೋಗವನ್ನು ಅಭ್ಯಾಸ ಮಾಡಲಾಗುತ್ತಿದೆ. ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಯೋಗದ ಮಹತ್ವವನ್ನು ಜಗತ್ತು ಅರ್ಥಮಾಡಿಕೊಂಡಿದೆ. ಯೋಗ ವಿಜ್ಞಾನ ಮತ್ತು ಯೋಗ ಚಿಕಿತ್ಸೆಯ ಬಗ್ಗೆ ಜಗತ್ತಿನಲ್ಲಿ 5ನೇ ಪುಟಕ್ಕೆ

ಬಂಟರ ಸಂಘ ಮುಂಬಯಿ, ಡೊಂಬಿವಲಿ ಪ್ರಾದೇಶಿಕ ಸಮಿತಿಯ ಆಶ್ರಯದಲ್ಲಿ ಸಮಾಜ ಕಲ್ಯಾಣ ಕಾರ್ಯಕ್ರಮ

ಸಮಾಜದ ಮಕ್ಕಳ ವಿದ್ಯಾರ್ಜನೆಗೆ ಸಹಾಯ ನೀಡಲು ಅಭಿಮಾನವಾಗುತ್ತಿದೆ : ಪ್ರವೀಣ್ ಭೋಜ ಶೆಟ್ಟಿ



ದೀಪ ಪ್ರಜ್ವಲಿಸಿ ಸಭಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಅತಿಥಿ ಗಣ್ಯರು,


ಹಿರಿಯಡ್ಕ ತಿಮ್ಮಪ್ಪ ಶೆಟ್ಟಿಯವರನ್ನು ಹಿರಿಯ ನಾಗರಿಕ ಸಮಿತಿಯ ವತಿಯಿಂದ ಸನ್ಮಾನಿಸಿದಾಗ,


ಸೂರ್ಯಣ್ಣ ಶೆಟ್ಟಿಯವರನ್ನು ಸನ್ಮಾನಿಸಿದಾಗ.


ಅಧ್ಯಕ್ಷರಾದ ಪ್ರವೀಣ್ ಭೋಜ ಶೆಟ್ಟಿಯವರನ್ನು ಸತ್ಕರಿಸಿದಾಗ,


ಡಾ. ದಿವಾಕರ್ ಶೆಟ್ಟಿ ಇಂದ್ರಾಳಿಯನ್ನು ಸತ್ಕರಿಸಿದಾಗ,


ಹೇಮಂತ ಶೆಟ್ಟಿ ದಂಪತಿಯನ್ನು ಸತ್ಕರಿಸಿದಾಗ,

(ಚಿತ್ರ, ವರದಿ : ರವಿ. ಬಿ. ಅಂಚನ್, ಪಡುಬಿದ್ರಿ)

ಡೊಂಬಿವಲಿ, ಜೂ. 21- 22 ವರ್ಷಗಳ ಹಿಂದೆ ಬಂಟ ಸಮಾಜದ ಅರ್ಥಿಕವಾಗಿ ಹಿಂದುಳಿದ ಮಕ್ಕಳ ಶಿಕ್ಷಣಕ್ಕಾಗಿ ಸ್ಥಾಪನೆಗೊಂಡ ಸಮಾಜ ಕಲ್ಯಾಣ ಸಮಿತಿ ಇಂದು ಸಾವಿರಾರು ಮಕ್ಕಳ ವಿದ್ಯಾಭ್ಯಾಸ, ವಿಧವೆಯರಿಗೆ, ವಿಕಲಾಂಗರಿಗೆ ಆಸರೆಯಾಗಿ ಬೆಳೆದಿದೆ. ಮಕ್ಕಳು ಸಮಾಜದಿಂದ ಪಡೆದುದನ್ನು ಮುಂದಿನ ದಿನಗಳಲ್ಲಿ ಸಮಾಜಕ್ಕೆ ಹಿಂತಿರುಗಿಸಿದಾಗ ಇಂತಹ ಕಾರ್ಯಕ್ರಮಕ್ಕೆ ನಿಜವಾದ ಅರ್ಥ ಬರುತ್ತದೆ. ಸಮಾಜದ ಮಕ್ಕಳ ಆರೋಗ್ಯ ಮತ್ತು ವಿದ್ಯಾಭ್ಯಾಸಕ್ಕಾಗಿ ಮಕ್ಕಳನ್ನು ದತ್ತು ಪಡೆಯುವ ಕಾರ್ಯ ನಡೆದಾಗ ಸಂಘಟನೆಯ ಧ್ಯೇಯ ಪೂರ್ಣಗೊಳ್ಳುತ್ತದೆ. ಬಂಟರ ಸಂಘ ಸಮಾಜ ಬಾಂಧವರು ಸುಶಿಕ್ಷಿತರಾಗ ಬೇಕೆನ್ನುವ ಉದ್ದೇಶ ದಿಂದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದೆ . ಇದರ ಲಾಭವನ್ನು ಸಮಾಜ ಬಾಂಧವರು ಪಡೆಯ ಬೇಕು. ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷರಾದ ಆನಂದ ಶೆಟ್ಟಿ ಮತ್ತು ಅವರ ಕಾರ್ಯಕಾರಿ ಸಮಿತಿ ಸಮಾಜ ಬಾಂಧವರ ಹಿತದೃಷ್ಟಿಯಿಂದ ಉತ್ತಮ ಕೆಲಸಗಳನ್ನು ಮಾಡುತ್ತಿದೆ. ಇಂದು ಕಾರ್ಯದರ್ಶಿ ಹೇಮಂತ ಶೆಟ್ಟಿಯವರು ಉಚಿತ ಸಭಾಗೃಹ ವನ್ನು ನೀಡಿ ಸಹಕಾರ ನೀಡಿದ್ದಾರೆ. ಸಮಾಜದ ಮಕ್ಕಳ ವಿದ್ಯಾರ್ಜನೆಗೆ ಸಹಾಯ ನೀಡಲು ಅಭಿಮಾನವಾಗುತ್ತಿದೆ ಎಂದು ಬಂಟರ ಸಂಘ ಮುಂಬಯಿ ಇದರ ಅಧ್ಯಕ್ಷರಾದ ಪ್ರವೀಣ್ ಭೋಜ ಶೆಟ್ಟಿ ನುಡಿದರು.

ಅವರು ಬಂಟರ ಸಂಘ ಮುಂಬಯಿ ಇದರ ಡೊಂಬಿವಲಿ ಪ್ರಾದೇಶಿಕ ಸಮಿತಿಯ ಅಶ್ರಯದಲ್ಲಿ ಶೈಕ್ಷಣಿಕ, ವಿಧವಾ ವೇತನ, ವಿಕಲಾಂಗರಿಗೆ ಸಹಾಯ ಹಸ್ತ ನೀಡುವ ಸಮಾಜ ಕಲ್ಯಾಣ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಿದ್ದರು.

ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷರಾದ ಡಾ. ದಿವಾಕರ ಶೆಟ್ಟಿ ಇಂದ್ರಾಳಿ ಮಾತನಾಡುತ್ತಾ,ಕಳೆದ ಮೂರು ವರ್ಷದಲ್ಲಿ ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷ ಸ್ಥಾನದಲ್ಲಿ ಕೆಲಸ ಮಾಡಿದ ತೃಪ್ತಿ ನನಗಿದೆ.ಅರ್ಥಿಕವಾಗಿ ಹಿಂದುಳಿದ ಸಮಾಜದ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಸಹಾಯ ನೀಡುವ ಕೆಲಸ ದೇವರ ಕೆಲಸ ಎಂದು ಭಾವಿಸುತ್ತೇನೆ. ಕಳೆದ ವರ್ಷ ಒಂದು ಕೋಟಿ ಎಪ್ಪತ್ತು ಲಕ್ಷ ಸಮಾಜ ಬಾಂಧವರಿಗೆ ನೀಡಿದರೆ ಈ ವರ್ಷ ಎರಡು ಕೋಟಿ ಇಪ್ಪತ್ತೆರಡು ಲಕ್ಷ ರೂಪಾಯಿ ನೀಡಿದ್ದೇವೆ. ಸಂಘ ಸಮಾಜ ಪ್ರತಿಯೊಬ್ಬ ವಿದ್ಯಾರ್ಥಿ ಸುಶಿಕ್ಷಿತನಾಗ ಬೇಕೆಂಬ ಉದ್ದೇಶದಿಂದ ಇಂತಹ ಉತ್ತಮ ಕೆಲಸಗಳನ್ನು ಮಾಡುತ್ತಿದೆ. ಸಂಘ ನಮಗೆ ಏನು ಕೊಟ್ಟಿದೆ ಎನ್ನುವವರು ನಾನು ಸಂಘಕ್ಕೆ ಎನು ಕೊಟ್ಟಿದ್ದೇನೆ ಎಂದು ಚಿಂತಿಸುವ ಕಾಲ ಬಂದಿದೆ. ಇನ್ನೊಬ್ಬರ ಕಷ್ಟ ಗಳಿಗೆ ಸಹಾಯ ನೀಡಿದಾಗ ಸಿಗುವ ಅನಂದ ಬೇರೆ ಯಾವುದೇ ಕೆಲಸದಲ್ಲಿ ಸಿಗುವುದಿಲ್ಲ ಎಂದರು.


ಆನಂದ ಶೆಟ್ಟಿ ದಂಪತಿಯನ್ನು ಸತ್ಕರಿಸಿದಾಗ


ಅರುಣ್ ಶೆಟ್ಟಿ ಪಡುಕುಡೂರು ದಂಪತಿಯನ್ನು ಸತ್ಕರಿಸಿದಾಗ

ಕಾರ್ಯಾಧ್ಯಕ್ಷರ ಮಾತು :
ನನ್ನ ಕಾರ್ಯಾಧ್ಯಕ್ಷರ ಕಾಲಾವಧಿಯಲ್ಲಿ ಕಾರ್ಯಕಾರಿ ಸಮಿತಿ, ಮಹಿಳಾ ವಿಭಾಗ, ಯುವ ವಿಭಾಗ, ದಾನಿಗಳು ಎಲ್ಲರೂ ಉತ್ತಮ ಸಹಕಾರ ನೀಡಿ ಅತ್ಯುತ್ತಮ ಪ್ರಾದೇಶಿಕ ಸಮಿತಿ ಎಂಬ ಹೆಗ್ಗಳಿಕೆ ಬರುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ಸಮಾಜ ಕಲ್ಯಾಣ ಸಮಿತಿ ಪ್ರತಿ ವರ್ಷ 25 ಲಕ್ಷಕ್ಕೂ ಮಿಕ್ಕಿ ಶೈಕ್ಷಣಿಕ ಸಹಾಯವನ್ನು ನೀಡುತ್ತಿದೆ. ಯಾವ ಸಮಾಜ ಬಾಂಧವರಿಗೆ ಅಗತ್ಯವಿದೆಯೋ ಅವರು ಮಾತ್ರ ಸಹಾಯವನ್ನು ಪಡೆಯ ಬೇಕು. ನನ್ನ ಕಾರ್ಯಾವಧಿಯಲ್ಲಿ ನನಗೆ ಸಹಕಾರ ನೀಡಿ ಸಹಕರಿಸಿದ ಸರ್ವರಿಗೂ ಮನದಾಳದ ವಂದನೆಗಳು
- ಆನಂದ ಶೆಟ್ಟಿ ಎಕ್ಕಾರ್, (ಕಾರ್ಯಾಧ್ಯಕ್ಷರು ಡೊಂಬಿವಲಿ ಪ್ರಾದೇಶಿಕ ಸಮಿತಿ)

ಪೂರ್ವ ವಲಯ ಪ್ರಾದೇಶಿಕ ಸಮಿತಿಗಳ ಸಮನ್ವಯಕ ಸುಕುಮಾರ್ಎನ್. ಶೆಟ್ಟಿ ಮಾತನಾಡುತ್ತಾ, ಪ್ರಾರಂಭದಲ್ಲಿ ಶಿಕ್ಷಣಕ್ಕಾಗಿ ಸಮಾಜ ಬಾಂಧವರಿಂದ 700 ಅರ್ಜಿಗಳು ಬರುತ್ತಿದ್ದವು . ಆದರೆ ಈಗ ಕೇವಲ 330 ಅರ್ಜಿಗಳು ಬರುತ್ತಿದೆ . ಅರ್ಜಿಗಳ ಸಂಖ್ಯೆ ಕಡಿಮೆಯಾಗಿದೆ. ಅದುದರಿಂದ ಶಿಕ್ಷಣಕ್ಕಾಗಿ ಸ್ವಲ್ಪ ಪ್ರಮಾಣದ ಮೊತ್ತವನ್ನು ಹೆಚ್ಚಿಸುವ ಕಾರ್ಯ ಸಮಿತಿ ಮಾಡ ಬೇಕು. ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷರಾದ ಆನಂದ ಶೆಟ್ಟಿ ಎಕ್ಕಾರ್ ಅವರ ಮುಂದಾಳುತ್ವದಲ್ಲಿ ಪ್ರಾದೇಶಿಕ ಸಮಿತಿ ಉತ್ತಮ ಕೆಲಸಗಳನ್ನು ಮಾಡುತ್ತಿದೆ.ಕಳೆದ ಎರಡು ವರ್ಷಗಳಿಂದ ಹೇಮಂತ ಶೆಟ್ಟಿಯವರು ಉಚಿತ ಸಭಾಗೃಹ ನೀಡಿ ಮಾನವೀಯತೆಯನ್ನು ಮೆರೆದಿದ್ದಾರೆ. ಕಾರ್ಯಕಾರಿ ಸಮಿತಿ ಸದಸ್ಯರಾದ ಉಪ ಕಾರ್ಯಾಧ್ಯಕ್ಷರಾದ ಪ್ರಭಾಕರ ಆರ್. ಶೆಟ್ಟಿ, ಸಚಿನ್ ಶೆಟ್ಟಿ, ಜಯಂತ್ ಶೆಟ್ಟಿ, ಪ್ರಭಾಕರ ಶೆಟ್ಟಿ ಕಲ್ಲಡ್ಕ, ಮಹಿಳಾ ವಿಭಾಗ, ಯುವ ವಿಭಾಗ ಉತ್ತಮ ಕೆಲಸಗಳನ್ನು ಮಾಡಿ ಅತ್ಯುತ್ತಮ ಪ್ರಾದೇಶಿಕ ಸಮಿತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಲು ಬಹಳಷ್ಟು ಶ್ರಮಿಸಿದ್ದಾರೆ. ಇನ್ನಷ್ಟು ಕೆಲಸಗಳನ್ನು ಮಾಡಿ ಪ್ರಾದೇಶಿಕ ಸಮಿತಿಯನ್ನು ಇನ್ನಷ್ಟು ಬಲ ಪಡಿಸೋಣ ಎಂದರು.

ಪ್ರಾದೇಶಿಕ ಸಮಿತಿಯ ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷರಾದ ಅರುಣ್ ಶೆಟ್ಟಿ ಪಡುಕುಡೂರು ಪ್ರಸ್ತಾವಿಕ ಮಾತುಗಳನ್ನಾಡುತ್ತಾ ,ಸಮಾಜದ ಮಕ್ಕಳು ಸುಶಿಕ್ಷಿತರಾಗ ಬೇಕು ಎನ್ನುವ ಉದ್ದೇಶದಿಂದ ಸಂಘ ಸದಾ ಸಹಾಯ ಹಸ್ತವನ್ನು ನೀಡುತ್ತಾ ಬಂದಿದೆ. ಕಳೆದ ಮೂರು ವರ್ಷದಲ್ಲಿ ಸುಮಾರು 80 ಲಕ್ಷ ರೂಪಾಯಿಗಳನ್ನು ನೀಡಿದೆ.ಪ್ರಾದೇಶಿಕ ಸಮಿತಿಯ ಸದಸ್ಯರು ಸುಮಾರು 62 ವಿದ್ಯಾರ್ಥಿಗಳನ್ನು ದತ್ತು ಸ್ವೀಕರಿಸಿ ಕಳೆದ ಮೂರು ವರ್ಷದಲ್ಲಿ ಒಂಭತ್ತು ಲಕ್ಷ ಮೂವತ್ತು ಸಾವಿರ ರೂಪಾಯಿ ನೀಡಿದೆ . ಇಂತಹ ಉತ್ತಮ ಕೆಲಸ ಕಾರ್ಯವನ್ನು ಮಾಡಲು ನನಗೆ ಸಹಾಯ ನೀಡಿದ ಎಲ್ಲರಿಗೂ ಮನದಾಳದ ವಂದನೆಗಳು ಎಂದರು.

ಕಾರ್ಯಾಧ್ಯಕ್ಷರಾದ ಆನಂದ ಶೆಟ್ಟಿ ಎಕ್ಕಾರ್ ಅತಿಥಿಗಳನ್ನು ಸ್ವಾಗತಿಸಿದರು.

ಇದೇ ಸಂದರ್ಭದಲ್ಲಿ ಹಿರಿಯಡ್ಕ ದರ್ಕಾಸು ಮನೆ ತಿಮ್ಮಪ್ಪ ಶೆಟ್ಟಿ ಮತ್ತು ಕೌಡೂರು ಸೂರ್ಯಣ್ಣ ಶೆಟ್ಟಿಯವರನ್ನು ಬಂಟರ ಸಂಘ ಹಿರಿಯ ನಾಗರಿಕ ಸಮಿತಿಯ ಅಶ್ರಯದಲ್ಲಿ ಸಮಿತಿಯ ಕಾರ್ಯಾಧ್ಯಕ್ಷರಾದ ಕೃಷ್ಣ ಶೆಟ್ಟಿ ಮತ್ತು ಡಾ. ಪ್ರಭಾಕರ್ ಶೆಟ್ಟಿಯವರ ಮುಂದಾಳುತ್ವದಲ್ಲಿ ಸನ್ಮಾನಿಸಲಾಯಿತು ಹಾಗೂ ದಾನಿಗಳನ್ನು, ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷರಾದ ಡಾ. ದಿವಾಕರ ಶೆಟ್ಟಿ ಇಂದ್ರಾಳಿ, ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷರಾದ ಅನಂದ ಶೆಟ್ಟಿ, ಲತಾ ಅನಂದ ಶೆಟ್ಟಿ ದಂಪತಿ, ಪ್ರಾದೇಶಿಕ ಸಮಿತಿಯ ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷರಾದ ಅರುಣ್ ಶೆಟ್ಟಿ ಪಡುಕುಡೂರು ದಂಪತಿ, ಉಚಿತ ಸಭಾಗೃಹ ನೀಡಿ ಸಹಕರಿಸಿದ ಹೇಮಂತ ಶೆಟ್ಟಿ ದಂಪತಿಯನ್ನು ವಿಶೇಷವಾಗಿ ಸತ್ಕರಿಸಲಾಯಿತು.

ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷರಾದ ಡಾ. ದಿವಾಕರ ಟಿ. ಶೆಟ್ಟಿ ಇಂದ್ರಾಳಿ, ಸಿ.ಎಸ್ ಉತ್ತಮ್ ಶೆಟ್ಟಿ, ಜಯಪ್ರಕಾಶ್ ಶೆಟ್ಟಿ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷರು ಮತ್ತು ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷರಾದ ಅರುಣ್ ಶೆಟ್ಟಿ ಪಡುಕುಡೂರು ಇವರಿಗೆ ಚೆಕ್ ಹಸ್ತಾಂತರಿಸಿದರು.

ಅರತಿ ರೈ ಯವರ ಪ್ರಾರ್ಥನೆಯೊಂದಿಗೆ ಹಾಗೂ ಬಂಟ ಗೀತೆಯೊಂದಿಗೆ ವೇದಿಕೆಯ ಮೇಲಿದ್ದ ಗಣ್ಯರು ದೀಪ ಪ್ರಜ್ವಲಿಸಿ ಸಭಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ವೇದಿಕೆಯಲ್ಲಿ ಮಹೇಶ್ ಎಸ್. ಶೆಟ್ಟಿ, ಡಾ. ಆರ್.ಕೆ. ಶೆಟ್ಟಿ, ಗಿರೀಶ್ ಶೆಟ್ಟಿ ತೆಳ್ಳಾರ್, ಶಶಿಧರ್ಶೆಟ್ಟಿ ಇನ್ನಂಜೆ, ಚಿತ್ರಾ ಆರ್. ಶೆಟ್ಟಿ, ಕರುಣಾಕರ ಶೆಟ್ಟಿ, ಪ್ರಭಾಕರ್. ಆರ್. ಶೆಟ್ಟಿ, ಸಚಿನ್ ಶೆಟ್ಟಿ, ಜಯಂತ್ ಶೆಟ್ಟಿ, ಪ್ರಭಾಕರ್ಶೆಟ್ಟಿ ಕಲ್ಲಡ್ಕ, ಯೋಗಿನಿ ಎಸ್. ಶೆಟ್ಟಿ, ಸಿ.ಎಸ್. ಉತ್ತಮ್ ಶೆಟ್ಟಿ, ಜಯಪ್ರಕಾಶ್ ಶೆಟ್ಟಿ, ವಿಕ್ಷಿತಾ ಶೆಟ್ಟಿ, ಉಪಸ್ಥಿತರಿದ್ದರು. ಇದಕ್ಕೂ ಮೊದಲು ಮಕ್ಕಳಿಂದ ವಿವಿಧ ನೃತ್ಯ ಜರಗಿತು. ನೃತ್ಯ ಕಾರ್ಯಕ್ರಮವನ್ನು ವಿಕ್ಷಿತಾ ಶೆಟ್ಟಿ ನಿರೂಪಿಸಿದರು, ಸಭಾ ಕಾರ್ಯಕ್ರಮವನ್ನು ಹೇಮಂತ ಶೆಟ್ಟಿ ನಿರೂಪಿಸಿ ವಂದಿಸಿದರು.

ವಸಾಯಿ ಹರೀಶ್ ಪಾಂಡು ಶೆಟ್ಟಿಯವರ 'ಫಾರ್ಮ್ ಹೌಸ್ ಗ್ರೂಪ್ ಆಫ್ ಹೋಟೆಲ್ ಆ್ಯಂಡ್ ರೆಸ್ಟೋರೆಂಟ್ಸ್' ಆಡಳಿತದಲ್ಲಿ ವಸಾಯಿಯಲ್ಲಿ 'ಗೋಲ್ಡನ್ ಬ್ಯಾಂಕ್ವೆಟ್ಸ್' ಶುಭಾರಂಭ













(ಚಿತ್ರ, ವರದಿ: ದಿನೇಶ್ ಕುಲಾಲ್)

ವಸಾಯಿ, ಜೂ.21- ವಸಾಯಿ ತಾಲೂಕಿನ ಸಮಾಜ ಸೇವೆ, ಧಾರ್ಮಿಕ ಸೇವೆ , ಶೈಕ್ಷಣಿಕ ಸೇವೆ ಮೂಲಕ ತುಳು ಕನ್ನಡಿಗರಿಗೆ ಚಿರಪರಿಚಿತರಾಗಿರುವ ವಸಾಯಿ ಶೆಟ್ಟಿ ಜನರಲ್ ಸ್ಟೋರ್‌ನ ಮಾಲಿಕರಾಗಿರುವ ಪಾಂಡು ಎಲ್ ಶೆಟ್ಟಿ ಅವರ ಪುತ್ರರಾದ ಹರೀಶ್ ಪಾಂಡು ಶೆಟ್ಟಿ ಮತ್ತು ಭರತ್ ಪಾಂಡು ಶೆಟ್ಟಿ ಪ್ರಾರಂಭಿಸಿರುವ 'ಫಾರ್ಮ್ ಹೌಸ್ ಗ್ರೂಪ್ ಆಫ್ ಹೋಟೆಲ್ ಆ್ಯಂಡ್ ರೆಸ್ಟೋರೆಂಟ್ಸ್' ಆಡಳಿತದಲ್ಲಿ ವಸಾಯಿ ಪೂರ್ವದ ರುದ್ರ ಶೆಲ್ಟರ್ ಬಿಸಿನೆಸ್ ಹೋಟೆಲ್ ಬಳಿಯ ರೆಂಜ್ ಆಫೀಸಿನ ಸಮೀಪ ಇರುವ ಹೋಟೆಲ್ ಫಾರ್ಮ್ ಹೌಸ್ ತಳಮಹಡಿಯಲ್ಲಿ 1000 ಆಸನಗಳಿರುವ ಸುಸಜ್ಜಿತ ಹವಾ ನಿಯಂತ್ರಿತ 'ಗೋಲ್ಡನ್ ಬ್ಯಾಂಕ್ವೆಟ್ಸ್' ಸಭಾಂಗಣ ಜೂ.20 ರಂದು ಶನಿವಾರ ಸತ್ಯನಾರಾಯಣ ಮಹಾಪೂಜೆಯೊಂದಿಗೆ ಶುಭಾರಂಭಗೊಂಡಿದೆ.

ಮುಂಬೈ, ಪಾಲ್ಘರ್, ವಸಾಯಿ ಹಾಗೂ ಬೊರಿವಲಿಯಲ್ಲಿ ಜನಪ್ರಿಯತೆ ಗಳಿಸಿರುವ 'ಫಾರ್ಮ್‌ಹೌಸ್ ಗ್ರೂಪ್ ಆಫ್ ಹೋಟೆಲ್ ಆ್ಯಂಡ್ ರೆಸ್ಟೋರೆಂಟ್ಸ್' ಇದರ ಆಡಳಿತ ನಿರ್ದೇಶಕ ಹರೀಶ್ ಪಾಂಡು ಶೆಟ್ಟಿ ಅವರ ಪತ್ನಿ ಮಧುರಾ ಹರೀಶ್ ಶೆಟ್ಟಿ ದಂಪತಿಯ ಯಜಮಾನಿಕೆಯಲ್ಲಿ ವೇದಮೂರ್ತಿ ಕೃಷ್ಣರಾಜ ತಂತ್ರಿ ಪೂಜಾ ಕಾರ್ಯಗಳನ್ನು ನಡೆಸಿದರು.





'ಫಾರ್ಮ್‌ಹೌಸ್ ಗ್ರೂಪ್ ಆಫ್ ಹೋಟೆಲ್ ಆ್ಯಂಡ್ ರೆಸ್ಟೋರೆಂಟ್ಸ್' ಆಡಳಿತದಲ್ಲಿ 'ಗೋಲ್ಡನ್ ಬ್ಯಾಂಕ್ವೆಟ್ಸ್' ಸಂಚೆ ಶುಭಾರಂಭಗೊಂಡ ಸಂದರ್ಭದಲ್ಲಿ ವಸಾಯಿ ತಾಲೂಕಿನ ರಾಜಕೀಯ ನಾಯಕರು ವಿವಿಧ ಸಂಘ ಸಂಸ್ಥೆಯ ಪದಾಧಿಕಾರಿಗಳು, ಮುಂಬೈ , ಮಹಾರಾಷ್ಟ್ರ, ವಸಾಯಿ ತಾಲೂಕಿನ ಹೋಟೆಲ್ ಅಸೋಸಿಯೇಷನ್ ಪದಾಧಿಕಾರಿಗಳು, ಪ್ರತಿಷ್ಠಿತ ಉದ್ಯಮಿಗಳು ಆಗಮಿಸಿ ಶುಭ ಹಾರೈಸಿದರು.

ಆಗಮಿಸಿದ ಎಲ್ಲಾ ಅತಿಥಿ ಗಣ್ಯರನ್ನು ಹಿತೈಷಿಗಳನ್ನು ಪಾಂಡು ಎಲ್ ಶೆಟ್ಟಿ, ಪದ್ಮಾವತಿ ಪಾಂಡು ಶೆಟ್ಟಿ ,ಹರೀಶ್ ಪಾಂಡು ಶೆಟ್ಟಿ ,ಮಧುರಾ ಹರೀಶ್ ಶೆಟ್ಟಿ, ಋಷಿ ಹರೀಶ್ ಶೆಟ್ಟಿ ,ಹೃದಯ ಹರೀಶ್ ಶೆಟ್ಟಿ ,ಭರತ್ ಪಾಂಡು ಶೆಟ್ಟಿ ,ನವ್ಯಾ ಭರತ್ ಶೆಟ್ಟಿ , ಸೀಯಾ ಭರತ್ ಶೆಟ್ಟಿಯವರು ಆತ್ಮೀಯವಾಗಿ ಸ್ವಾಗತಿಸಿ ಸಭಾಂಗಣದ ಎಲ್ಲಾ ವ್ಯವಸ್ಥೆಗಳನ್ನು ವಿವರಿಸುತ್ತಾ ವಸಾಯಿ ತಾಲೂಕಿನ ಗ್ರಾಹಕರಿಗೆ ಎಲ್ಲಾ ರೀತಿಯ ಅನುಕೂಲವಾಗುವಲ್ಲಿ ಇದು ಸಿದ್ಧಗೊಂಡಿದೆ ಎಂದು ತಿಳಿಸುತ್ತಿದ್ದರು.


'ಗೋಲ್ಡನ್ ಬ್ಯಾಂಕ್ವೆಟ್ಸ್'ನಲ್ಲಿ 200 ರಿಂದ 1000 ಜನರು ಸೇರಿ ಕಾರ್ಯಕ್ರಮಗಳನ್ನು ಮಾಡುವ ವಿಶೇಷ ಸೌಲಭ್ಯವಿದೆ. ತುಳು ಕನ್ನಡಿಗರಿಗೆ ವಿಶೇಷ ರಿಯಾಯಿತಿ ದರದಲ್ಲಿ ಸಭಾಂಗಣ ನೀಡಲಾಗುವುದು. ಈ ಸಭಾಂಗಣ ವಸಾಯಿ ರೈಲ್ವೆ ನಿಲ್ದಾಣದಿಂದ 10 ನಿಮಿಷಗಳ ನಡೆ ಹಾಗೂ ರಾಷ್ಟ್ರೀಯ ಹೆದ್ದಾರಿಯಿಂದ ಕೂಡ ಬಹಳ ಹತ್ತಿರವಾಗಿದೆ. ಪಾರ್ಕಿಂಗ್ ವ್ಯವಸ್ಥೆ, ಸಭಾಂಗಣದ ಪಕ್ಕದಲ್ಲಿ ನಮ್ಮದೇ ವಸತಿಗೃಹ 54 ರೂಮುಗಳಿರುವ ವ್ಯವಸ್ಥೆ ಇದೆ. ಯಾವುದೇ ಕಾರ್ಯಕ್ರಮಕ್ಕೆ ಇದು ಬಹಳ ಉಪಯೋಗವಾಗುತ್ತದೆ. ಗ್ರಾಹಕರ ಎಲ್ಲಾ ರೀತಿಯ ಅನುಕೂಲತೆಗಾಗಿ ನಮ್ಮ 'ಫಾರ್ಮ್‌ಹೌಸ್ ಗ್ರೂಪ್ ಆಫ್ ಹೋಟೆಲ್ ಆ್ಯಂಡ್ ರೆಸ್ಟೋರೆಂಟ್ಸ್' ತಂಡ ಸೇವೆ ಮಾಡುತ್ತದೆ ಎಂದು ಹರೀಶ್ ಪಾಂಡು ಶೆಟ್ಟಿಯವರು ತಿಳಿಸಿದ್ದಾರೆ.

ಶ್ರೀ ದುರ್ಗಾಪರಮೇಶ್ವರಿ -ಶನೀಶ್ವರ ದೇವಸ್ಥಾನ ದಹಿಸರ್ ರಾವಲ್ಪಾಡ ; ಭಕ್ತರ ಸಹಕಾರದಿಂದ ಹಲವಾರು ವರ್ಷಗಳಿಂದ ಸೇವೆ ನಡೆಯುತ್ತಿದೆ : ಸಂತೋಷ್ ಪೂಜಾರಿ

ಮುಂಬಯಿ, ಜೂ.21- ರಾವಲ್ಪಾಡ, ದಹಿಸರ್ ಪೂರ್ವದಲ್ಲಿ ಶ್ರೀ ಶನಿ ಮಹಾತ್ಮ ಸೇವಾ ಸಮಿತಿಯ ಸಂಚಾಲಕತ್ವದಲ್ಲಿರುವ ಶ್ರೀ ದುರ್ಗಾಪರಮೇಶ್ವರಿ ಶನೀಶ್ವರ ದೇವಸ್ಥಾನದಲ್ಲಿ ಕಳೆದ ಹಲವು ವರ್ಷಗಳಿಂದ ಕೊಡುವ ಸ್ಥಳೀಯ ಮಕ್ಕಳಿಗೆ ಒಂದನೇ ತರಗತಿಯಿಂದ ಹತ್ತನೇ ತರಗತಿಯ ಮಕ್ಕಳಿಗೆ ಉಚಿತ ನೋಟು ಪುಸ್ತಕ ವಿತರಣೆಯು ಜೂ 14ರ ರವಿವಾರ ಬೆಳಿಗ್ಗೆ ಸಮಿತಿಯ ಅಧ್ಯಕ್ಷರಾದ ಸಂತೋಷ್ ಪೂಜಾರಿಯವರ ಮುಂದಾಳತ್ವದಲ್ಲಿ ಮಂದಿರದಲ್ಲಿ ಜರಗಿತ್ತು.

ಪ್ರಥಮದಲ್ಲಿ ಮಂದಿರದ ಪ್ರಧಾನ ಅರ್ಚಕರಾದ ವಿಜಯ ಉಪಾಧ್ಯಾಯ ಭಟ್ ಹಾಗೂ ತೇಜಸ್ ಭಟ್ ರವರ ಪ್ರಾರ್ಥನೆಯೊಂದಿಗೆ ಮೊದಲ್ಗೊಂಡು. ನಂತರ ಮಕ್ಕಳನ್ನು ಸರತಿ ಸಾಲಿನಲ್ಲಿ ನಿಲ್ಲಿಸಿ ಸುಮಾರು 700 ಬಡ ಮಕ್ಕಳಿಗೆ ನೋಟು ಪುಸ್ತಕ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಅಧ್ಯಕ್ಷರು ನಮ್ಮ ಸಮಿತಿಯಿಂದ ಇಂತಹ ಹಲವು ಕಾರ್ಯಕ್ರಮವು ಧಾನಿಗಳ ಸಹಾಯದಿಂದ ಹಾಗೂ ಭಕ್ತರಿಂದ ನೆರವಿನಿಂದ ಸಾಧ್ಯವಾಗಿದೆ ಎಂದರು. ಎಲ್ಲಾ ಕಾರ್ಯವು ಯಶಸ್ವಿಯಾಗಲು ಸಹಕರಿಸಿದ ಉಪಾಧ್ಯಕ್ಷರಾದ ಶೇಖರ್ಪೂಜಾರಿ,ಕೋಶಾಧಿಕಾರಿ ದೀಪಕ್ ಪೂಜಾರಿ, ಜತೆ ಕಾರ್ಯದರ್ಶಿ ಉಷಾ ಡಿ. ಪೂಜಾರಿ, ಜತೆ ಕೋಶಾಧಿಕಾರಿ ಸೌಮ್ಯ ಎಸ್. ಶೆಟ್ಟಿ ಹಾಗೂ ಪ್ರದ್ನಾಯ ಕೋಟಿಯಾನ್ ಅಲ್ಲದೆ ಸಮಿತಿ ಸದಸ್ಯರಾದ ಸಿ. ಎನ್. ಪೂಜಾರಿ, ಕರುಣಾಕರ್ಅಮೀನ್, ಶೇಖರ್ಪಿ. ಶೆಟ್ಟಿ, ಲಕ್ಷ್ಮಣ್ ಪೂಜಾರಿ, ರವಿ ಅಮೀನ್, ಉಮೇಶ್ ಅಮೀನ್ , ಶೇಖರ ಸಾಲಿಯಾನ್,ಯೋಗೇಶ್ ಸಾಲಿಯಾನ್, ಗೋಪಾಲ್ ಬಿಲ್ಲವ, ಅಮಿತ ಶೆಟ್ಟಿ, ಅಂಕಿತ ಸಾಲಿಯಾನ್, ಮಾನ್ವಿತಾ ಪೂಜಾರಿ, ಸ್ನೇಹಿತ್ ಸುವರ್ಣ,ನಿಶಿತ್ ಪೂಜಾರಿ, ಸುರೇಶ್ ಇರ್ವತ್ತೂರ್, ಶೋಭಾ ಕೋಟಿಯಾನ್, ಸುಮತಿ ಮೂಲ್ಯ, ನಾರಾಯಣ ಪೂಜಾರಿ,ಪದ್ಮಾವತಿ ಶೆಟ್ಟಿ, ಜಯ ಸುವರ್ಣ,ಶ್ರೇಯಸ್ ಪೂಜಾರಿ, ಮಲ್ಲಿಕಾ ಶೇಖರ್ಸಾಲಿಯಾನ್, ಪ್ರೇಮ್ ಕುಮಾರ್ಪಟೇಲ್, ರಾಕೇಶ್ ದಾಸ್ ಹಾಗೂ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಸದಸ್ಯರಿಗೂ ಕಾರ್ಯದರ್ಶಿ ಜಯರಾಮ್ ಮೆಂಡನ್ ರವರು ಶ್ರೀ ದುರ್ಗಾಪರಮೇಶ್ವರಿ ಅಮ್ಮ ಹಾಗೂ ಪರಿವಾರ ದೇವರುಗಳು ಆಯುರಾರೋಗ್ಯ ಸುಖ ಸಂಪತ್ತು ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸಿ ಇನ್ನು ಮುಂದೆಯೂ ಸಹಕರಿಸಬೇಕೆಂದು ವಿನಂತಿಸಿ ನಂತರ ಧನ್ಯವಾದ ಸಲ್ಲಿಸಿದರು.





ಎಂಆರ್‌ಜಿ ಸಮೂಹದ ಸಂಸ್ಥಾಪಕ ಡಾ. ಕೆ. ಪ್ರಕಾಶ್ ಶೆಟ್ಟಿ ಅವರ ಉದ್ಯಮದ ಮಹತ್ವದ ಮೈಲಿಗಲ್ಲು

14 ಆಸನಗಳ ಎಂಬ್ರೇಯರ್ ಲೆಗಸಿ 650 ಖಾಸಗಿ ವಿಮಾನ ಸೇರ್ಪಡೆ





ಮಂಗಳೂರು, ಜೂ.21- ಎಂಆರ್‌ಜಿ ಸಮೂಹದ ಸಂಸ್ಥಾಪಕ ಹಾಗೂ ಅಧ್ಯಕ್ಷರಾದ ಡಾ. ಕೆ. ಪ್ರಕಾಶ್ ಶೆಟ್ಟಿ ಅವರು ತಮ್ಮ ಉದ್ಯಮ ಪಯಣದ ಮತ್ತೊಂದು ಮಹತ್ವದ ಮೈಲಿಗಲ್ಲಾಗಿ ಅಮೆರಿಕದಿಂದ ತರಿಸಲಾದ 14 ಆಸನಗಳ ಎಂಬ್ರೇಯರ್ ಲೆಗಸಿ 650 ಖಾಸಗಿ ವಿಮಾನವನ್ನು ಎಂಆರ್‌ಜಿ ಕುಟುಂಬಕ್ಕೆ ಸೇರ್ಪಡೆಗೊಳಿಸಿದರು.

ಈ ಸಂದರ್ಭದಲ್ಲಿ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರ ಸಾನ್ನಿಧ್ಯ ಹಾಗೂ ಆಶೀರ್ವಾದದೊಂದಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ಕುಟುಂಬ ಸದಸ್ಯರು, ಆಪ್ತರು ಹಾಗೂ ಹಿತೈಷಿಗಳು ಈ ಸಂಭ್ರಮದ ಕ್ಷಣಕ್ಕೆ ಸಾಕ್ಷಿಯಾದರು.

ಆತಿಥ್ಯ, ರಿಯಲ್ ಎಸ್ಟೇಟ್ ಹಾಗೂ ಮೂಲಸೌಕರ್ಯ ಕ್ಷೇತ್ರಗಳಲ್ಲಿ ದೇಶಾದ್ಯಂತ ತನ್ನದೇ ಆದ ಛಾಪು ಮೂಡಿಸಿರುವ ಎಂಆರ್‌ಜಿ ಸಮೂಹವನ್ನು ವಿನಯ, ಪರಿಶ್ರಮ ಮತ್ತು ದೂರದೃಷ್ಟಿಯೊಂದಿಗೆ ಬೆಳೆಸಿದ ಡಾ. ಪ್ರಕಾಶ್ ಶೆಟ್ಟಿ ಅವರು ಯಶಸ್ವಿ ಉದ್ಯಮಿಯಾಗಿರುವುದರ ಜೊತೆಗೆ ಸಮಾಜಮುಖಿ ಚಟುವಟಿಕೆಗಳು ಮತ್ತು ದಾನಧರ್ಮಗಳ ಮೂಲಕವೂ ಹೆಸರುವಾಸಿಯಾಗಿದ್ದಾರೆ. ವಿನಮ್ರತೆಯಿಂದ ಆರಂಭವಾದ ಅವರ ಪಯಣ ಇಂದು ದೇಶದ ವಿವಿಧ ಭಾಗಗಳಲ್ಲಿ ಹೋಟೆಲ್‌ಗಳು ಹಾಗೂ ವಿವಿಧ ಉದ್ಯಮಗಳ ಮೂಲಕ ವಿಸ್ತಾರಗೊಂಡಿದ್ದು, ಈ ಹೊಸ ಸೇರ್ಪಡೆ ಸಂಸ್ಥೆಯ ಬೆಳವಣಿಗೆ ಹಾಗೂ ಜಾಗತಿಕ ದೃಷ್ಟಿಕೋನದ ಪ್ರತೀಕವಾಗಿದೆ.

ದೀರ್ಘ ದೂರದ ಪ್ರಯಾಣ ಸಾಮರ್ಥ್ಯ ಮತ್ತು ಅತ್ಯಾಧುನಿಕ ಸೌಲಭ್ಯಗಳಿಗೆ ಹೆಸರಾದ ಎಂಬ್ರೇಯರ್ ಲೆಗಸಿ 650 ವಿಮಾನವು ಎಂಆರ್‌ಜಿ ಸಮೂಹದ ವ್ಯಾಪಾರ ಚಟುವಟಿಕೆಗಳಿಗೆ ಮತ್ತಷ್ಟು ವೇಗ ಹಾಗೂ ಸಂಪರ್ಕ ಸಾಮರ್ಥ್ಯವನ್ನು ಒದಗಿಸಲಿದೆ. ಪರಂಪರೆ, ಮೌಲ್ಯಗಳು ಮತ್ತು ಆಧುನಿಕ ದೃಷ್ಟಿಕೋನದ ಸಮನ್ವಯದೊಂದಿಗೆ ಸಾಗುತ್ತಿರುವ ಡಾ. ಕೆ. ಪ್ರಕಾಶ್ ಶೆಟ್ಟಿ ಅವರ ಸಾಧನೆಯ ಪಯಣದಲ್ಲಿ ಇದು ಮತ್ತೊಂದು ಸ್ಮರಣೀಯ ಅಧ್ಯಾಯವಾಗಿದೆ.

ಕರ್ನಾಟಕ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ 'ಮಾತೋಶ್ರೀ'ಗೆ ಭೇಟಿ; ಉದ್ಧವ್ ಠಾಕ್ರೆ ಜತೆಗೆ ಚರ್ಚೆ

ಮುಂಬಯಿ,ಜೂ.21 - ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಶನಿವಾರ ಮುಂಬಯಿಗೆ ಆಗಮಿಸಿದ್ದ ಕರ್ನಾಟಕದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉಪನಗರ ಬಾಂದ್ರಾದಲ್ಲಿರುವ ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರ ನಿವಾಸ 'ಮಾತೋಶ್ರೀ'ಗೆ ಭೇಟಿ ನೀಡಿದರು.

ಶಿವಸೇನಾ (ಯುಬಿಟಿ)ಯಲ್ಲಿ ಸಂಸದರ ವಿಭಜನೆ ಕುರಿತ ಚರ್ಚೆಗಳ ನಡುವೆ ಶನಿವಾರ ಸಂಜೆ ಮಾತೋಶ್ರೀಯಲ್ಲಿ ಈ ಮಹತ್ವದ ಭೇಟಿ ನಡೆಯಿತು.ಪಕ್ಷದ ಆರು ಲೋಕಸಭಾ ಸಂಸದರು ಏಕನಾಥ್ ಶಿಂದೆ ನೇತೃತ್ವದ ಶಿವಸೇನೆಗೆ ಸೇರಲು ಬಯಸಿರುವುದು ಪಕ್ಷವನ್ನು ಭಾರೀ ಬಿಕ್ಕಟ್ಟಿಗೆ ಸಿಲುಕಿಸಿದೆ.

ಡಿ.ಕೆ ಶಿವಕುಮಾರ್ ಅವರ ಭೇಟಿ ಸಂದರ್ಭ ಉದ್ಧವ್ ಠಾಕ್ರೆ ಜತೆಗೆ ಅವರ ಪತ್ನಿ ರಶ್ಮಿ ಠಾಕ್ರೆ, ಯುವಸೇನಾ ಮುಖ್ಯಸ್ಥ ಹಾಗೂ ಪಕ್ಷದ ಎಂಎಲ್‌ಎ ಆದಿತ್ಯ ಠಾಕ್ರೆ ಮತ್ತು ಸಂಸದ ಸಂಜಯ್ ರಾವುತ್ ಕೂಡ ಮಾತೋಶ್ರೀಯಲ್ಲಿ ಹಾಜರಿದ್ದರು. ಠಾಕ್ರೆ ಅವರು ಶಿವಕುಮಾರ್‌ಗೆ ಶಾಲು ಹೊದಿಸಿ ಹೂಗುಚ್ಛ ನೀಡಿ ಗೌರವಿಸಿದರು.

ಡಿ.ಕೆ. ಶಿವಕುಮಾರ್ ಅವರು ಮಾತೋಶ್ರೀಯಲ್ಲಿ ಪಕ್ಷದ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರನ್ನು ಭೇಟಿ ಮಾಡಿದ್ದಾರೆ. ಯುವಸೇನಾ ಮುಖ್ಯಸ್ಥ ಆದಿತ್ಯ ಠಾಕ್ರೆ ಮತ್ತು ಸಂಸದ ಸಂಜಯ್ ರಾವುತ್ ಈ ಸಂದರ್ಭದಲ್ಲಿ ಹಾಜರಿದ್ದರು ಎಂದು ಶಿವಸೇನಾ (ಯುಬಿಟಿ) ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.ಮಾತೋಶ್ರೀಗೆ ಶಿವಕುಮಾರ್ ಅವರನ್ನು ಶಿವಸೇನೆ (ಯುಬಿಟಿ) ಎಂಎಲ್‌ಎ ಸುನಿಲ್ ಪ್ರಭು ಅವರು ಬರಮಾಡಿಕೊಂಡರು.

ಡಿ ಕೆ. ಶಿವಕುಮಾರ್ ಕೂಡ ಈ ಭೇಟಿಯ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು,'ಸಾರ್ವಜನಿಕ ಹಿತಾಸಕ್ತಿಯ ವಿಷಯಗಳ ಕುರಿತು ನಾನು ಮತ್ತು ಉದ್ಧವ್ ಠಾಕ್ರೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡೆವು.ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಶ್ರೀ ಉದ್ಧವ್ ಠಾಕ್ರೆ ಮತ್ತು ಅವರ ಕುಟುಂಬವನ್ನು ಸಂಸದ ಸಂಜಯ್ ರಾವುತ್ ಅವರೊಂದಿಗೆ ಮುಂಬಯಿನಲ್ಲಿ ಭೇಟಿಯಾಗಲು ಸಂತೋಷವಾಗಿದೆ.ನಾವು ಉತ್ತಮ ಚರ್ಚೆ ನಡೆಸಿದ್ದೇವೆ ಮತ್ತು ಸಾರ್ವಜನಿಕ ಹಿತಾಸಕ್ತಿ ವಿಷಯಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡಿದ್ದೇವೆ ಎಂದು ಅದರಲ್ಲಿ ಬರೆದಿದ್ದಾರೆ.



ಕಡಬ: ಪತ್ನಿಯನ್ನು ಕೊಲೆಗೈದು ಪತಿ ಆತ್ಮಹತ್ಯೆ; ಅನಾಥವಾದ 2 ವರ್ಷದ ಹೆಣ್ಣು ಮಗು

ಕಡಬ,ಜೂ.21- ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಪತಿಯೊಬ್ಬ ತನ್ನ ಪತ್ನಿಯನ್ನು ಕೊಲೆಗೈದು ಬಳಿಕ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕಡಬ ಪೊಲೀಸ್ ಠಾಣಾ ವ್ಯಾಪ್ತಿಯ ಅಲಂಕಾರು ಗ್ರಾಮದ ಕಜೆ ಎಂಬಲ್ಲಿ ಶನಿವಾರ ಬೆಳಕಿಗೆ ಬಂದಿದೆ.

ಬಾಡಿಗೆ ಮನೆಯಲ್ಲಿ ದಂಪತಿ ಶವ ಪತ್ತೆಯಾಗಿದ್ದು, ತಮ್ಮ ಮಗು ಮಲಗಿದ್ದ ವೇಳೆ ಪತಿ ಪತ್ನಿಯನ್ನು ಕೊಂದು ಬಳಿಕ ನೇಣುಹಾಕಿಕೊಂಡಿರುವ ಬಗ್ಗೆ ಶಂಕಿಸಲಾಗಿದೆ. ಹೆತ್ತವರ ಸಾವಿನ ಕಾರಣ ಸಣ್ಣ ಮಗು ಅನಾಥವಾಗಿದೆ.

ಪತ್ನಿಯ ಶವ ನೆಲದ ಮೇಲೆ ಮತ್ತು ಪತಿಯ ಮೃತದೇಹ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಮೂಲತಃ ಕಾರ್ಕಳದ ಬಜಗೋಳಿ ನಿವಾಸಿಯಾದ ದಿನೇಶ್ ಮತ್ತು ಸಂಗೀತಾ ದಂಪತಿಗೆ 2 ವರ್ಷದ ಹೆಣ್ಣು ಮಗು ಇರುವ ಬಗ್ಗೆ ತಿಳಿದುಬಂದಿದೆ.

ಕಡಬ ಅಲಂಕಾರು ನಿವಾಸಿ ಸುಮಲತಾ (42) ನೀಡಿದ ದೂರಿನ ಪ್ರಕಾರ, ಅವರ ಸಂಬಂಧಿಕರಾದ ದಿನೇಶ್ ಮತ್ತು ಸಂಗೀತಾ (40) ದಂಪತಿ ಮಗುವಿನೊಂದಿಗೆ ಕಜೆ ಪ್ರದೇಶದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು.

ಜೂ.20ರಂದು ಬೆಳಿಗ್ಗೆ ಸಂಗೀತಾ ಅವರ ತವರು ಮನೆಯಿಂದ ದೂರವಾಣಿ ಕರೆ ಮಾಡಿದಾಗ ಯಾವುದೇ ಪ್ರತಿಕ್ರಿಯೆ ದೊರೆಯಲಿಲ್ಲ. ಇದರಿಂದ ಅನುಮಾನಗೊಂಡ ಸಂಬಂಧಿಕರು ಮನೆಗೆ ತೆರಳಿ ಪರಿಶೀಲಿಸಿದ ವೇಳೆ ಮನೆಯ ಬಾಗಿಲು ಒಳಗಿನಿಂದ ಬೀಗ ಹಾಕಿರುವುದು ಕಂಡುಬಂದಿತು. ಬಳಿಕ ಬಾಗಿಲು ತೆರೆದು ನೋಡಿದಾಗ ದಿನೇಶ್ ಅವರು ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಸಂಗೀತಾ ಅವರು ಮನೆಯೊಳಗೆ ರಕ್ತದ ಮಡುವಿನಲ್ಲಿ ಬಿದ್ದಿರುವುದು ಕಂಡುಬಂದಿದೆ. ಇಬ್ಬರೂ ಮೃತಪಟ್ಟಿರುವುದು ದೃಢಪಟ್ಟಿದೆ.



ಪ್ರಾಥಮಿಕ ತನಿಖೆಯಲ್ಲಿ ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ದಿನೇಶ್ ಅವರು ಪತ್ನಿ ಸಂಗೀತಾ ಅವರನ್ನು ಯಾವುದೋ ಆಯುಧದಿಂದ ಹತ್ಯೆಗೈದು ಬಳಿಕ ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಶಂಕಿಸಲಾಗಿದೆ. ಈ ಸಂಬಂಧ ಕಡಬ ಪೊಲೀಸ್ ಠಾಣೆಯಲ್ಲಿ ಅ.ಕ್ರ. 77/2026ರಡಿ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಕಲಂ 103(1) ಅನ್ವಯ ಕೊಲೆ ಪ್ರಕರಣ ದಾಖಲಿಸಲಾಗಿದೆ. ಅಲ್ಲದೆ ದಿನೇಶ್ ಅವರ ಸಾವಿಗೆ ಸಂಬಂಧಿಸಿ ಯುಡಿಆರ್ ಸಂಖ್ಯೆ 26/2026, ಬಿಎನ್‌ಎಸ್‌ಎಸ್ ಕಲಂ 194ರಡಿ ಪ್ರತ್ಯೇಕ ಪ್ರಕರಣ ದಾಖಲಿಸಿ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಘಟನೆಯ ಕುರಿತು ಹೆಚ್ಚಿನ ತನಿಖೆ ನಡೆಯುತ್ತಿದ್ದು, ಬಳಿಕ ನಿಖರ ಕಾರಣ ತಿಳಿದುಬರಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಮೃತಾ ಫಡ್ನವೀಸ್ ಉಪಕ್ರಮದಡಿಯಲ್ಲಿ ಯೋಗ ಕಾರ್ಯಕ್ರಮ





ಮುಂಬಯಿ,ಜೂ.21 - ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ದಿವ್ಯಜ್ ಫೌಂಡೇಶನ್ ವರ್ಲಿಯ ಎನ್‌ಎಸ್‌ಸಿಐನ ಡೋಮ್, ಎಸ್‌ವಿಪಿ ಕ್ರೀಡಾಂಗಣದಲ್ಲಿ ಭವ್ಯವಾದ ಯೋಗ ಹಾಗೂ ಧ್ಯಾನ ಕಾರ್ಯಕ್ರಮವನ್ನು ಆಯೋಜಿಸಿತ್ತು.ಈ ಕಾರ್ಯಕ್ರಮದಲ್ಲಿ ಮಹಾರಾಷ್ಟ್ರ ರಾಜ್ಯದ ಕ್ಯಾಬಿನೆಟ್ ಸಚಿವ ಮಂಗಲ್ ಪ್ರಭಾತ್ ಲೋಧಾ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ, ದಿವ್ಯಜ್ ಫೌಂಡೇಶನ್‌ನ ಕಾರ್ಯವನ್ನು ಶ್ಲಾಘಿಸಿದ ಅವರು,ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ವ್ಯಕ್ತಪಡಿಸಿದ ಭಾವನೆಯನ್ನು ಉಲ್ಲೇಖಿಸಿದರು.'ನನ್ನ ಜೀವನದ ಅದೃಷ್ಟಶಾಲಿ ಮಹಿಳೆ ನನ್ನ ಪ್ರೀತಿಯ ಮಗಳು ದಿವ್ಯಜ್' ಎಂಬ ಹೇಳಿಕೆಯಲ್ಲಿ ಪ್ರತಿಫಲಿಸುವ ಕೌಟುಂಬಿಕ ಮೌಲ್ಯಗಳು ಮತ್ತು ವಾತ್ಸಲ್ಯದ ಬಗ್ಗೆ ಅವರು ವಿಶೇಷವಾಗಿ ಉಲ್ಲೇಖಿಸಿದರು. ಆ ಮೌಲ್ಯಗಳನ್ನು ಮುಂದುವರಿಸುತ್ತಾ ಅಮೃತಾ ಫಡ್ನವಿಸ್ ಅವರ ಉಪಕ್ರಮದಲ್ಲಿ ಸ್ಥಾಪಿಸಲಾದ ದಿವ್ಯಜ್ ಫೌಂಡೇಶನ್, ಸಮಾಜದ ಹಿಂದುಳಿದ ವರ್ಗಗಳಿಗಾಗಿ ವಿವಿಧ ಕ್ಷೇತ್ರಗಳಲ್ಲಿ ಅವಿಶ್ರಾಂತವಾಗಿ ಕೆಲಸ ಮಾಡುವುದನ್ನು ಮುಂದುವರೆಸಿದೆ ಎಂದು ಅವರು ತಿಳಿಸಿದರು.

ಕಳೆದ 8 ವರ್ಷಗಳಿಂದ, ಪ್ರತಿಷ್ಠಾನವು ಶಿಕ್ಷಣ, ಆರೋಗ್ಯ, ಕೌಶಲ್ಯ ಅಭಿವೃದ್ಧಿ, ಮಹಿಳಾ ಸಬಲೀಕರಣ, ಸ್ವಚ್ಛತಾ ಅಭಿಯಾನಗಳು ಮತ್ತು ಆರ್ಥಿಕ ಸ್ವಾವಲಂಬನೆಯಂತಹ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಮಾಜ ಸೇವೆ, ಕ್ರೀಡೆ, ಸಂಗೀತ, ಯೋಗ ಮತ್ತು ಕೌಶಲ್ಯ ಅಭಿವೃದ್ಧಿಯನ್ನು ಸಂಯೋಜಿಸುವ ಮೂಲಕ, ಸಂಸ್ಥೆಯು ಸಮಗ್ರ ಅಭಿವೃದ್ಧಿಗೆ ಒಂದು ಮಾದರಿಯನ್ನು ಸ್ಥಾಪಿಸಿದೆ.

ಈ ವರ್ಷದ ಯೋಗ ದಿನದ ಕಾರ್ಯಕ್ರಮದಲ್ಲಿ ವಿಶೇಷವಾಗಿ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳ 700 ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು, ಇದು ಅವರಿಗೆ ಸಕಾರಾತ್ಮಕತೆ, ಆತ್ಮವಿಶ್ವಾಸ ಮತ್ತು ಜೀವನದಲ್ಲಿ ಹೊಸ ದಿಕ್ಕನ್ನು ನೀಡುತ್ತದೆ.

ಯೋಗವು ಕೇವಲ ವ್ಯಾಯಾಮ ಅಥವಾ ಕಾರ್ಯಕ್ರಮವಲ್ಲ, ಅದು ದೇಹ, ಮನಸ್ಸು ಮತ್ತು ಭವಿಷ್ಯವನ್ನು ಸಂಪರ್ಕಿಸುವ ಆಧ್ಯಾತ್ಮಿಕ ಅಭ್ಯಾಸವಾಗಿದೆ. ನಮ್ಮ ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿಯವರು ಈ ಅಮೂಲ್ಯ ಭಾರತೀಯ ಸಂಪ್ರದಾಯಕ್ಕೆ ಜಾಗತಿಕ ಮನ್ನಣೆ ತಂದುಕೊಟ್ಟು ಕೀರ್ತಿಗೆ ಪಾತ್ರರಾಗಿದ್ದಾರೆ.ಅವರ ಪ್ರಯತ್ನಗಳು ಯೋಗಕ್ಕೆ ಅಂತಾರಾಷ್ಟ್ರೀಯ ಮನ್ನಣೆ ನೀಡಿವೆ ಮತ್ತು ಭಾರತದ ಸಾಂಸ್ಕೃತಿಕ ಗುರುತನ್ನು ಬಲಪಡಿಸಿವೆ ಎಂದು ಅವರು ತಮ್ಮ ಭಾಷಣದಲ್ಲಿ ಹೇಳಿದರು.



ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಮಹಾರಾಷ್ಟ್ರ ರಾಜಕೀಯದ 'ಯೋಗಗುರು'.ಯೋಗದ ತತ್ವಶಾಸ್ತ್ರದಂತೆ, ಅವರು ರಾಜ್ಯದ ಪ್ರಗತಿಯಲ್ಲಿ ಸಮತೋಲನವನ್ನು ಸಾಧಿಸುವ ಮೂಲಕ ಮಹಾರಾಷ್ಟ್ರವನ್ನು ಮುಂದಕ್ಕೆ ಕೊಂಡೊಯ್ದಿದ್ದಾರೆ. ಯೋಗದ ತತ್ವಶಾಸ್ತ್ರಕ್ಕೆ ಅನುಗುಣವಾಗಿ ಅವರು ಸಮತೋಲಿತ ಮತ್ತು ದೂರದೃಷ್ಟಿಯ ನಾಯಕತ್ವದ ಮೂಲಕ ರಾಜ್ಯವನ್ನು ಅಭಿವೃದ್ಧಿಯ ದಿಕ್ಕಿನಲ್ಲಿ ಮುಂದಕ್ಕೆ ಕೊಂಡೊಯ್ದಿದ್ದಾರೆ ಎಂದು ಅವರು ತಿಳಿಸಿದರು.

ಸಾರ್ವಜನಿಕ ಕೋಪಕ್ಕೆ ಹೆದರಿ ಕೆಲವು ಬಂಡಾಯ ಸಂಸದರು ಶಿವಸೇನೆ (ಯುಬಿಟಿ) ಜೊತೆ ಸಂಪರ್ಕದಲ್ಲಿದ್ದಾರೆ ; ಸಂಜಯ್ ರಾವುತ್

ಮುಂಬಯಿ, ಜೂ.21 - ಕೆಲವು ಭಿನ್ನಮತೀಯ ಸಂಸದರು ತಮ್ಮ ಕ್ಷೇತ್ರಗಳಲ್ಲಿ ಸಾರ್ವಜನಿಕ ಕೋಪಕ್ಕೆ ಹೆದರಿ ಪಕ್ಷದೊಂದಿಗೆ ಸಂಪರ್ಕದಲ್ಲಿದ್ದಾರೆ ಮತ್ತು ಪ್ರಸ್ತುತ ಕನಿಷ್ಠ ಇಬ್ಬರು ಸಂಸದರೊಂದಿಗೆ ಮಾತುಕತೆ ನಡೆಯುತ್ತಿದೆ ಎಂದು ಶಿವಸೇನೆ (ಯುಬಿಟಿ) ನಾಯಕ ಸಂಜಯ್ ರಾವುತ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ರಾಜ್ಯಸಭಾ ಸಂಸದರು, ಈ ಸಂಸದರು ತಾವು ತಪ್ಪು ಮಾಡಿದ್ದೇವೆ ಎಂದು ಭಾವಿಸಿದರೆ, ಅವರೊಂದಿಗೆ ಮಾತುಕತೆ ನಡೆಸಬಹುದು. ಪ್ರಸ್ತುತ ಇಬ್ಬರು ಸಂಸದರೊಂದಿಗೆ ಮಾತುಕತೆ ನಡೆಯುತ್ತಿದೆ ಎಂದು ಹೇಳಿಕೊಂಡರು.

ಕೆಲವು ಸಂಸದರು ಇನ್ನೂ ಸಂಪರ್ಕದಲ್ಲಿದ್ದಾರೆ. ಅವರ ಕ್ಷೇತ್ರದಲ್ಲಿನ ಕೋಪದಿಂದಾಗಿ ಅವರು ಭಯಭೀತರಾಗಿದ್ದಾರೆ ಎಂದು ರಾವುತ್ ಹೇಳಿದರು.

'ಈಗ ಯಾವುದೇ ಬಣ ಉಳಿದಿಲ್ಲ, ಮತ್ತು ಏಕನಾಥ್ ಶಿಂದೆ ನೇತೃತ್ವದ ಒಂದೇ ಒಂದು ಶಿವಸೇನೆ ಇದೆ' ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾಹ ಅವರ ಹೇಳಿಕೆ ವಿರುದ್ಧ ಕೂಡ ರಾವುತ್ ವಾಗ್ದಾಳಿ ನಡೆಸಿದರು. ಶಾಹ ಶಿವಸೇನಾ ಸಂಸ್ಥಾಪಕ ಬಾಳಠಾಕ್ರೆ ಮತ್ತು ಮಹಾರಾಷ್ಟ್ರವನ್ನು ಅವಮಾನಿಸಿದ್ದಾರೆ ಎಂದು ಆರೋಪಿಸಿದ ಅವರು, ಉದ್ಧವ್ ಠಾಕ್ರೆ ನೇತೃತ್ವದ ಒಂದೇ ಒಂದು ಶಿವಸೇನೆ ಮಾತ್ರ ಇದೆ ಎಂದು ಹೇಳಿದರು. 'ನೀವು ಶಿವಸೇನೆ (ಯುಬಿಟಿ) ಯನ್ನು ಹೆಚ್ಚು ಅವಮಾನಿಸಿದಷ್ಟೂ, ರಾಜ್ಯದ ಜನರು ನಿಮ್ಮ ವಿರುದ್ಧ ನಿಲ್ಲುತ್ತಾರೆ' ಎಂದು ರಾವುತ್ ತಿಳಿಸಿದರು.

ಎಲ್ಲಾ ಬಂಡಾಯ ಸಂಸದರು ತಾಂತ್ರಿಕವಾಗಿ ಇನ್ನೂ ಶಿವಸೇನೆ (ಯುಬಿಟಿ) ಯೊಂದಿಗೆ ಇದ್ದಾರೆ ಮತ್ತು ಈ ವಿಷಯದಲ್ಲಿ ಸ್ಪೀಕರ್ ಓಂ ಬಿರ್ಲಾ ಅವರಿಂದ ಯಾವುದೇ ಆದೇಶಗಳಿಲ್ಲ. ಶಿಂದೆ ನೇತೃತ್ವದ ಶಿವಸೇನೆ ಕೂಡ ಬಂಡಾಯ ಸಂಸದರು ಪಕ್ಷವನ್ನು ಸೇರುವ ಬಗ್ಗೆ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ. ಆರು ಸಂಸದರು ಶಿವಸೇನೆ (ಯುಬಿಟಿ) ತೊರೆದಿರುವುದಾಗಿ ಹೇಳಿಲ್ಲ, ಆದರೂ ಅವರು ಪಕ್ಷದ ಸಭೆಯಲ್ಲಿ ಭಾಗವಹಿಸಲಿಲ್ಲ, ಇದರಿಂದಾಗಿ ವಿಪ್ ಉಲ್ಲಂಘಿಸಲಾಗಿದೆ ಎಂದು ರಾವುತ್ ಹೇಳಿದ್ದಾರೆ.

ಸರಕಾರದ ಸಾಲ ಮನ್ನಾ ಮೋಸದಿಂದ ಕೂಡಿದೆ,ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೇಕು; ಎಂವಿಎ ನಾಯಕರ ಬೇಡಿಕೆ



ಮುಂಬಯಿ,ಜೂ.21 - ರಾಜ್ಯ ಸರಕಾರದ ವಿಫಲ ಆಡಳಿತ ಮತ್ತು ಜನರ ಸಮಸ್ಯೆಗಳ ಬಗ್ಗೆ ಸರಕಾರದ ಅಸಂವೇದನಾಶೀಲ ನಿಲುವನ್ನು ವಿರೋಧಿಸಿ, ವಿಧಾನಸಭೆ ಅಧಿವೇಶನದ ಮುನ್ನಾದಿನ ಆಯೋಜಿಸಲಾದ ಸರಕಾರದ ಚಹಾಕೂಟವನ್ನು ಬಹಿಷ್ಕರಿಸಿರುವುದಾಗಿ ಮಹಾ ವಿಕಾಸ್ ಅಘಾಡಿ (ಎಂವಿಎ) ಇಂದು ಪತ್ರಿಕಾಗೋಷ್ಠಿಯಲ್ಲಿ ಘೋಷಿಸಿತು.

ಸರಕಾರವು ರಾಜ್ಯದಲ್ಲಿನ ಗಂಭೀರ ಸಮಸ್ಯೆಗಳನ್ನು ನಿರಂತರವಾಗಿ ನಿರ್ಲಕ್ಷಿಸುತ್ತಿದೆ ಎಂದು ಆರೋಪಿಸಿದ ಎಂವಿಎಯ ಉನ್ನತ ನಾಯಕರು,ಬರ, ರೈತರ ಸಮಸ್ಯೆಗಳು, ಮಹಿಳೆಯರ ಮೇಲಿನ ಹೆಚ್ಚುತ್ತಿರುವ ದೌರ್ಜನ್ಯ, ಹದಗೆಡುತ್ತಿರುವ ಕಾನೂನು - ಸುವ್ಯವಸ್ಥೆ ಮತ್ತು ರಾಜ್ಯದಲ್ಲಿ ಹೆಚ್ಚುತ್ತಿರುವ ಮಾದಕವಸ್ತು ಕಳ್ಳಸಾಗಣೆ ಮುಂತಾದ ಹಲವು ವಿಷಯಗಳಿಗೆ ಸರಕಾರವು ಯಾವುದೇ ತೃಪ್ತಿದಾಯಕ ಉತ್ತರಗಳನ್ನು ಹೊಂದಿಲ್ಲ ಎಂದು ಟೀಕಿಸಿದರು. ರಾಜ್ಯವು ಬರಗಾಲದ ಬಿಕ್ಕಟ್ಟನ್ನು ಎದುರಿಸುತ್ತಿದೆ. ಬಿತ್ತನೆ ವಿಳಂಬವಾಗಿದೆ, ರೈತರು ಎದುರಿಸುತ್ತಿರುವ ತೊಂದರೆಗಳು ಹೆಚ್ಚುತ್ತಿವೆ. ಸರಕಾರವು ಬರಗಾಲ ಎಂದು ಘೋಷಿಸಬೇಕೆಂದು ಶಿವಸೇನಾ (ಯುಬಿಟಿ) ಗುಂಪಿನ ನಾಯಕ ಭಾಸ್ಕರ್ ಜಾಧವ್ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು. ಸರಕಾರ ಘೋಷಿಸಿದ ಸಾಲ ಮನ್ನಾ ಮೋಸದಿಂದ ಕೂಡಿದ್ದು, ರೈತರು ನಿಯಮಗಳು ಮತ್ತು ಷರತ್ತುಗಳಲ್ಲಿ ಸಿಲುಕಿಕೊಂಡಿದ್ದಾರೆ. ಮಹಾಯುತಿ ಸರಕಾರವು ರೈತರ ಸಂಪೂರ್ಣ ಸಾಲವನ್ನು ಮನ್ನಾ ಮಾಡಬೇಕೆಂದು ಅವರು ಆಗ್ರಹಿಸಿದರು.

ವಿಧಾನ ಪರಿಷತ್ತಿನ ಕಾಂಗ್ರೆಸ್ ಗುಂಪಿನ ನಾಯಕ ಸತೇಜ್ ಪಾಟೀಲ್ ಮಾತನಾಡಿ, ಈ ಸರಕಾರವನ್ನು ಶೇ. 56 ರಷ್ಟು ಕಮಿಷನ್ ಸರಕಾರ ಎಂದು ಟೀಕಿಸಿದರು. ರಾಜ್ಯದಲ್ಲಿ ಗುತ್ತಿಗೆದಾರರು ಅಧಿವೇಶನಗಳನ್ನು ನಡೆಸುವ ಮೂಲಕ ಕಾಮಗಾರಿಗಳಿಗೆ ಬಿಲ್‌ಗಳನ್ನು ಪಡೆಯಲು ದೊಡ್ಡ ಮೊತ್ತದ ಕಮಿಷನ್ ಪಾವತಿಸಬೇಕಾಗುತ್ತದೆ ಎಂದು ಅವರು ಹೇಳಿದರು.

ಒಂದು ಲಕ್ಷ ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಗುತ್ತಿಗೆದಾರರ ಬಿಲ್‌ಗಳು ಬಾಕಿ ಉಳಿದಿವೆ. ಜಲ ಜೀವನ್ ಮಿಷನ್‌ನ ನಿಧಿಯಲ್ಲಿ ಕಡಿತವಾಗಿದ್ದು, ಅನೇಕ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ. ಮತ್ತೊಂದೆಡೆ, ರಾಜ್ಯದ ಮೇಲಿನ ಸಾಲದ ಹೊರೆ ಒಂಬತ್ತೂವರೆ ಲಕ್ಷ ಕೋಟಿ ರೂ.ಗಳನ್ನು ತಲುಪಿರುವುದರಿಂದ ಮಹಾರಾಷ್ಟ್ರದ ಆರ್ಥಿಕ ಸ್ಥಿತಿ ಚಿಂತಾಜನಕವಾಗಿದೆ ಎಂದು ಸತೇಜ್ ಪಾಟೀಲ್ ಟೀಕಿಸಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದೆ ಎಂದು ಎನ್‌ಸಿಪಿ (ಎಸ್‌ಪಿ)ನಾಯಕ ಜಯಂತ್ ಪಾಟೀಲ್ ಹೇಳಿದರಲ್ಲದೆ, ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚಾಗಿದೆ. ರಾಜ್ಯದಲ್ಲಿ ಮಾದಕ ವಸ್ತುಗಳ ಪ್ರಮಾಣವೂ ಹೆಚ್ಚಾಗಿದೆ. ಅಂತಹ ಸಂದರ್ಭಗಳಲ್ಲಿ ಸಣ್ಣ ಜನರನ್ನು ಬಂಧಿಸಲಾಗುತ್ತದೆ, ಆದರೆ ಅದು ಮಾಸ್ಟರ್ ಸ್ವತಂತ್ರವಾಗಿವೆ ಎಂದರು. ಮಾದಕ ದ್ರವ್ಯ ವ್ಯಾಪಾರಿಗಳು ಮತ್ತು ಪೊಲೀಸರ ನಡುವಿನ ಸಂಬಂಧದಿಂದಾಗಿ ಈ ಘಟನೆಗಳು ಹೆಚ್ಚುತ್ತಿವೆ. ಕಳೆದ ಅಧಿವೇಶನದಲ್ಲಿ ದೇವಾಲಯದ ಭೂ ಹಗರಣದ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಆದರೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಪಾಟೀಲ್ ಟೀಕಿಸಿದರು.

ಸರಕಾರವು ಪ್ರತಿಪಕ್ಷಗಳು ಎತ್ತಿರುವ ಪ್ರಶ್ನೆಗಳಿಗೆ ಉತ್ತರಿಸುವ ಬದಲು ಅವುಗಳನ್ನು ತಮಾಷೆ ಮಾಡುತ್ತಿದೆ. ಪ್ರತಿಪಕ್ಷಗಳು ನೀಡಿದ ಪತ್ರದಲ್ಲಿರುವ ಪ್ರತಿಯೊಂದು ಅಂಶಕ್ಕೂ ಉತ್ತರಿಸುವುದು ಸರಕಾರದ ಜವಾಬ್ದಾರಿಯಾಗಿದೆ ಎಂದು ಎನ್‌ಸಿಪಿ (ಎಸ್‌ಪಿ) ನಾಯಕ ಜಿತೇಂದ್ರ ಅವ್ಹಾಡ್ ಟೀಕಿಸಿದರು.

ಜನರ ಸಮಸ್ಯೆಗಳನ್ನು ಚರ್ಚಿಸಲು ಸಿದ್ಧರಿಲ್ಲದ ಸರಕಾರದೊಂದಿಗೆ ಔಪಚಾರಿಕ ಚಹಾಕೂಟದಲ್ಲಿ ಭಾಗವಹಿಸುವುದು ಸೂಕ್ತವಲ್ಲ ಎಂದು ಎಂವಿಎ ಈ ಕಾರ್ಯಕ್ರಮವನ್ನು ಬಹಿಷ್ಕರಿಸಲು ನಿರ್ಧರಿಸಿದೆ. ರಾಜ್ಯದ 13 ಕೋಟಿ ಜನರ ಹಿತಾಸಕ್ತಿಯ ಸಮಸ್ಯೆಗಳನ್ನು ಪರಿಹರಿಸುವುದು ಸರಕಾರದ ಕರ್ತವ್ಯವಾಗಿದೆ ಮತ್ತು ಎಂವಿಎ ಮಳೆಗಾಲದ ಅಧಿವೇಶನದಲ್ಲಿ ಈ ಎಲ್ಲಾ ವಿಷಯಗಳನ್ನು ಆಕ್ರಮಣಕಾರಿಯಾಗಿ ಎತ್ತುತ್ತದೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಬದ್ಲಾಪುರ: ಬಿಎಂಡಬ್ಲ್ಯು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಇಬ್ಬರ ಸಾವು, ಒಬ್ಬರಿಗೆ ಗಾಯ



ಥಾಣೆ, ಜೂ.21 - ಮಹಾರಾಷ್ಟ್ರದ ಥಾಣೆ ಜಿಲ್ಲೆಯಲ್ಲಿ ರವಿವಾರ ಮುಂಜಾನೆ ವೇಗವಾಗಿ ಬಂದ ಬಿಎಂಡಬ್ಲ್ಯು ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಹಲವು ಬಾರಿ ಉರುಳಿದ ಪರಿಣಾಮ ಇಬ್ಬರು ಸಾವನ್ನಪ್ಪಿದ್ದು, ಮತ್ತೊಬ್ಬರು ಗಂಭೀರ ಗಾಯಗೊಂಡಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

ಮುಂಬಯಿ - ವಡೋದರಾ ಹೆದ್ದಾರಿಯ ಬದ್ಲಾಪುರ ಬಳಿಯ ರಸ್ತೆಯಲ್ಲಿ ಬೆಳಗಿನ ಜಾವ 4 ಗಂಟೆ ಸುಮಾರಿಗೆ ಈ ಅಪಘಾತ ಸಂಭವಿಸಿದೆ, ಟಿಟ್ವಾಲಾದಿಂದ ಐಷಾರಾಮಿ ಕಾರು ಹಿಂತಿರುಗುತ್ತಿದ್ದಾಗ ಈ ಅಪಘಾತ ಸಂಭವಿಸಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮೃತರಾದ ಯೋಗೇಶ್ ದಿಘೆ (26) ಮತ್ತು ರಿಕೇಬಾ ಜಾಕೋಬ್ (24) ಬದ್ಲಾಪುರ ನಿವಾಸಿಗಳಾಗಿದ್ದು, ಆನಂದ್ ಎಂದು ಗುರುತಿಸಲಾದ ಮತ್ತೊಬ್ಬ ವ್ಯಕ್ತಿ ಗಂಭೀರವಾಗಿ ಗಾಯಗೊಂಡಿದ್ದು, ಥಾಣೆಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರಾಥಮಿಕ ತನಿಖೆಯ ಪ್ರಕಾರ, ಅತಿ ವೇಗದಲ್ಲಿ ಕಾರು ಚಲಾಯಿಸುತ್ತಿದ್ದರಿಂದ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಚಾಲಕನ ನಿಯಂತ್ರಣ ತಪ್ಪಿ ಹಲವು ಬಾರಿ ಪಲ್ಟಿಯಾಗಿ ನಿಂತಿತು ಎಂದು ಪೊಲೀಸರು ತಿಳಿಸಿದ್ದಾರೆ. ಅಪಘಾತದ ಪರಿಣಾಮ ಕಾರು ನಜ್ಜುಗುಜ್ಜಾಯಿತು. ದೊಡ್ಡ ಶಬ್ದ ಕೇಳಿದ ಬಳಿಕ ನಿವಾಸಿಗಳು ಮತ್ತು ವಾಹನ ಚಾಲಕರು ಸ್ಥಳಕ್ಕೆ ಧಾವಿಸಿ ಅಧಿಕಾರಿಗಳಿಗೆ ಮಾಹಿತಿ ನೀಡಿದರು.

ಇಬ್ಬರು ಬಲಿಪಶುಗಳ ಶವಗಳನ್ನು ಮರಣೋತ್ತರ ಪರೀಕ್ಷೆಗಾಗಿ ಸರಕಾರಿ ಆಸ್ಪತ್ರೆಗೆ ಕಳುಹಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆ ಸಂಬಂಧ ಆಕಸ್ಮಿಕ ಸಾವು ಪ್ರಕರಣ ದಾಖಲಾಗಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಬದ್ಲಾಪುರ ಪೊಲೀಸ್ ಠಾಣೆಯ ಸ್ಟೇಷನ್ ಹೌಸ್ ಅಧಿಕಾರಿ ಹೇಳಿದ್ದಾರೆ.

ವಿಧಿವಿಜ್ಞಾನ ತಂಡವು ಅಪಘಾತ ಸ್ಥಳಕ್ಕೆ ಭೇಟಿ ನೀಡಿ ಸಾಕ್ಷ್ಯಗಳನ್ನು ಸಂಗ್ರಹಿಸಿದೆ.ಅಪಘಾತದ ವೇಳೆ ಚಾಲಕ ಮದ್ಯದ ಪ್ರಭಾವದಲ್ಲಿದ್ದನೇ ಎಂಬುದು ಸೇರಿದಂತೆ ಪ್ರಕರಣದ ಎಲ್ಲಾ ಸಾಧ್ಯತೆಗಳನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೀರಾರೋಡ್ : ಸುಜಾತಾ ಯು. ಶೆಟ್ಟಿ ನಿಧನ



ಮೀರಾರೋಡ್,ಜೂ.21- ಮೀರಾರೋಡ್ ಶಾಂತಿನಗರದ ಸೆಕ್ಟರ್ 5 ರ ನಿವಾಸಿ ಸುಜಾತಾ ಯು. ಶೆಟ್ಟಿ (61) ಅವರು ಅಲ್ಪಕಾಲದ ಅಸೌಖ್ಯದಿಂದ ಸ್ವಗೃಹದಲ್ಲಿ ಜೂ. 20 ರಂದು ನಿಧನರಾದರು.

ಸುಜಾತಾ ಯು. ಶೆಟ್ಟಿ ಅವರು ಲೇಖಕಿ, ಕವಯತ್ರಿಯಾಗಿದ್ದು ಒಂದು ಕವನ ಸಂಕಲನ ಪ್ರಕಟಿಸಿದ್ದಾರೆ, ಗೋರೆಗಾಂವ್ ಕರ್ನಾಟಕ ಸಂಘ ಸಹಿತ ಹಲವಾರು ಸಂಘ-ಸಂಸ್ಥೆಗಳಲ್ಲಿ ಗುರುತಿಸಿಕೊಂಡವರಾಗಿದ್ದರು.

ಮೃತರು ಮೀರಾರೋಡಿನ ಜನಾನುರಾಗಿ ಹಿರಿಯ ಸಮಾಜ ಸೇವಕಿ ಚೆಳ್ಯಾರು ಬಡಗುಮನೆ ತಾಯಿ ಸುಮತಿ ಆರ್. ಶೆಟ್ಟಿ,ಮಗಳು ಪೃಥ್ವಿ, ಅಳಿಯ, ಸಹೋದರರಾದ ವಸಂತ್ ಶೆಟ್ಟಿ ಹಾಗೂ ಶರತ್ ಶೆಟ್ಟಿ ಸಹಿತ ಅಪಾರ ಬಂಧುಬಳಗದವರನ್ನು , ಹಿತೈಷಿಗಳನ್ನು ಅಗಲಿದ್ದಾರೆ.

ಕಲ್ಯಾಣ್: 16 ವರ್ಷದ ಬಾಲಕಿಯ ಮೇಲೆ ವೃದ್ಧರಿಬ್ಬರಿಂದ ಸಾಮೂಹಿಕ ಅತ್ಯಾಚಾರ


ಕಲ್ಯಾಣ್,ಜೂ. 21 - ಕಲ್ಯಾಣ್ ನಗರದಲ್ಲಿ 16 ವರ್ಷದ ಬಾಲಕಿಯ ಮೇಲೆ ಇಬ್ಬರು ಹಿರಿಯ ನಾಗರಿಕರು ಅತ್ಯಾಚಾರ ಎಸಗಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ. ನೇತಿವಲಿ ಗ್ರಾಮದ ಕೊಳಚೆ ಪ್ರದೇಶ ಕಾಲೋನಿಯಲ್ಲಿ ಶನಿವಾರ ರಾತ್ರಿ ನಡೆದ ಘಟನೆಗೆ ಸಂಬಂಧಿಸಿದಂತೆ 60 ವರ್ಷಕ್ಕಿಂತ ಮೇಲ್ಪಟ್ಟ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಕೊಲ್ಸೆವಾಡಿ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ಇಬ್ಬರು ಬಾಲಕಿಯನ್ನು ಹಿಡಿದು ಪದೇ ಪದೇ ಅತ್ಯಾಚಾರ ಮಾಡಿದ್ದಾರೆ ಎಂದು ಅವರು ಹೇಳಿದರು. ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತಾ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯ ಸಂಬಂಧಿತ ನಿಬಂಧನೆಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಏಕಕಾಲಕ್ಕೆ ನಾಲ್ಕು ಕ್ಷೇತ್ರಗಳಲ್ಲಿ ವೋಟರ್ ಐಡಿ! ; ಪ್ರಕಾಶ್ ರಾಜ್ ವಿರುದ್ಧ ಅರೆಸ್ಟ್ ವಾರೆಂಟ್

ಬೆಂಗಳೂರು, ಜೂ. 21 - ಬಹುಭಾಷಾ ನಟ ಪ್ರಕಾಶ್ ರಾಜ್ ಅವರಿಗೆ ಕಾನೂನು ಸಂಕಷ್ಟ ಎದುರಾಗಿದೆ. ಏಕಕಾಲಕ್ಕೆ ನಾಲ್ಕು ಬೇರೆ ಬೇರೆ ಕ್ಷೇತ್ರಗಳಲ್ಲಿ ವೋಟರ್ ಐಡಿ ಕಾರ್ಡ್ ಹೊಂದಿರುವ ಆರೋಪದ ಹಿನ್ನೆಲೆಯಲ್ಲಿ ವಕೀಲ ದಿಲೀಪ್ ಕುಮಾರ್ ಅವರು ನೀಡಿದ ದೂರಿನ ಮೇರೆಗೆ 2019ರಲ್ಲಿ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಆದರೆ ಯಾವುದೇ ಕ್ರಮ ಕೈಗೊಳ್ಳದ ಕಾರಣದಿಂದ ಅವರು ಪೊಲೀಸ್ ಆಯುಕ್ತರಿಗೆ ಹಾಗೂ ಕೇಂದ್ರ ಚುನಾವಣಾ ಆಯೋಗಕ್ಕೂ ದೂರು ಸಲ್ಲಿಸಿದ್ದರು. ಅಲ್ಲಿಯೂ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ನೇರವಾಗಿ ನ್ಯಾಯಾಲಯದಲ್ಲಿ ದೂರು ದಾಖಲಿಸಿದ ಪರಿಣಾಮ, ಬೆಂಗಳೂರಿನ 48ನೇ ಎಸಿಜಿಎಂ ಕೋರ್ಟ್ ಪ್ರಕಾಶ್ ರಾಜ್ ವಿರುದ್ಧ ಅರೆಸ್ಟ್ ವಾರೆಂಟ್ ಜಾರಿ ಮಾಡಿದೆ.

ದೂರುದಾರ ದಿಲೀಪ್ ಕುಮಾರ್ ಅವರು, ಒಬ್ಬ ವ್ಯಕ್ತಿಗೆ ಒಂದೇ ವೋಟರ್ ಕಾರ್ಡ್ ಇರಬೇಕು. ಆದರೆ, ಪ್ರಕಾಶ್ ರಾಜ್ ಅವರು ನಾಲ್ಕು ಕಡೆಗಳಲ್ಲಿ ವೋಟರ್ ಐಡಿ ಹೊಂದಿದ್ದಾರೆ. ಅದಕ್ಕಾಗಿ ನಾನು ದೂರು ನೀಡಿದ್ದೇನೆ ಎಂದು ತಿಳಿಸಿದ್ದಾರೆ.

ಇತ್ತೀಚೆಗೆ ಪ್ರಕಾಶ್ ರಾಜ್ ಹಲವು ವಿವಾದಗಳಲ್ಲಿ ಸಿಲುಕಿದ್ದಾರೆ. ಧರ್ಮಸ್ಥಳದ ವಿರುದ್ಧ ರೂ.200 ಕೋಟಿ ಸಂಚು ನಡೆದಿದೆ ಎಂಬ ಆರೋಪದಲ್ಲಿ ಅವರ ಹೆಸರು ಪ್ರಸ್ತಾಪವಾಗಿದ್ದು, ಅವರು ಅದನ್ನು ಅಸತ್ಯ, ಆಧಾರವಿಲ್ಲದ ಆರೋಪ ಎಂದು ತಳ್ಳಿ ಹಾಕಿದ್ದಾರೆ. ಅದೇ ರೀತಿ, ಕೇರಳದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಮಾಯಣದ ಕುರಿತಂತೆ ಮಾಡಿದ ವಿವಾದಾತ್ಮಕ ಹೇಳಿಕೆಗಳು ಭಾರೀ ವಿರೋಧಕ್ಕೆ ಕಾರಣವಾಗಿದ್ದು, ತಿರುಮಲ ತಿರುಪತಿ ದೇವಸ್ಥಾನ ಮಂಡಳಿಯ ಸದಸ್ಯರಿಂದ ರೂ.100 ಕೋಟಿ ಮಾನಹಾನಿ ನೋಟಿಸ್ ಹಾಗೂ ದೆಹಲಿಯಲ್ಲಿ ಕ್ರಿಮಿನಲ್ ದೂರು ದಾಖಲಿಸಲಾಗಿದೆ.



ಭಾರತದ ಚುನಾವಣಾ ನಿಯಮಗಳ ಪ್ರಕಾರ, ಒಬ್ಬ ನಾಗರಿಕ ದೇಶದ ಯಾವುದೇ ಒಂದು ಕಡೆಯಲ್ಲಿ ಮಾತ್ರ ಮತದಾರರ ಗುರುತಿನ ಚೀಟಿ ಹೊಂದಲು ಅವಕಾಶವಿದೆ. ಆದರೆ, ನಟ ಪ್ರಕಾಶ್ ರಾಜ್ ಅವರು ನಿಯಮಗಳನ್ನು ಗಾಳಿಗೆ ತೂರಿ ದಕ್ಷಿಣ ಭಾರತದ ನಾಲ್ಕು ಪ್ರಮುಖ ರಾಜ್ಯಗಳಲ್ಲಿ ಮತದಾರರ ಗುರುತಿನ ಚೀಟಿ ಹೊಂದಿದ್ದಾರೆ ಎಂದು ಆರೋಪಿಸಲಾಗಿದೆ.

ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಪ್ರಕಾಶ್ ರಾಜ್ ಹೆಸರಿನಲ್ಲಿ ವೋಟರ್ ಐಡಿಗಳು ಪತ್ತೆಯಾಗಿವೆ ಎನ್ನಲಾಗಿದ್ದು, ಇದು ಕಾನೂನಿನ ಪ್ರಕಾರ ಗಂಭೀರ ಅಪರಾಧವಾಗಿದೆ.

ಈ ಅಕ್ರಮದ ಕುರಿತಾಗಿ ದಿಲೀಪ್ ಕುಮಾರ್ ಎಂಬವರು ಬೆಂಗಳೂರಿನ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಾಲಯವು, ಈ ಹಿಂದೆ ನಟ ಪ್ರಕಾಶ್ ರಾಜ್ ಅವರಿಗೆ ಎರಡು ಬಾರಿ ಸಮನ್ಸ್ ಜಾರಿ ಮಾಡಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿತ್ತು.

ನ್ಯಾಯಾಲಯ ನೀಡಿದ ಎರಡು ಸಮನ್ಸ್ ಗಳಿಗೂ ಬೆಲೆ ಕೊಡದ ಪ್ರಕಾಶ್ ರಾಜ್, ವಿಚಾರಣೆಗೆ ಹಾಜರಾಗದೆ ಗೈರುಳಿದಿದ್ದರು. ನ್ಯಾಯಾಲಯದ ಆದೇಶವನ್ನು ಪದೇ ಪದೇ ನಿರ್ಲಕ್ಷಿಸಿದ ನಟನ ವರ್ತನೆಗೆ ನ್ಯಾಯಾಧೀಶರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಕೋರ್ಟ್ ಕಠಿಣ ಕ್ರಮಕ್ಕೆ ಮುಂದಾಗಿದ್ದು, ಅವರ ವಿರುದ್ಧ ಈಗ ನೇರವಾಗಿ ಜಾಮೀನು ರಹಿತ ವಾರಂಟ್ ಹೊರಡಿಸಿದೆ. ಸದಾ ಸಾಮಾಜಿಕ ಮತ್ತು ರಾಜಕೀಯ ವಿಚಾರಗಳಲ್ಲಿ ಸಕ್ರಿಯರಾಗಿರುವ ಪ್ರಕಾಶ್ ರಾಜ್ ಅವರಿಗೆ ಈ ಅಕ್ರಮ ಮತದಾರರ ಗುರುತಿನ ಚೀಟಿ ಪ್ರಕರಣವು ದೊಡ್ಡ ತಲೆನೋವಾಗಿ ಪರಿಣಮಿಸಿದೆ.

ಕಾವೇರಿ ನೀರಿನ ಕುರಿತು ತಮಿಳುನಾಡು ಸರ್ಕಾರ ವಾಸ್ತವ ಅರ್ಥಮಾಡಿಕೊಳ್ಳಬೇಕು : ಕುಮಾರಸ್ವಾಮಿ

ಮಂಡ್ಯ, ಜೂ. 21 - ಕಾವೇರಿ ನೀರಿನ ಸಮಸ್ಯೆ ಹೊಸದಿಲ್ಲ, ಕಳೆದ ಐವತ್ತು ವರ್ಷಗಳಿಂದಲೂ ಇದೆ. ತಮಿಳುನಾಡಿಗೆ ನಿರೀಕ್ಷೆಗಿಂತ ಎರಡು ಪಟ್ಟು ನೀರು ನೀಡಲಾಗಿದೆ. ಜಲಾಶಯಗಳು ತುಂಬದಿರುವಾಗ ಕರ್ನಾಟಕದ ಮೇಲೆ ಒತ್ತಡ ಹೇರುವುದು ನ್ಯಾಯಸಮ್ಮತವಲ್ಲ. ತಮಿಳುನಾಡು ಸರ್ಕಾರ ಈ ವಾಸ್ತವವನ್ನು ಅರ್ಥಮಾಡಿಕೊಳ್ಳಬೇಕು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಮಂಡ್ಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಕಾವೇರಿ ನೀರಿನ ವಿವಾದದ ಕುರಿತು ತಮಿಳುನಾಡು ಸರ್ಕಾರದ ನಿಲುವಿಗೆ ತೀವ್ರ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ಕರ್ನಾಟಕದ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಲ್ಲಿ ಹಿಂದಿನ ಸರ್ಕಾರಗಳು ವಿಫಲವಾಗಿವೆ. ನಮ್ಮ ರಾಜ್ಯದ ಜನರ ಹಣದಿಂದ ನಿರ್ಮಿತವಾದ ಅಣೆಕಟ್ಟುಗಳು ತಮಿಳುನಾಡಿಗೆ ನೀರು ಬಿಡುವಂತಾಗಿವೆ. ದೇವೇಗೌಡರು ಪ್ರಧಾನಿ ಆಗುವವರೆಗೆ ಕೇಂದ್ರದಿಂದ ಯಾವುದೇ ನೆರವು ದೊರಕಲಿಲ್ಲ ಎಂದು ಹೇಳಿದರು.

ಮೇಕೆದಾಟು ಯೋಜನೆ ಕುರಿತು ಮಾತನಾಡಿದ ಅವರು, ದೇವೇಗೌಡರ ನೇತೃತ್ವದಲ್ಲಿ ಪ್ರಧಾನಿಯವರ ಬಳಿ ಮೇಕೆದಾಟು ಯೋಜನೆಗೆ ಮನವಿ ಮಾಡಿದ್ದೇವೆ. ಇದು ಬೆಂಗಳೂರಿನ ಕುಡಿಯುವ ನೀರಿಗಾಗಿ ಅಗತ್ಯವಾದ ಯೋಜನೆ. ತಮಿಳುನಾಡು ಇದಕ್ಕೆ ಸಹಮತ ನೀಡಬೇಕು. ರಾಜಕೀಯ ಅಥವಾ ಪ್ರತಿಷ್ಠೆಗಾಗಿ ರಾಜ್ಯದ ಮೇಲೆ ದಬ್ಬಾಳಿಕೆ ಮಾಡಬಾರದು ಎಂದು ಹೇಳಿದರು.

ಬಿಡದಿ ಟೌನ್‌ಶಿಪ್ ವಿವಾದದ ಕುರಿತು ಅವರು, 2007ರಲ್ಲಿ ನಾನು ಮುಖ್ಯಮಂತ್ರಿ ಆಗಿದ್ದಾಗ ಎಸ್‌ಇಝುಡ್ ವಿಚಾರವಾಗಿ ವಿಧಾನಸಭೆಯಲ್ಲಿ ಚರ್ಚೆ ನಡೆದಿತ್ತು. ಫಲವತ್ತಾದ ಭೂಮಿಯನ್ನು ವಶಪಡಿಸಿಕೊಳ್ಳುವುದಿಲ್ಲ ಎಂದು ಆಗಲೇ ಹೇಳಿದ್ದೆ. ಈಗ ರೆಡ್‌ಜೋನ್ ಕುರಿತು ಮಾತನಾಡುತ್ತಿರುವವರು ತಮ್ಮ ಕಾಲದ ನಿರ್ಧಾರಗಳನ್ನು ನೆನಪಿಸಿಕೊಳ್ಳಬೇಕು ಎಂದು ಹೇಳಿದರು.

ಡಿ.ಕೆ. ಶಿವಕುಮಾರ್ ವಿರುದ್ಧ ತೀವ್ರ ಟೀಕೆ ನಡೆಸಿ, ಭೂಮಿ ಸ್ವಾಧೀನದ ವೇಳೆ ಶಾಸಕರು ಹಣ ನೀಡುವುದು ತಾಂತ್ರಿಕವಾಗಿ ಸಾಧ್ಯವಿಲ್ಲ. ರಾಜ್ಯದ ಆಡಳಿತದ ಮಟ್ಟವೇ ಕುಸಿದಿದೆ. ಸಾಲ ತೆಗೆದುಕೊಂಡು ಅಭಿವೃದ್ಧಿ ಹೆಸರಿನಲ್ಲಿ



ಲೂಟಿ ನಡೆಯುತ್ತಿದೆ. ಮುಂದಿನ ಪೀಳಿಗೆಗೆ ಸಮಸ್ಯೆ ಬರುವಂತಾಗಿದೆ ಎಂದು ಆರೋಪಿಸಿದರು.

ಕುಮಾರಸ್ವಾಮಿ ಅವರು ಭ್ರಷ್ಟಾಚಾರ ಮತ್ತು ಆಡಳಿತದ ಶೈಲಿಯ ಬಗ್ಗೆ ಪ್ರಶ್ನೆ ಎತ್ತಿ, ಅಭಿವೃದ್ಧಿ ಹೆಸರಿನಲ್ಲಿ ಭೂಮಿ ಲಪಟಾಯಿಸುವುದು ಇವರ ಚಿಂತನೆ. ಭ್ರಷ್ಟಾಚಾರ ನಿಲ್ಲಿಸುತ್ತೇನೆ ಎಂದು ಹೇಳಿ ನಾಟಕ ನಡೆಸುತ್ತಿದ್ದಾರೆ. ದೇವರ ಭಯ ಇದ್ದರೆ ಜನರ ಹಣವನ್ನು ಗುಣಾತ್ಮಕ ಕೆಲಸಕ್ಕೆ ಬಳಸಬೇಕು ಎಂದು ಹೇಳಿದರು.

ನೀಟ್ ಬಗ್ಗೆ ಪ್ರಧಾನಮಂತ್ರಿ ಕಾರ್ಯಾಲಯವೇ ಎಚ್ಚರಿಕೆ

ನೀಟ್ ಪರೀಕ್ಷೆ ಕುರಿತು ಮಾತನಾಡಿದ ಅವರು, ಕಳೆದ ಎರಡು ವರ್ಷಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯ ಘಟನೆಗಳು ನಡೆದಿವೆ. ಈ ಬಾರಿ ವಿದ್ಯಾರ್ಥಿಗಳ ಆತಂಕ ಹೆಚ್ಚಾಗಿದೆ. ಪ್ರಧಾನಮಂತ್ರಿ ಕಾರ್ಯಾಲಯವೇ ಎಚ್ಚರಿಕೆ ವಹಿಸಿ ಪರೀಕ್ಷೆ ನಡೆಸುತ್ತಿದೆ. ಯಾವುದೇ ಗೊಂದಲಕ್ಕೆ ಅವಕಾಶ ಕೊಡದಂತೆ ಕ್ರಮ ಕೈಗೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ಶುಭಾಶಯಗಳು ಎಂದು ಹೇಳಿದರು.

ಡಿ.ಕೆ, ಡಿ.ಕೆ ಘೋಷಣೆ, ಗರಂ ಆದ ಖರ್ಗೆ ; ಕಾರ್ಯಕರ್ತರ ವಿರುದ್ಧ ಶಿಸ್ತುಕ್ರಮದ ಎಚ್ಚರಿಕೆ

ಬೆಂಗಳೂರು, ಜೂ. 21 - ಕಾಂಗೆಸ್‌ನಲ್ಲಿ ಶಿಸ್ತು ಬಹಳ ಮುಖ್ಯ. ಕಾರ್ಯಕ್ರಮದ ನಡುವೆ ಯಾರಾದರು ವ್ಯಕ್ತಿಗತ ವರ್ಚಸ್ಸಿಗಾಗಿ ಘೋಷಣೆ ಕೂಗಿದರೆ, ಶಿಸ್ತು ಕ್ರಮ ಕೈಗೊಳ್ಳುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಠಿಣ ಎಚ್ಚರಿಕೆ ನೀಡಿದ್ದಾರೆ.

ನಗರದ ಅರಮನೆ ಮೈದಾನದಲ್ಲಿ ನಡೆದ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರ ಪದಗ್ರಹಣ ಸಮಾರಂಭದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ಮಾತನಾಡುತ್ತಾ, ಡಿ.ಕೆ. ಶಿವಕುಮಾರ್ ಈ ಹಿಂದೆ ಆರೂವರೆ ವರ್ಷ ಪಕ್ಷದ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದರು. ಈಗ ಮುಖ್ಯಮಂತ್ರಿಯಾದ ಮೇಲೆ ಎನ್ನುತ್ತಿದ್ದಂತೆ ಸಭಾಂಗಣದಲ್ಲಿ ಇದ್ದ ಕಾರ್ಯಕರ್ತರು, ಮುಖಂಡರ ಪೈಕಿ ಡಿ.ಕೆ, ಡಿ.ಕೆ ಎಂದು ಘೋಷಣೆ ಕೂಗಿದರು.

ವೇದಿಕೆಯಲ್ಲೇ ಇದ್ದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ತಕ್ಷಣವೇ ಎದ್ದು ನಿಂತು ಘೋಷಣೆ ಕೂಗದಂತೆ ಕೈ ಸನ್ನೆ ಮಾಡಿದರು. ಘೋಷಣೆಗಳಿಂದ ಮುಜುಗರಕ್ಕೊಳಗಾದ ಮಲ್ಲಿಕಾರ್ಜುನ ಖರ್ಗೆ ಅವರು ನಿಮದೆಲ್ಲಾ ಮುಗಿಯಿತೇ? ಮುಂದೆ ಇರುವ ಒಂದು ಗುಂಪಿನಲ್ಲಿ ಮಾತ್ರ ಈ ರೀತಿ ಜೈಕಾರ ಕೇಳಿ ಬರುತ್ತಿದೆ. ಇಲ್ಲಿ ನಿಂತು ಕೆಲವರು ಘೋಷಣೆ ಕೂಗಿದರೆ, ದೇಶವೇ ನಮ್ಮ ಕೈಗೆ ಬಂದಾಂತಾಗುತ್ತದೆಯೇ? ಯೂಸ್‌ಲೆಸ್ ಫೆಲೋಸ್ ಎಂದು ಖಾರವಾಗಿ ಹೇಳಿದರು.

ಇದು ಒಬ್ಬ ವ್ಯಕ್ತಿಯ ಸಭೆಯಲ್ಲ, ಎಲ್ಲರೂ ಸೇರಿ ಪಕ್ಷವನ್ನು ಬಲಗೊಳಿಸಬೇಕು. ಒಬ್ಬರ ಹೆಸರನ್ನು ಮಾತ್ರ ಕೂಗಿದರೆ ಉಳಿದವರು ಕಸ ಗುಡಿಸಲು ಬಂದಿದ್ದಾರೆಯೇ? ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಕಾಂಗ್ರೆಸ್‌ನಲ್ಲಿ ಶಿಸ್ತು ಬಹಳ ಮುಖ್ಯ. 58 ವರ್ಷಗಳ ತಮ್ಮ ರಾಜಕೀಯ ಜೀವನದಲ್ಲಿ ಬಹಳ ಏರುಪೇರುಗಳನ್ನು ನೋಡಿದ್ದೇನೆ. ಅನೇಕರು ಕಾಂಗ್ರೆಸ್‌ನಿಂದ ನಾಯಕರಾಗಿದ್ದಾರೆ. ಕಾಂಗ್ರೆಸ್‌ಗೆ ಅವರ ಕೊಡುಗೆ ಕಡಿಮೆ ಇದ್ದರೂ, ಪಕ್ಷ ಅವರಿಗೆ ಶಕ್ತಿ ನೀಡಿದೆ ಎಂದು ಹೇಳಿದರು.

ಈ ರೀತಿಯ ಘೋಷಣೆ ಕೂಗುವವರ ವಿರುದ್ಧ ದೃಶ್ಯಾವಳಿಗಳನ್ನು ಆಧರಿಸಿ ಶಿಸ್ತು ಕ್ರಮ ಜರುಗಿಸುತ್ತೇನೆ. ಇದು ಅತ್ಯಂತ ಮಹತ್ವದ ಸಭೆ. ಶಿಸ್ತು ಪಾಲನೆ ಮಾಡಿ ಎಂದು ಹೇಳಿದರು.

ಕೆಪಿಸಿಸಿ ಸಾರಥಿಯಾಗಿ ಬಿ.ಕೆ. ಹರಿಪ್ರಸಾದ್ ಅಧಿಕಾರ ಸ್ವೀಕಾರ

ಬೆಂಗಳೂರು, ಜೂ. 21 - ಕೆಪಿಸಿಸಿ ಅಧ್ಯಕ್ಷರಾಗಿ ಹಿರಿಯ ಮುಖಂಡ, ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಇಂದು ಅಧಿಕೃತವಾಗಿ ಅಧಿಕಾರ ವಹಿಸಿಕೊಂಡರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಪುಟದ ಸಚಿವರು, ಶಾಸಕರು ಸೇರಿದಂತೆ ಹಲವರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

ಪದಗ್ರಹಣ ಸಮಾರಂಭದಲ್ಲಿ ಹಾಲಿ ಹಾಗೂ ಮಾಜಿ ಮುಖ್ಯಮಂತ್ರಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಬೆಂಗಳೂರಿನಾದ್ಯಂತ ಫ್ಲೆಕ್ಸ್ ಗಳು, ಬ್ಯಾನರ್‌ಗಳು ರಾರಾಜಿಸುತ್ತಿದ್ದವು.

ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ 22ನೇ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿರುವುದು ಕಾಂಗ್ರೆಸ್ ಪಾಳಯದಲ್ಲಿ ಹೊಸ ಉತ್ಸಾಹ ಮೂಡಿಸಿತ್ತು. ಕಾರ್ಯಕರ್ತರಲ್ಲಿ ಸಂಭ್ರಮ ಮೇರೆ ಮೀರಿತ್ತು.



ಅಧಿಕಾರ ಹಸ್ತಾಂತರದ ಪರ್ವದಲ್ಲಿ ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಕೆಪಿಸಿಸಿ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದ ಆಗಿನ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಿ ಆಯ್ಕೆಯಾದರು.

ಪಕ್ಷದಲ್ಲಿ ಒಬ್ಬರಿಗೆ ಒಂದೇ ಹುದ್ದೆ ಎಂಬ ಸಿದ್ಧಾಂತದ ಪ್ರಕಾರ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಡಿ.ಕೆ. ಶಿವಕುಮಾರ್ ರಾಜೀನಾಮೆ ನೀಡಿದ್ದರು. ಬಿ.ಕೆ. ಹರಿಪ್ರಸಾದ್ ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದರು. ದೆಹಲಿಯಲ್ಲಿ ಬಿ.ಕೆ. ಹರಿಪ್ರಸಾದ್ ಮತ್ತು ಡಿ.ಕೆ. ಶಿವಕುಮಾರ್ ನಡುವೆ ರಹಸ್ಯ ಸಭೆ ನಡೆಯಿತು. ಅನಂತರ ಹರಿಪ್ರಸಾದ್ ಕೆಪಿಸಿಸಿ ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದು, ಜೂನ್ 3ರಂದು ಎಐಸಿಸಿ ಅಧ್ಯಕ್ಷರು ಹರಿಪ್ರಸಾದ್ ಅವರನ್ನು ಕೆಪಿಸಿಸಿ ಅಧ್ಯಕ್ಷರನ್ನಾಗಿ ಘೋಷಣೆ ಮಾಡಿದ್ದರು. 18 ದಿನಗಳ ಬಳಿಕ ಇಂದು ಹರಿಪ್ರಸಾದ್ ಅಧಿಕಾರ ಸ್ವೀಕರಿಸಿದ್ದಾರೆ.

4 ಬಾರಿ ರಾಜ್ಯಸಭೆ ಸದಸ್ಯರಾಗಿ, 1 ಬಾರಿ ವಿಧಾನಪರಿಷತ್ ಸದಸ್ಯರಾಗಿ ಕೆಲಸ ಮಾಡಿದ್ದ ಬಿ.ಕೆ. ಹರಿಪ್ರಸಾದ್ ವಿಧಾನ ಪರಿಷತ್ತಿನ 2ನೇ ಅವಧಿಗೆ ಸದಸ್ಯರಾಗಿ ಇತ್ತೀಚೆಗಷ್ಟೇ ಮರು ಆಯ್ಕೆಯಾಗಿದ್ದಾರೆ. ಇದಕ್ಕೂ ಮೊದಲು ಹರಿಪ್ರಸಾದ್ ಅವರು ಗುಜರಾತ್, ಹರಿಯಾಣ, ಉತ್ತರ ಪ್ರದೇಶ, ಮಹಾರಾಷ್ಟ್ರ ಸೇರಿದಂತೆ 18ಕ್ಕೂ ಹೆಚ್ಚು ರಾಜ್ಯಗಳಲ್ಲಿ ಕಾಂಗ್ರೆಸ್ ಉಸ್ತುವಾರಿ ನಾಯಕರಾಗಿ ಕೆಲಸ ಮಾಡಿದ್ದಾರೆ.

ರಾಜಕಾರಣದಲ್ಲಿ ಕಾಂಗ್ರೆಸ್‌ನ ನಿಷ್ಠಾವಂತರಾಗಿ ಗುರುತಿಸಿಕೊಂಡಿರುವ ಹರಿಪ್ರಸಾದ್, ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಕಡು ವಿರೋಧಿ ಎಂದು ಬಿಂಬಿಸಿಕೊಂಡಿದ್ದಾರೆ. ಹೈಕಮಾಂಡ್ ಅಳೆದು-ತೂಗಿ ಹರಿಪ್ರಸಾದ್ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ. ಇಂದು ಅಧಿಕೃತವಾಗಿ ಅಧಿಕಾರ ವಹಿಸಿಕೊಂಡ ಬಳಿಕ ಸಂಘಟನೆಗೆ ಹೊಸ ಸ್ವರೂಪ ನೀಡಲು ಹರಿಪ್ರಸಾದ್ ಕಾರ್ಯಾರಂಭಿಸಲಿದ್ದಾರೆ.

ಕರಾವಳಿ ಮತ್ತು ಮಲೆನಾಡು ಪ್ರವಾಸೋದ್ಯಮ ಪ್ರಚಾರ ರಾಯಭಾರಿಯಾಗಿ ರಿಷಬ್ ಶೆಟ್ಟಿ ಆಯ್ಕೆಗೆ ಆಕ್ರೋಶ



ಬೆಂಗಳೂರು, ಜೂ. 21 - ಕರಾವಳಿ ಮತ್ತು ಮಲೆನಾಡು ಪ್ರವಾಸೋದ್ಯಮ ಪ್ರಚಾರ ರಾಯಭಾರಿಯಾಗಿ ನಟ ರಿಷಬ್ ಶೆಟ್ಟಿ ಅವರನ್ನು ರಾಜ್ಯ ಸರ್ಕಾರ ನೇಮಕ ಮಾಡಿರುವುದು ಭಾರೀ ಟೀಕೆಗೆ ಗುರಿಯಾಗಿದೆ.

ರಿಷಬ್ ಶೆಟ್ಟಿ ಅವರು ಬಹಿರಂಗವಾಗಿಯೇ ಕಾಂಗ್ರೆಸ್ ನಾಯಕರನ್ನು ಟೀಕಿಸಿರುವಾಗ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ ಇಂತಹ ನಿರ್ಧಾರ ತೆಗೆದುಕೊಂಡಿರುವುದು ನಗೆಪಾಟಲಿಗೆ ಈಡಾಗಿದೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಶುಕ್ರವಾರ ಕರಾವಳಿ ಪ್ರವಾಸೋದ್ಯಮ ಸಭೆ ನಡೆಸಲಾಯಿತು. ಸಭೆಯಲ್ಲಿ ಕೆಲವು ತೀರ್ಮಾನಗಳನ್ನು ಕೈಗೊಳ್ಳಲಾಗಿದೆ. ಸರ್ಕಾರ ನಿರ್ಧಾರ ಹೊರಬಿದ್ದ ಬಳಿಕ ಸಾಮಾಜಿಕ ಮಾಧ್ಯಮಗಳಲ್ಲಿ ಹಲವರು ಪ್ರತಿಕ್ರಿಯೆ ನೀಡಿದ್ದಾರೆ.

ಪತ್ರಕರ್ತ ನವೀನ್ ಸೂರಿಂಜೆ ಅವರು ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಂಚಿಕೊಂಡಿದ್ದು, ನಟ ರಿಷಬ್ ಶೆಟ್ಟಿ ಎಂಬವರು ಸಂಘಪರಿವಾರದ ವ್ಯಕ್ತಿ. ಹಿಂದುತ್ವದ ರಾಯಭಾರಿಯನ್ನು ಕರಾವಳಿಯ ಪ್ರವಾಸೋದ್ಯಮ ರಾಯಭಾರಿ ಎಂದು ನೇಮಿಸುವುದು ಅಪಾಯಕಾರಿ. ಅದಕ್ಕಿಂತ ನೇರವಾಗಿ ಕಲ್ಲಡ್ಕ ಭಟ್ಟರನ್ನೇ ಕರಾವಳಿ ಪ್ರವಾಸೋದ್ಯಮದ ರಾಯಭಾರಿಯನ್ನಾಗಿಸೋದು ಒಳ್ಳೆಯದು ಎಂದು ಟೀಕಿಸಿದ್ದಾರೆ.

ಮುಂದುವರಿದು, ರಿಷಬ್ ಶೆಟ್ಟಿಯ ಹಿಂದುತ್ವದ ಸಾಂಸ್ಕೃತಿಕ ರಾಜಕಾರಣ, ದಲಿತ ವಿರೋಧಿ ಸಾಂಸ್ಕೃತಿಕ ರಾಜಕಾರಣ ಕಾಂಗ್ರೆಸ್ಸಿಗರಿಗೆ ಸುಲಭದಲ್ಲಿ ಅರ್ಥವಾಗಲ್ಲ. ಆದರೆ, ತಮ್ಮ ಪಕ್ಷದ ನಾಯಕನನ್ನು ಅವಹೇಳನ ಮಾಡಿದ ಬಗ್ಗೆಯಾದರೂ ಅವರ ಮನಸ್ಸಿನೊಳಗೊಂದು ಕಹಿ ಇರಬೇಕಿತ್ತು. ನರೇಂದ್ರ ಮೋದಿಯವರನ್ನು ಅದ್ಭುತ ನಾಯಕ ಎನ್ನುವ ರಿಷಬ್ ಶೆಟ್ಟಿ, ರಾಹುಲ್ ಗಾಂಧಿಯ ಬಗ್ಗೆ ನೋ ಕಮೆಂಟ್ಸ್ ಎಂದು ನೀಚ ನಗು ವ್ಯಕ್ತಪಡಿಸುತ್ತಾರೆ. ಕಾಂಗ್ರೆಸ್ಸಿಗರಲ್ಲಿ ಸ್ವಾಭಿಮಾನ ಇದ್ದಿದ್ದರೆ ನಟ ರಿಷಬ್ ಶೆಟ್ಟಿಯನ್ನು ಹತ್ತಿರಕ್ಕೂ ಸೇರಿಸಿಕೊಳ್ಳುತ್ತಿರಲಿಲ್ಲ ಎಂದು ಕುಟುಕಿದ್ದಾರೆ.

ಬರಹಗಾರ ಶಶಿಧರ್ ಹೆಮ್ಮಾಡಿ ಅವರು, ಮೋದಿ ಭಕ್ತ, ಕಾಂಗ್ರೆಸ್ ವಿರೋಧಿ, ಕೋಮುವಾದಿಗಳ ಡಾರ್ಲಿಂಗ್, ತುಳುನಾಡಿನ ದೈವಗಳನ್ನು ತನ್ನ ಮನಸ್ಸಿಗೆ ಬಂದಂತೆ ಚಿತ್ರಿಸಿ ದುಡ್ಡು ಮಾಡಿದ ರಿಷಬ್ ಶೆಟ್ಟಿಯನ್ನು ಡಿಕೆಶಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಕರಾವಳಿಯ ಪ್ರವಾಸೋದ್ಯಮಕ್ಕೆ ಬ್ರಾಂಡ್ ಅಂಬಾಸಿಡರ್ ಆಗಿ ನೇಮಕ ಮಾಡಿದೆ. ಇದು ಸಿದ್ದರಾಮಯ್ಯನ ಕಾಂಗ್ರೆಸ್ ಸರ್ಕಾರಕ್ಕೂ ಡಿಕೆಶಿ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೂ ಇರುವ ಸೈದ್ಧಾಂತಿಕ ಭಿನ್ನತೆ. ಇದು ಕಾಂಗ್ರೆಸ್ ಸರ್ಕಾರದ ಭಾರೀ ದುರಂತ ಎಂದು ಬೇಸರ ಹೊರಹಾಕಿದ್ದಾರೆ.

ಬರಹಗಾರ ಎಸ್.ಎ. ರಹಿಮಾನ್ ಮಿತ್ತೂರು, ಕರಾವಳಿಯ ಪ್ರವಾಸೋದ್ಯಮ ರಾಯಭಾರಿಯಾಗಿ ನೇಮಿಸಲು ಕಾಂಗ್ರೆಸ್ ಸರಕಾರಕ್ಕೆ ಕರಾವಳಿಯಲ್ಲಿ ಕಾಂಗ್ರೆಸ್ಸಿಗರ ಕೊರತೆ ಎದುರಾಗಿರಬೇಕು. ಬಹಿರಂಗವಾಗಿ ಸಂಘ ಪರಿವಾರವನ್ನು ಬೆಂಬಲಿಸುವ ಅಪ್ಪಟ ಸಂಘಿ ರಿಷಬ್ ಶೆಟ್ಟಿಯನ್ನು ಕರಾವಳಿಯ ಪ್ರವಾಸೋದ್ಯಮ ರಾಯಭಾರಿಯಾಗಿ ನೇಮಿಸುವಷ್ಟು ಈ ಸರಕಾರ ಬರಗೆಟ್ಟು ಹೋಗಿದೆ ಎಂದರೆ ನಂಬಲಾಗುತ್ತಿಲ್ಲ. ಇಂತಹವರನ್ನೆಲ್ಲ ನೇಮಿಸಿ ಇನ್ನು ಇವರು ಕರಾವಳಿಯಲ್ಲಿ ಪಕ್ಷವನ್ನು ಬಲಪಡಿಸುವುದಂತೆ ಎಂದು ವ್ಯಂಗ್ಯವಾಡಿದ್ದಾರೆ.

ಯೋಗ ಆರೋಗ್ಯಕರ ಮತ್ತು ಸಮತೋಲಿತ ಜೀವನಕ್ಕೆ ಅತ್ಯಂತ ವಿಶ್ವಾಸಾರ್ಹ ಸಾಧನ : ಗೆಹ್ಲೋಟ್

ಬೆಂಗಳೂರು, ಜೂ. 21 - ಭಾರತದ ಸಾವಿರಾರು ವರ್ಷಗಳಷ್ಟು ಹಳೆಯದಾದ ಯೋಗ ಪರಂಪರೆಗೆ ಜಾಗತಿಕ ಮನ್ನಣೆ ತಂದುಕೊಟ್ಟಿರುವ ಅಂತಾರಾಷ್ಟ್ರೀಯ ಯೋಗ ದಿನವು ಇಂದು ವಿಶ್ವದ ಅತಿದೊಡ್ಡ ಆರೋಗ್ಯ ಮತ್ತು ಕ್ಷೇಮ ಅಭಿಯಾನಗಳಲ್ಲಿ ಒಂದಾಗಿ ರೂಪುಗೊಂಡಿದೆ ಎಂದು ಕರ್ನಾಟಕದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಹೇಳಿದರು.



ಆಯುಷ್ ಇಲಾಖೆಯಿಂದ ವಿಧಾನಸೌಧದ ಮುಂಭಾಗದಲ್ಲಿ ಆಯೋಜಿಸಲಾದ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ 2026 ಕಾರ್ಯಕ್ರಮದಲ್ಲಿ ಭಾಗವಹಿಸಿ ಯೋಗಾಭ್ಯಾಸ ಮಾಡಿದ ಬಳಿಕ ಮಾತನಾಡಿ, ಭಾರತದ ಪ್ರಾಚೀನ ಸಂಪ್ರದಾಯದ ಅಮೂಲ್ಯ ಕೊಡುಗೆಯಾದ ಯೋಗವು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತೇಜಿಸುವ ಅತ್ಯಂತ ವಿಶ್ವಾಸಾರ್ಹ ಸಾಧನವಾಗಿದೆ. ಯೋಗವು ಮನಸ್ಸು ಮತ್ತು ದೇಹದ ಏಕತೆ, ಆಲೋಚನೆ ಮತ್ತು ಕ್ರಿಯೆಯ ಸಮನ್ವಯ, ಸಂಯಮ ಮತ್ತು ತೃಪ್ತಿ, ಮನುಷ್ಯ ಮತ್ತು ಪ್ರಕೃತಿಯ ನಡುವಿನ ಸಾಮರಸ್ಯ ಹಾಗೂ ಆರೋಗ್ಯ ಮತ್ತು ಯೋಗಕ್ಷೇಮದ ಸಮಗ್ರ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ ಎಂದು ರಾಜ್ಯಪಾಲರು ತಿಳಿಸಿದರು.

ಇಂದಿನ ಸ್ಪರ್ಧಾತ್ಮಕ ಮತ್ತು ಒತ್ತಡದ ಜೀವನಶೈಲಿಯು ಅನೇಕ ದೈಹಿಕ ಮತ್ತು ಮಾನಸಿಕ ಸವಾಲುಗಳನ್ನು ಸೃಷ್ಟಿಸಿದ್ದು, ಅಂತಹ ಸಂದರ್ಭದಲ್ಲಿ ಯೋಗವು ಆರೋಗ್ಯಕರ ದೇಹ, ಶಾಂತ ಮನಸ್ಸು ಮತ್ತು ಸಕಾರಾತ್ಮಕ ದೃಷ್ಟಿಕೋನವನ್ನು ಒದಗಿಸುತ್ತದೆ ಎಂದು ಅವರು ಹೇಳಿದರು.

ಪ್ರಧಾನಮಂತ್ರಿ ಮೋದಿಯವರ ಉಪಕ್ರಮದ ಮೇರೆಗೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 2014ರಲ್ಲಿ ಜೂನ್ 21 ಅನ್ನು ಅಂತರರಾಷ್ಟ್ರೀಯ ಯೋಗ ದಿನವೆಂದು ಘೋಷಿಸಿರುವುದು ದೇಶದ ಪ್ರತಿಯೊಬ್ಬ ನಾಗರಿಕನಿಗೂ ಹೆಮ್ಮೆಯ ವಿಷಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಸಚಿವರಾದ ಯು.ಟಿ. ಖಾದರ್, ನಟಿ ಸುಧಾರಾಣಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಅಡ್ಡ ಮತದಾನದ ಕುರಿತು ಧರ್ಮಸ್ಥಳದ ಶ್ರೀ ಕ್ಷೇತ್ರದಲ್ಲಿ ಶಾಸಕಾಂಗ ಪಕ್ಷದ ಸಭೆ : ಬಿ.ವೈ. ವಿಜಯೇಂದ್ರ



ಬೆಂಗಳೂರು, ಜೂ. 21 - ವಿಧಾನಪರಿಷತ್ ಚುನಾವಣೆಯಲ್ಲಿನ ಅಡ್ಡ ಮತದಾನದ ಆರೋಪ ಕುರಿತಂತೆ ಅತಿ ಶೀಘ್ರದಲ್ಲೇ ಧರ್ಮಸ್ಥಳದ ಶ್ರೀ ಕ್ಷೇತ್ರದಲ್ಲಿ ನಮ್ಮ ಶಾಸಕಾಂಗ ಪಕ್ಷದ ಸಭೆ ಕರೆಯಲು ನಿರ್ಧರಿಸಿರುವುದಾಗಿ ಶಾಸಕ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ತಿಳಿಸಿದ್ದಾರೆ.

ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ವಿಪಕ್ಷ ನಾಯಕ ಆರ್. ಅಶೋಕ್ ಅವರಿಗ ಸಭೆ ಕರೆಯುವ ಸಂಬಂಧ ಮಾತನಾಡುವೆ; ನಾವೆಲ್ಲರೂ ದೇವರನ್ನು ನಂಬುವವರು. ಧರ್ಮಸ್ಥಳದಲ್ಲಿ ಸಭೆ ಕರೆದು ತಾಯಿಗೆ ದ್ರೋಹ ಮಾಡಿದ ಶಾಸಕರ ಮತ್ತು ಸತ್ಯದ ಬಗ್ಗೆ ಗೊತ್ತಾಗಬೇಕಿದೆ. ಶ್ರೀ ಕ್ಷೇತ್ರದಲ್ಲಿ ತೀರ್ಮಾನ ಆಗಬೇಕೆಂದು ನಿರ್ಧಾರ ಮಾಡಿದ್ದೇನೆ ಎಂದು ವಿವರಿಸಿದರು.

ಕಾರ್ಯಕರ್ತರಿಗೆ ನೋವಾಗುವುದು ಸಹಜ. ಅಡ್ಡ ಮತದಾನವನ್ನು ನನ್ನ ಮನಸಾಕ್ಷಿ ಒಪ್ಪುತ್ತಿಲ್ಲ; ಸಾಮಾಜಿಕ ಜಾಲತಾಣದಲ್ಲಿ ಬರುತ್ತಿರುವ ಟೀಕೆಗಳ ಬಗ್ಗೆ ನಾನು ಕೂಡ ಗಮನಿಸಿದ್ದೇನೆ. ಇದನ್ನೇ ನೆಪ ಮಾಡಿಕೊಂಡು ಪರೋಕ್ಷ ದಾಳಿ ಮಾಡುವ ಕೆಲಸ ಹಾಗೂ ಕುತಂತ್ರ ನಡೆಯುತ್ತಿದೆ ಎಂದು ಆಕ್ಷೇಪಿಸಿದರು. ಈ ಸಂಬಂಧ ಸತ್ಯಾಸತ್ಯತೆಯನ್ನು ನಾವು ಜನರ ಮುಂದೆ ಇಡಬೇಕಾಗಿದೆ. ಪಕ್ಷದ ಗೌರವ ಉಳಿಸಬೇಕಿದೆ. ಕಾರ್ಯಕರ್ತರಿಗೆ ನೆಮ್ಮದಿ ನೀಡಬೇಕಿದೆ ಎಂದು ಅವರು ನುಡಿದರು.

ಮೊನ್ನೆ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿಯಿಂದಲೂ 4 ಅಡ್ಡ ಮತದಾನ ಆಗಿರುವ ಬಗ್ಗೆ ಚರ್ಚೆ ಮಾಧ್ಯಮಗಳಲ್ಲಿ ನಡೆಯುತ್ತಿದೆ. ಪತ್ರಿಕೆಗಳಲ್ಲೂ ಬಂದಿದೆ. ಸಾಮಾಜಿಕ ಜಾಲತಾಣದಲ್ಲೂ ಅತಿ ಹೆಚ್ಚು ಚರ್ಚೆ ಆಗುತ್ತಿದೆ ಎಂದರು. ರಾಜ್ಯದಲ್ಲಿ ನಮ್ಮ ಕಾರ್ಯಕರ್ತರು ನಮ್ಮ ಶಾಸಕರ ನಡವಳಿಕೆ ಬಗ್ಗೆ ಬಹಳ ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಬಿಜೆಪಿಯ 63 ಶಾಸಕರ ಬಗ್ಗೆ ಅನುಮಾನ ಹುಟ್ಟುವಂತಾಗಿದೆ ಎಂದು ತಿಳಿಸಿದರು.

ರಾಜ್ಯದ ಅಧ್ಯಕ್ಷನಾಗಿ ಈ ಬೆಳವಣಿಗೆ ನನಗೂ ಸಾಕಷ್ಟು ಬೇಸರ ತಂದಿದೆ. ನಾನು ಬೆಳಿಗ್ಗೆ 3 ಗಂಟೆಗೇ ಎದ್ದು ಕೂತಿದ್ದೇನೆ. ಇದನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಬೇಕೆಂಬ ವಿಚಾರವನ್ನು ಮುಂದಿಟ್ಟುಕೊಂಡು ನಿನ್ನೆ ಬೆಳಿಗ್ಗೆ 7 ಗಂಟೆಗೆ ರಾಷ್ಟ್ರೀಯ ಅಧ್ಯಕ್ಷರಿಗೆ ದೂರವಾಣಿ ಕರೆ ಮಾಡಿದ್ದೇನೆ ಎಂದು ವಿಜಯೇಂದ್ರ ಅವರು ತಿಳಿಸಿದರು.

ನಾನು ಮತ್ತು ಆರ್.ಅಶೋಕ್ ಅವರು ದೆಹಲಿಗೆ ಹೋಗಲಿದ್ದೇವೆ ಎಂದ ಅವರು, ಮತ್ತೊಂದು ಕಡೆ ಸತ್ಯಶೋಧನಾ ಸಮಿತಿ ಮಾಡಿದ್ದೇವೆ. ಸಿ.ಟಿ. ರವಿ, ಮಹೇಶ್ ಟೆಂಗಿನಕಾಯಿ, ಮಾಜಿ ಸಚಿವ ಕೊಳ್ಳೇಗಾಲ ಮಹೇಶ್ ಅವರು ಈ ಸಮಿತಿಯಲ್ಲಿದ್ದಾರೆ ಎಂದರು.

ಇನ್ನೊಂದು ಪ್ರಶ್ನೆಗೆ ಉತ್ತರಿಸಿದ ಅವರು, ನಮ್ಮದು ರಾಷ್ಟ್ರೀಯ ಪಕ್ಷ. ನಾವು ಶಾಸಕರಾಗಿ ಗೆಲ್ಲಲು ಪಕ್ಷದ ಆಶೀರ್ವಾದವಿದೆ. ಕಾರ್ಯಕರ್ತರ ಪರಿಶ್ರಮವೂ ಇದೆ. ಇದರಿಂದ ಕಾರ್ಯಕರ್ತರಿಗೆ ಆಘಾತ, ನೋವಾಗಿದೆ. ಮತದಾರರು ಇವತ್ತು ನರೇಂದ್ರ ಮೋದಿಜೀ ಅವರನ್ನು ನೋಡಿಕೊಂಡು ಮತ ಕೊಟ್ಟಿದ್ದಾರೆ. ನಮ್ಮ ಯೋಗ್ಯತೆ ಒಂದು ಕಡೆ ಬದಿಗಿಡಿ. ಶಾಸಕರು ಯಾರೆಷ್ಟೇ ದೊಡ್ಡವರಾಗಿದ್ದರೂ ಗೌಪ್ಯ ಮತದಾನ ನಡೆದ ಕಾರಣ ನನ್ನನ್ನೂ ಸೇರಿ 63 ಶಾಸಕರನ್ನೂ ಅನುಮಾನ ಪಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಿಳಿಸಿದರು. ಪುಕ್ಸಟ್ಟೆ ಮತ ಹಾಕಿರಲು ಸಾಧ್ಯ ಇಲ್ಲ ಎಂದು ಮತ್ತೊಂದು ಪ್ರಶ್ನೆಗೆ ಉತ್ತರ ಕೊಟ್ಟರು.

ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಚುನಾವಣೆಯಲ್ಲಿ ಗೆದ್ದು ತೋರಿಸಲಿ..

ಬಿಜೆಪಿಯಲ್ಲಿ ಆಮೂಲಾಗ್ರ ಬದಲಾವಣೆ ಆಗಬೇಕು; ವಿಪಕ್ಷ ನಾಯಕನ ಸ್ಥಾನವನ್ನು ಯತ್ನಾಳ್‌ರಿಗೆ ಕೊಡಬೇಕೆಂಬ ಕುಮಾರ್ ಬಂಗಾರಪ್ಪ ಅವರ ಹೇಳಿಕೆ ಕುರಿತಂತೆ ಪತ್ರಕರ್ತರು ಗಮನ ಸೆಳೆದರು. ಯಾರಿಗೆ ಏನು ಉತ್ತರ ಕೊಡಬೇಕೋ ಕೊಡುತ್ತೇನೆ. ಪುಕ್ಸಟ್ಟೆ ಹೇಳಿಕೆ ಕೊಡುವವರು ತಮ್ಮ ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯತ್ ಚುನಾವಣೆಗೆ ಬಂದು ನಿಂತುಕೊಳ್ಳಲಿ. ವಿಧಾನಸಭಾ ಚುನಾವಣೆ ದೂರದ ಮಾತು. ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಚುನಾವಣೆಯಲ್ಲಿ ನಿಂತು ಗೆದ್ದು ತೋರಿಸಲಿ. ಆಮೇಲೆ ಅದರ ಬಗ್ಗೆ ಮಾತನಾಡುವೆ ಎಂದು ಸವಾಲೆಸೆದರು.

ಧರ್ಮಸ್ಥಳದಲ್ಲಿ ಆಣೆ-ಪ್ರಮಾಣಕ್ಕೆ ಶಾಸಕ ಎಸ್ ಸುರೇಶ್ ಕುಮಾರ್ ವಿರೋಧ

ರಾಜ್ಯಾಧ್ಯಕ್ಷರ ನಿರ್ಧಾರಕ್ಕೆ ಇದೀಗ ಬಿಜೆಪಿ ಶಾಸಕರಿಂದಲೇ ವಿರೋಧ ವ್ಯಕ್ತವಾಗಿದೆ. ನಿಜಕ್ಕೂ ನನಗೆ ನಮ್ಮ ಪಕ್ಷದ ರಾಜ್ಯಾಧ್ಯಕ್ಷರ ಈ ಘೋಷಣೆ ದಿಗ್ಭ್ರಮೆ ಉಂಟು ಮಾಡಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಅದರದೇ ಪಾವಿತ್ರ್ಯತೆ ಹೊಂದಿದೆ. ರಾಜಕಾರಣದಲ್ಲಿ ನಡೆದುಬಿಟ್ಟಿರುವ ಕೀಳು ಮಟ್ಟದ ಅಡ್ಡಮತದ ಅಪಚಾರಕ್ಕೆ ಧರ್ಮಸ್ಥಳವನ್ನು ಎಳೆಯುವುದು ದಯವಿಟ್ಟು ಬೇಡ ಎಂದು ಬಿಜೆಪಿ ಹಿರಿಯ ಶಾಸಕ ಎಸ್ ಸುರೇಶ್ ಕುಮಾರ್ ಮನವಿ ಮಾಡಿದ್ದಾರೆ.

ಈ ಅಪಚಾರ ಮಾಡಿರುವವರು ಹೆತ್ತ ತಾಯಿಗೆ ದ್ರೋಹ ಮಾಡಿದಷ್ಟೇ ಪಾಪ ಮಾಡಿದ್ದಾರೆ. ಈಗಾಗಲೇ ಹಲವರು ಧರ್ಮಸ್ಥಳದ ಹಿರಿಮೆಯನ್ನು ಹಾಳು ಮಾಡುವ ಕೆಲಸವನ್ನು ಮಾಡುವುದರಲ್ಲಿ ವಿಕೃತಾನಂದ ಪಡೆದಿದ್ದಾರೆ. ಇಡೀ ನಾಡಿನ ಜನತೆ ನಂಬಿಕೆ ಇಟ್ಟಿರುವ ಶ್ರೀ ಕ್ಷೇತ್ರ ಧರ್ಮಸ್ಥಳದ ಮಂಜುನಾಥ ಸ್ವಾಮಿ ಸನ್ನಿಧಾನದಲ್ಲಿ, ಒಂದೊಮ್ಮೆ ಅಡ್ಡ ಮತದಾನ ಮಾಡಿದ ವೀರರು ಆಣೆ - ಪ್ರಮಾಣ ಮಾಡಿ ತಾವು ಉಳಿದುಕೊಳ್ಳಲು ತಮ್ಮ ನೈತಿಕ ದಿವಾಳಿತನ ತೋರಿಸಿದರೆ, ಅದರಿಂದ ಅಪಚಾರದ ಪ್ರಮಾಣ ಹೆಚ್ಚಾಗುತ್ತದಷ್ಟೇ. ದಯವಿಟ್ಟು ಸ್ವಾಮಿ ಮಂಜುನಾಥನ ಶ್ರೇಷ್ಠತೆಯನ್ನು ಈ ರೀತಿ ಒರೆ ಹಚ್ಚುವುದು ಯಾವುದೇ ಕಾರಣಕ್ಕೂ ಬೇಡ ಎಂದು ಅವರು ವಿಜಯೇಂದ್ರ ಅವರನ್ನು ಕೇಳಿಕೊಂಡು ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಹಾಕಿದ್ದಾರೆ.

ಬಿಡದಿ ಟೌನ್‌ಶಿಫ್ ಯೋಜನೆ ವಿರೋಧಿಸಿ ಜೆಡಿಎಸ್‌ನಿಂದ ಬೃಹತ್ ಹೋರಾಟ

ಬಿಡದಿ, ಜೂ. 21 - ರಾಜ್ಯ ಸರ್ಕಾರದ ಗ್ರೇಟರ್ ಬೆಂಗಳೂರು ಇಂಟಿಗ್ರೇಟೆಡ್ ಟೌನ್‌ಶಿಪ್ ಯೋಜನೆಗೆ ವಿರೋಧವಾಗಿ ಜೆಡಿಎಸ್ ಇಂದು ಬಿಡದಿ ಭಾಗದಲ್ಲಿ ಬೃಹತ್ ಹೋರಾಟ ನಡೆಸಿತು.

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ರೈತರ ಪಾದಯಾತ್ರೆಗೆ ಚಾಲನೆ ನೀಡಲಾಯಿತು. ಅಂಚಿಪುರ ಗ್ರಾಮದಿಂದ ಆರಂಭವಾದ ಈ ಪಾದಯಾತ್ರೆ ಬನ್ನಿಗಿರಿ, ಮರೇವೇಗೌಡನದೊಡ್ಡಿ, ಗುಂಡುತೋಪು, ಗೊಲ್ಲಹಳ್ಳಿ, ಕೋಡಿಪಾಳ್ಯ ಹಾಗೂ ಹೊಸೂರುವರೆಗೆ ಸಾಗಿದ್ದು, ಹೊಸೂರಿನಲ್ಲಿ ಬಹಿರಂಗ ಸಭೆಯೊಂದಿಗೆ ಸಮಾರೋಪಗೊಂಡಿತು.

ರೈತರನ್ನುದ್ದೇಶಿಸಿ ಮಾತನಾಡಿದ ನಿಖಿಲ್ ಕುಮಾರಸ್ವಾಮಿ, ಸರ್ಕಾರ ಈಗಾಗಲೇ ಅಂತಿಮ ಅಧಿಸೂಚನೆ ಹೊರಡಿಸಿದ್ದು, ರೈತರ ಮೇಲೆ ಒತ್ತಡ ಹೇರುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು. ರೈತರ ಒಗ್ಗಟ್ಟು ಮುರಿಯಲು ದಲ್ಲಾಳಿಗಳನ್ನು ಬಳಸಲಾಗುತ್ತಿದೆ. ಇದಕ್ಕೆ ಯಾರ ಬೆಂಬಲವಿದೆ ಎಂಬುದು ನಮಗೆ ಗೊತ್ತಿದೆ ಎಂದು ಹೇಳಿದರು.

ಯೋಜನೆಗಾಗಿ 500 ರಿಂದ 518 ಎಕರೆ ಕೃಷಿ ಭೂಮಿ ಸ್ವಾಧೀನಕ್ಕೆ ಸರ್ಕಾರ ಮುಂದಾಗಿದ್ದು, ಇದರಿಂದ 26 ಗ್ರಾಮಗಳ 755 ರೈತ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಲಿವೆ ಎಂದು ಜೆಡಿಎಸ್ ವಾದಿಸಿದೆ. ಶೇ.82ರಷ್ಟು ಸಣ್ಣ ಹಾಗೂ ಅತಿ ಸಣ್ಣ ರೈತರು, ದಲಿತ ಹಾಗೂ ಹಿಂದುಳಿದ ವರ್ಗದವರು ಹೆಚ್ಚಿನ ಹೊಡೆತ ಅನುಭವಿಸಲಿದ್ದಾರೆ ಎಂದು ಪಕ್ಷ ಆರೋಪಿಸಿದೆ. ರೈತರ ಅನುಮತಿ ಪಡೆಯದೇ ಭೂಸ್ವಾಧೀನ ಪ್ರಕ್ರಿಯೆ ನಡೆಸಲಾಗುತ್ತಿದ್ದು, 2013ರ ಭೂಸ್ವಾಧೀನ, ಪುನರ್ವಸತಿ ಮತ್ತು ಪರಿಹಾರ ಕಾಯ್ದೆಯ ಉಲ್ಲಂಘನೆಯಾಗಿದೆ ಎಂದು ನಿಖಿಲ್ ಆರೋಪಿಸಿದರು.



ಸರ್ಕಾರಕ್ಕೆ ಸವಾಲು ಹಾಕಿದ ಅವರು, ರೆಡ್ ಝೋನ್ ಎಂದು ಘೋಷಿಸಿರುವ ಪ್ರದೇಶವನ್ನು ಡಿ-ನೋಟಿಫೈ ಮಾಡಲು ಸರ್ಕಾರಕ್ಕೆ ಸಾಧ್ಯವಾಗದಿದ್ದರೆ ಹೇಳಲಿ. ನಾವು ಅಧಿಕಾರಕ್ಕೆ ಬಂದ ಬಳಿಕ ಅದನ್ನು ಮಾಡುತ್ತೇವೆ ಎಂದು ಘೋಷಿಸಿದರು.

ತಮ್ಮ ಕುಟುಂಬದ ಜಮೀನು ಕುರಿತು ಕೇಳಿಬರುತ್ತಿರುವ ಆರೋಪಗಳಿಗೆ ಉತ್ತರಿಸಿದ ನಿಖಿಲ್, ಅನಿತಾ ಕುಮಾರಸ್ವಾಮಿ ಹೆಸರಲ್ಲಿ 27 ಎಕರೆ ಹಾಗೂ ನನ್ನ ಹೆಸರಲ್ಲಿ 5 ಎಕರೆ ಜಮೀನನ್ನು ಕೋವಿಡ್ ಅವಧಿಯಲ್ಲಿ ಖರೀದಿಸಲಾಗಿದೆ. ಹೈನುಗಾರಿಕೆ ಆಧಾರಿತ ಹಾಲು ಸಂಸ್ಕರಣಾ ಘಟಕ ಸ್ಥಾಪನೆ ಉದ್ದೇಶದಿಂದ ಮಾತ್ರ ಜಮೀನು ಖರೀದಿಸಿದ್ದು, ಬೇರೆ ಯಾವುದೇ ಉದ್ದೇಶ ಇಲ್ಲ ಎಂದು ಸ್ಪಷ್ಟಪಡಿಸಿದರು.

ನಮ್ಮ ಕುಟುಂಬದ ಹೆಸರಲ್ಲಿ ಇರುವ ಆಸ್ತಿಯನ್ನೇ ರೈತರು ಹಾಗೂ ಸಾರ್ವಜನಿಕರ ಉದ್ದೇಶಕ್ಕಾಗಿ ಆಸ್ಪತ್ರೆ ಅಥವಾ ವೃದ್ಧಾಶ್ರಮ ನಿರ್ಮಾಣಕ್ಕೆ ನೀಡಲು ಸಿದ್ಧ. ಆದರೆ, ಸರ್ಕಾರ ಈ ಭೂಸ್ವಾಧೀನವನ್ನು ಕೈಬಿಡಬೇಕು. ಯೋಜನೆಯ ತಾಂತ್ರಿಕ ಮಾಹಿತಿಯನ್ನು ರೈತರ ಮುಂದೆ ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದರು.

ಯೋಜನೆಯಿಂದ ಹೈನುಗಾರಿಕೆ ಹಾಗೂ ರೇಷ್ಮೆ ಕೃಷಿಗೆ ತೀವ್ರ ಹೊಡೆತ ಬೀಳಲಿದೆ ಎಂದು ಅವರು ಎಚ್ಚರಿಸಿದರು. ಈ ಯೋಜನೆ ಯಾರ ಅನುಕೂಲಕ್ಕಾಗಿ? ಯಾರಿಗೆ ಲಾಭ ಮಾಡಿಕೊಡಲು ಹೊರಟಿದ್ದೀರಿ? ಇದರಲ್ಲಿ ನಿಮ್ಮ ಪರ್ಸೆಂಟೇಜ್ ಎಷ್ಟು? ಎಂದು ಸರ್ಕಾರವನ್ನು ಪ್ರಶ್ನಿಸಿದರು.

ಇದೇ ವೇಳೆ, ಯೋಜನೆಗೆ ಬಿಜೆಪಿ ಬೆಂಬಲ ವ್ಯಕ್ತಪಡಿಸಿದ್ದು, ರೈತರ ಹೋರಾಟಕ್ಕೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಸೇರಿದಂತೆ ಬಿಜೆಪಿ ಮುಖಂಡರು ಸಹ ಬೆಂಬಲ ಸೂಚಿಸಿದ್ದಾರೆ. ಇತ್ತ ಸರ್ಕಾರ ಮಾತ್ರ, ಬಿಡದಿ ಟೌನ್‌ಶಿಪ್ ಯೋಜನೆ ಭವಿಷ್ಯದ ಎಐ ಸಿಟಿ ಹಾಗೂ ಉಪನಗರ ಅಭಿವೃದ್ಧಿಗೆ ಮಹತ್ವದ್ದಾಗಿದ್ದು, ಬಹುತೇಕ ರೈತರ ಒಪ್ಪಿಗೆಯೊಂದಿಗೆ ಯೋಜನೆ ಜಾರಿಯಾಗುತ್ತಿದೆ ಎಂದು ಸಮರ್ಥಿಸಿಕೊಂಡಿದೆ.

ಬಿಡದಿ ಟೌನ್‌ಶಿಪ್ ವಿವಾದ ಈಗ ಅಭಿವೃದ್ಧಿ ಯೋಜನೆಯ ಮಿತಿಯನ್ನು ಮೀರಿ, ರಾಜ್ಯ ರಾಜಕೀಯದ ಪ್ರಮುಖ ಸಂಘರ್ಷವಾಗಿ ರೂಪುಗೊಂಡಿದ್ದು, ಮುಂದಿನ ದಿನಗಳಲ್ಲಿ ರೈತರ ಹೋರಾಟ ಯಾವ ತಿರುವು ಪಡೆಯಲಿದೆ ಎಂಬುದು ಕುತೂಹಲ ಮೂಡಿಸಿದೆ.

ಯೋಗ 'ಜೀವಿತಾವಧಿಯ ಅಭ್ಯಾಸ'ವಾಗಬೇಕು; ಪ್ರಧಾನಿ ಮೋದಿ

ಮೊದಲ ಪುಟದಿಂದ

ಭಗವದ್ಗೀತೆಯನ್ನು ಉಲ್ಲೇಖಿಸಿದ ಮೋದಿ, ಕೆಲಸ, ಪೋಷಣೆ ಮತ್ತು ನಿದ್ರೆಯನ್ನು ಒಳಗೊಂಡ ಸಮತೋಲಿತ ಜೀವನಶೈಲಿಯು ದುಃಖವನ್ನು ನಿವಾರಿಸಲು ಪ್ರಮುಖವಾಗಿದೆ ಎಂದು ಒತ್ತಿ ಹೇಳಿದರು.

'ಆ ಸಮತೋಲನವು ಯೋಗದ ಮೂಲಭೂತ ನಿರ್ಣಾಯಕವಾಗಿದೆ, ಅದು ನಮ್ಮ ಜೀವನದ ನಿರ್ಣಾಯಕವಾಗಿದೆ' ಎಂದು ಅವರು ತಿಳಿಸಿದರು.

ಆಧುನಿಕ ಜೀವನಶೈಲಿಗಳು ಆಗಾಗ್ಗೆ ಈ ಸಮತೋಲನವನ್ನು ಅಡ್ಡಿಪಡಿಸುತ್ತವೆ ಎಂದು ಗಮನಿಸಿದ ಅವರು, ಯೋಗವು ನಮ್ಮ ಜೀವನವನ್ನು ಸಮತೋಲಿತ ರೀತಿಯಲ್ಲಿ ಬದುಕಲು ಕಲಿಯುವುದನ್ನು ನಮಗೆ ಕಲಿಸುತ್ತದೆ.ಅದು ನಮಗೆ ಏನು ಮಾಡಬೇಕೆಂದು ಮತ್ತು ಏನು ಮಾಡಬಾರದು ಎಂಬುದನ್ನು ಕಲಿಸುತ್ತದೆ. ನಾವು ನಮ್ಮ ದೇಹವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಲು ಕಲಿತಾಗ, ಆರೋಗ್ಯವು ಅಭ್ಯಾಸವಾಗುತ್ತದೆ ಎಂದು ಹೇಳಿದರು.

ಮಾನಸಿಕ ಯೋಗಕ್ಷೇಮ ಮತ್ತು ಸ್ವಯಂ-ಅರಿವಿನ ಮೂಲಕ ಜನರು ದೈಹಿಕ ಸದೃಢತೆಯನ್ನು ಕಂಡುಕೊಳ್ಳಲು ಯೋಗವು ಸಹಾಯ ಮಾಡುತ್ತದೆ ಎಂದು ಪ್ರಧಾನಿ ವಿವರಿಸಿದರು.

ವೈಯಕ್ತಿಕ ಪರಿವರ್ತನೆಯನ್ನು ಜಾಗತಿಕ ಸಾಮರಸ್ಯದೊಂದಿಗೆ ಸಂಪರ್ಕಿಸಿದ ಮೋದಿ, ಮಾಡಬೇಕಾದ ಮತ್ತು ಮಾಡಬಾರದ ವಿಷಯಗಳನ್ನು ಗುರುತಿಸುವ ಪ್ರಜ್ಞೆಯು ಅಂತರಿಕ ಶಾಂತಿಯನ್ನು ತರುವುದಲ್ಲದೆ, ವಿಶ್ವ ಶಾಂತಿಯ ಹಾದಿಯನ್ನು ತೆರೆಯುತ್ತದೆ. ಅದಕ್ಕಾಗಿಯೇ ಯೋಗವು ನಮ್ಮ ವೈಯಕ್ತಿಕ ಜೀವನಶೈಲಿಗೆ ಮಾತ್ರ ಅಗತ್ಯವಾಗಿಲ್ಲ, ಈ ಪ್ರಪಂಚದ ಉತ್ತಮ ಭವಿಷ್ಯಕ್ಕೂ ಇದು ಅತ್ಯಗತ್ಯ ಎಂದರು.

ಹಲವಾರು ಪ್ರದೇಶಗಳು ಯುದ್ಧಗಳು ಮತ್ತು ರಾಜತಾಂತ್ರಿಕ ಒತ್ತಡಗಳಿಂದ ಬಳಲುತ್ತಿರುವ ಸಮಯದಲ್ಲಿ, ಮಾತುಕತೆ, ಸಹಬಾಳ್ವೆ ಹಾಗೂ ವಿವಾದಗಳ ಶಾಂತಿಯುತ ಪರಿಹಾರದ ಮೇಲೆ ಭಾರತದ ದೀರ್ಘಕಾಲೀನ ಒತ್ತು ಅವರ ಹೇಳಿಕೆಗಳನ್ನು ಪ್ರತಿಬಿಂಬಿಸುತ್ತದೆ. ಯೋಗವನ್ನು ಜೀವಿತಾವಧಿಯ ಅಭ್ಯಾಸವನ್ನಾಗಿ ಮಾಡುವಂತೆ ಜನರನ್ನು ಒತ್ತಾಯಿಸಿ ಮೋದಿ,ಯೋಗವನ್ನು ಕೇವಲ ಒಂದು ನಿರ್ದಿಷ್ಟ ದಿನಕ್ಕೆ ಅಥವಾ ಒಂದು ಕಾರ್ಯಕ್ರಮಕ್ಕೆ ಸೀಮಿತಗೊಳಿಸಬಾರದು ಎಂದು ಪ್ರತಿಪಾದಿಸಿದರು. ಬದಲಿಗೆ,ಅದನ್ನು ನಮ್ಮ ಮತ್ತು ನಮ್ಮ ಕುಟುಂಬಗಳ ಹಾಗೂ ನಮ್ಮ ಭವಿಷ್ಯದ ಪೀಳಿಗೆಯ ಜೀವನದ ಭಾಗವನ್ನಾಗಿ ಮಾಡಿಕೊಳ್ಳೋಣ ಎಂದರು.

ಯೋಗವನ್ನು ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ಗಡಿಗಳನ್ನು ಮೀರಿದ ಜಾಗತಿಕ ಚಳುವಳಿ ಎಂದು ಬಣ್ಣಿಸಿದ ಮೋದಿ, ಭೂಮಿಯ ಮೇಲಿನ ಅತಿ ಉದ್ದದ ದಿನವನ್ನು ಗುರುತಿಸುವ ಜೂ.21 ಈಗ ಯೋಗದ ಕಾರಣದಿಂದಾಗಿ ಅತಿದೊಡ್ಡ ಸಮುದಾಯ ಆಚರಣೆಯ ದಿನವಾಗಿದೆ. ಯೋಗವು ಜನರನ್ನು ಒಟ್ಟುಗೂಡಿಸುತ್ತದೆ. ಈ ಸಂದರ್ಭದಲ್ಲಿ ನಾನು ಪ್ರಪಂಚದ ಜನರನ್ನು ಅಭಿನಂದಿಸುತ್ತೇನೆ ಎಂದು ಅವರು ಹೇಳಿದರು.

ಈ ವರ್ಷದ ಧ್ಯೇಯವಾಕ್ಯ 'ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ'ವನ್ನು ಉಲ್ಲೇಖಿಸಿದ ಮೋದಿ, ಯೋಗವು ಎಲ್ಲಾ ವಯೋಮಾನದ ಜನರಿಗೆ ಪ್ರಯೋಜನವನ್ನು ನೀಡುತ್ತದೆ ಎಂದು ಒತ್ತಿ ತಿಳಿಸಿದರು.

'ಯೋಗವು ಕೇವಲ ದೈಹಿಕ ವ್ಯಾಯಾಮವಲ್ಲ. ಇದು ಯಾವುದೇ ವಯಸ್ಸಿನ ಗುಂಪಿಗೆ ಸೀಮಿತವಾಗಿಲ್ಲ. ಇದು ಮಾನವ ಚೈತನ್ಯದ ಅಭಿವ್ಯಕ್ತಿಯಾಗಿದೆ' ಎಂದು ಅವರು ಹೇಳಿದರು.

ವರ್ಷಗಳಲ್ಲಿ ಚೈತನ್ಯವನ್ನು ಕಾಪಾಡುವಲ್ಲಿ ಯೋಗದ ಪಾತ್ರವನ್ನು ಎತ್ತಿ ತೋರಿಸಿದ ಮೋದಿ ಅವರು,ನಾವು ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗದ ಬಗ್ಗೆ ಮಾತನಾಡುವಾಗ, ವಯಸ್ಸು ಮಾನವ ಸಾಮರ್ಥ್ಯವನ್ನು ಕಡಿಮೆ ಮಾಡದಂತೆ ಖಚಿತಪಡಿಸಿಕೊಳ್ಳುವ ಕೆಲಸ ಮಾಡುತ್ತಿದ್ದೇವೆ ಎಂದರು. ರವೀಂದ್ರನಾಥ ಟ್ಯಾಗೋರ್ ಮತ್ತು ಶ್ರೀ ಅರಬಿಂದೋ ಅವರ ವಿಚಾರಗಳನ್ನು ಉಲ್ಲೇಖಿಸಿ, ಮಾನವನ ತೃಪ್ತಿ ಸಮಾಜ, ಪ್ರಪಂಚ ಮತ್ತು ತನ್ನೊಂದಿಗಿನ ಸಂಪರ್ಕದಲ್ಲಿದೆ ಎಂದು ನುಡಿದರು.

ಯೋಗದ ಮೂಲಭೂತ ಕಲ್ಪನೆ ಈ ಸಂಪರ್ಕವಾಗಿದೆ. ಮಹರ್ಷಿ ಅರಬಿಂದೋ ಅವರ ಪ್ರಕಾರ ಕೇವಲ ನಮ್ಮ ಜೀವನದಲ್ಲಿದೆ, ನಾವು ಅದನ್ನು ಅರಿತುಕೊಳ್ಳಬೇಕು... ಯೋಗವು ನಮ್ಮ ಜೀವನದ ಭಾಗವಾದಾಗ, ಅದು ಮಾನವ ಏಕತೆಯ ತತ್ವವಾಗುತ್ತದೆ ಎಂದು ಅವರು ಹೇಳಿದರು.

ಬಿಳಿ ಟಿ-ಶರ್ಟ್ ಮತ್ತು ಬಿಳಿ ಪ್ಯಾಂಟ್ ಧರಿಸಿದ ಮೋದಿ, ರೆಡ್ ರೋಡ್‌ನಲ್ಲಿ ನಡೆದ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಸಾವಿರಾರು ಯೋಗಪ್ರಿಯರೊಂದಿಗೆ ಸೇರಿಕೊಂಡರು.

ಮೋದಿ ಎಲ್ಲಾ ವಯಸ್ಸಿನ ನಾಗರಿಕರೊಂದಿಗೆ ಯೋಗ ಮಾಡಿದರು, 40 ನಿಮಿಷಗಳ ಅವಧಿಯಲ್ಲಿ ಯೋಗಪ್ರಿಯರ ನಡುವೆ ನಡೆದು,ಶಿಷ್ಟಾಚಾರಗಳನ್ನು ನಿಕಟವಾಗಿ ಗಮನಿಸಿ ಕೆಲವು ಯೋಗಪ್ರಿಯರು ತಮ್ಮ ಭಂಗಿಗಳನ್ನು ಸರಿಪಡಿಸಲು ಸಹಾಯ ಮಾಡಿದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಾವಿರಾರು ಜನರಲ್ಲಿ ರಾಜ್ಯಪಾಲ ಆರ್‌ಎನ್ ರವಿ, ಮುಖ್ಯಮಂತ್ರಿ ಸುವೇಂದು ಅಧಿಕಾರಿ ಮತ್ತು ಪಶ್ಚಿಮ ಬಂಗಾಳ ಸರಕಾರದ ಹಲವಾರು ಸಚಿವರು ಸೇರಿದ್ದರು.

ಬಳಿಕ ಶ್ಯಾಮ ಪ್ರಸಾದ್ ಮುಖರ್ಜಿ ಬಂದರಿನಲ್ಲಿ, ಮೋದಿ ಮಾನವ ಸಾಮರ್ಥ್ಯದಿಂದ ರಾಷ್ಟ್ರೀಯ ಸಾಮರ್ಥ್ಯದತ್ತ ಗಮನ ಹರಿಸಿ, ಆರ್ಥಿಕ ಮತ್ತು ಕಾರ್ಯತಂತ್ರದ ಪ್ರಭಾವಕ್ಕೆ ಬಲವಾದ ಕಡಲ ಶಕ್ತಿ ಅತ್ಯಗತ್ಯ ಎಂದು ಪ್ರತಿಪಾದಿಸಿದರು.

ದೇಶದ ಆರ್ಥಿಕ ಮತ್ತು ಕಾರ್ಯತಂತ್ರದ ಪ್ರಭಾವಕ್ಕೆ ಬಲವಾದ ಕಡಲ ಸಾಮರ್ಥ್ಯಗಳ ನಿರ್ಣಾಯಕ ಅಂಶವಾಗಿದೆ ಎಂದು ಅವರು ಹೇಳಿದರು.

ಮೋದಿ ಸ್ಥಳೀಯವಾಗಿ ನಿರ್ಮಿಸಲಾದ ಸ್ಟೆಲ್ತ್ ಫ್ರಿಗೇಟ್ ದುನಗಿರಿ, ಸರ್ವೇ ಹಡಗು ಸಂಶೋಧಕ್ ಮತ್ತು ಜಲಾಂತರ್ಗಾಮಿ ವಿರೋಧಿ ಯುದ್ಧ ಆಳವಿಲ್ಲದ ನೀರಿನ ನೌಕೆ ಅಗ್ರೇ ಈ ಮೂರು ನೌಕಾ ಹಡಗುಗಳನ್ನು ಸೇವೆಗೆ ನಿಯೋಜಿಸಿದರು. ಭಾರತೀಯ ನೌಕಾಪಡೆಯ ಯುದ್ಧನೌಕೆ ವಿನ್ಯಾಸ ಬ್ಯೂರೋ ವಿನ್ಯಾಸಗೊಳಿಸಿದ್ದು ಮತ್ತು ಕೋಲ್ಕತ್ತಾ ಮೂಲದ ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ ಹಾಗೂ ಎಂಜಿನಿಯರ್ಸ್ ಲಿಮಿಟೆಡ್ ನಿರ್ಮಿಸಿದ ಈ ಹಡಗುಗಳು ಶೇ.75 ಕ್ಕಿಂತ ಹೆಚ್ಚು ಸ್ಥಳೀಯ ವಿಷಯವನ್ನು ಹೊಂದಿವೆ ಮತ್ತು 200ಕ್ಕೂ ಹೆಚ್ಚು ಎಂಎಸ್‌ಎಂಇಗಳ ಭಾಗವಹಿಸುವಿಕೆಯನ್ನು ಒಳಗೊಂಡಿವೆ. ರಕ್ಷಣೆಯಲ್ಲಿ ಸ್ವಾವಲಂಬನೆಯನ್ನು ಒತ್ತಿ ಹೇಳಿದ ಮೋದಿ, ನಮ್ಮ ಸಾಮರ್ಥ್ಯಗಳ ಗುರುತಿಸುವಿಕೆ ನಮ್ಮ ಸ್ವಾವಲಂಬನೆಯಲ್ಲಿದೆ ಮತ್ತು ಜಗತ್ತಿಗೆ ಮಾರುಕಟ್ಟೆಯಾಗುವುದರಲ್ಲಿ ಅಲ್ಲ.ಜಾಗತಿಕ ರಕ್ಷಣಾ ವಲಯದಲ್ಲಿ ಭಾರತ ಕೇವಲ ಖರೀದಿದಾರನಾಗಿ ಉಳಿಯಲು ಬಯಸುವುದಿಲ್ಲ ಎಂದು ಅವರು ಹೇಳಿದರು.

ಸಿಎಂಆರ್‌ಎಲ್ ಹಣ ವರ್ಗಾವಣೆ ಪ್ರಕರಣ: ಕೇರಳದ ಮಾಜಿ ಸಿಎಂ ಪುತ್ರಿ ವೀಣಾಗೆ ಇಡಿ ಮತ್ತೆ ಸಮನ್ಸ್

ಕೊಚ್ಚಿ, ಜೂ. 21 - ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಪುತ್ರಿ ವೀಣಾ ಟಿ ಅವರಿಗೆ ಇಡಿ ಹೊಸ ನೋಟಿಸ್ ಜಾರಿ ಮಾಡಿದ್ದು, ಗಣಿ ಕಂಪನಿ ಸಿಎಂಆರ್‌ಎಲ್ ಮತ್ತು ಅವರ ಈಗ ನಿಷ್ಕ್ರಿಯವಾಗಿರುವ ಐಟಿ ಸಂಸ್ಥೆಗೆ ಸಂಬಂಧಿಸಿದ ಹಣ ವರ್ಗಾವಣೆ ಪ್ರಕರಣದಲ್ಲಿ ಜೂನ್ 29 ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ ಎಂದು ಮೂಲಗಳು ಭಾನುವಾರ ತಿಳಿಸಿವೆ.

ಈ ಪ್ರಕರಣದಲ್ಲಿ ಕೇಂದ್ರ ಸಂಸ್ಥೆಯು ವೀಣಾ ಅವರನ್ನು ಎರಡನೇ ಸುತ್ತಿನ ವಿಚಾರಣೆ ನಡೆಸಲಿದೆ.

ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಜೂನ್ 17 ರಂದು ಜಾರಿ ನಿರ್ದೇಶನಾಲಯ (ಇಡಿ) ಕೊಚ್ಚಿ ಕಚೇರಿಯಲ್ಲಿ ಅವರನ್ನು ಒಂಬತ್ತು ಗಂಟೆಗಳಿಗೂ ಹೆಚ್ಚು ಕಾಲ ವಿಚಾರಣೆ ನಡೆಸಿತ್ತು.

ಜೂನ್ 19 ರಂದು, ನಡೆಯುತ್ತಿರುವ ತನಿಖೆಯ ಭಾಗವಾಗಿ ಇಡಿ ಅಧಿಕಾರಿಗಳು ತಿರುವನಂತಪುರಂನಲ್ಲಿರುವ ವೀಣಾ ಅವರ ಬ್ಯಾಂಕ್ ಲಾಕರ್‌ಗಳನ್ನು ಪರಿಶೀಲಿಸಿದ್ದರು.

ಇಡಿ ಮೂಲಗಳ ಪ್ರಕಾರ, ವೀಣಾ ಅವರ ಹೇಳಿಕೆ ಮತ್ತು ತನಿಖೆಯ ಸಮಯದಲ್ಲಿ ಸಂಗ್ರಹಿಸಿದ ಪುರಾವೆಗಳನ್ನು ವಿಶ್ಲೇಷಿಸಿದ ನಂತರ ಹೆಚ್ಚಿನ ವಿಚಾರಣೆ ಅಗತ್ಯವೆಂದು ಪರಿಗಣಿಸಲಾಗಿದೆ.

ಇನ್ನೂ ನಾಲ್ವರು ಆರೋಪಿಗಳ ಹೇಳಿಕೆಗಳನ್ನು ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಭಾರೀ ಬಿಗಿ ಭದ್ರತೆಯಲ್ಲಿ ನಡೆದ ನೀಟ್- ಯುಜಿ ಮರು ಪರೀಕ್ಷೆ

ಮೊದಲ ಪುಟದಿಂದ

ಹಲವಾರು ಪರೀಕ್ಷಾಕೇಂದ್ರಗಳಿಗೆ ವಿದ್ಯಾರ್ಥಿಗಳಿಗೆ ತಲುಪಲು ಅಡ್ಡಿಯಾದ ಬಗ್ಗೆ ವಿದ್ಯಾರ್ಥಿಗಳು ಮತ್ತು ಅವರ ಕುಟುಂಬ ಸದಸ್ಯರು ಆಕ್ಷೇಪಿಸಿದ್ದಾರೆ. ಬೆಂಗಳೂರಲ್ಲಿ ಪರೀಕ್ಷಾ ಕೇಂದ್ರಕ್ಕೆ ಬರಲು ವಿಳಂಬವಾದ ಕನಿಷ್ಠ ಮೂವರು ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಸಿಬ್ಬಂದಿಗಳು ಪ್ರವೇಶ ನಿರಾಕರಿಸಿದ್ದರಿಂದಾಗಿ ಅಳುತ್ತಾ ತೆರಳಿದ್ದಾರೆ. ಅದರಲ್ಲಿ ಒಬ್ಬಳು ವಿದ್ಯಾರ್ಥಿನಿ ಪರೀಕ್ಷಾ ಕೇಂದ್ರದ ಗೇಟನ್ನು ಏರಿ ಒಳಹೋಗಲು ಹೋದಾಗ ಮಧ್ಯ ಪ್ರವೇಶ ಮಾಡಿದ ಪೊಲೀಸರು ಆಕೆಯನ್ನು ಮನವೊಲಿಸಿ ಮನೆಗೆ ಕಳುಹಿಸಿಕೊಟ್ಟಿದ್ದಾರೆ.

15 ನಿಮಿಷಗಳ ಹೆಚ್ಚುವರಿ ಸಮಯ ನೀಡಲಾದ ಬಗ್ಗೆ ಹೆಚ್ಚಿನ ವಿದ್ಯಾರ್ಥಿಗಳು ಸಂತೋಷ ವ್ಯಕ್ತಪಡಿಸಿದ್ದಾರೆ. ಮಧ್ಯ ಪ್ರದೇಶದ ರಾಜಧಾನಿ ಭೋಪಾಲದಲ್ಲಿ ವಿಳಂಬವಾಗಿ ತಲುಪಿದ್ದ ಇಬ್ಬರು ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸಲಾಗಿತ್ತು.

ಕೋಲ್ಕತ್ತಾದಲ್ಲಿ ಭಾರೀ ಮಳೆಯಿಂದಾಗಿ ರಸ್ತೆಗಳಲ್ಲಿ ನೀರು ತುಂಬಿ ಹರಿಯುತ್ತಿದ್ದ ಕಾರಣದಿಂದಾಗಿ ನೀಟ್ ಮರು ಪರೀಕ್ಷೆಗೆ ಹಾಜರಾಗಲು ವಿದ್ಯಾರ್ಥಿಗಳು ಪರದಾಡುವಂತಾಗಿದೆ ಎಂದು ವರದಿಗಳು ಬಂದಿವೆ.

ಕೋಲ್ಕತ್ತಾದಲ್ಲಿ ಗಾಯಗೊಂಡ ವಿದ್ಯಾರ್ಥಿಯೊಬ್ಬಳಿಗೆ ಪರೀಕ್ಷಾ ಕೇಂದ್ರದಲ್ಲಿ ಪ್ರತ್ಯೇಕ ಕೊಠಡಿಯಲ್ಲಿ ಪರೀಕ್ಷೆ ಬರೆಯಲು ವ್ಯವಸ್ಥೆ ಮಾಡಲಾಗಿತ್ತು. ವಿದ್ಯಾರ್ಥಿಗೆ ವೈದ್ಯಕೀಯ ನೆರವು ಜತೆಗೆ ಅಂಬುಲೆನ್ಸ್ ಸಿದ್ದವಾಗಿಡಲಾಗಿತ್ತು. ಜೂನ್ 14ರಂದು ನಡೆದಿದ್ದ ರಸ್ತೆ ಅಪಘಾತದಲ್ಲಿ ಸೃಷ್ಟಿ ದುಬೆ ಗಾಯಗೊಂಡಿದ್ದು, ಪರೀಕ್ಷೆಗೆ ವಿಶೇಷ ವ್ಯವಸ್ಥೆ ಮಾಡಿದ್ದಾಗಿ ಪರೀಕ್ಷಾ ಕೇಂದ್ರದ ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬಯಿಯಲ್ಲಿ ಮಹಾನಗರ ಪಾಲಿಕೆಯ ಆಡಳಿತ ಬೆಸ್ಟ್ ನೌಕರರ ಅನಿರ್ಧಿಷ್ಟಾವಧಿ ಮುಷ್ಕರ ಹಿನ್ನೆಲೆಯಲ್ಲಿ ನೀಟ್-ಯುಜಿ ಮರು ಪರೀಕ್ಷೆಗೆ ತೆರಳುವ ವಿದ್ಯಾರ್ಥಿಗಳ ಅನುಕೂಲಕ್ಕೆಂದು ಬೆಸ್ಟ್ ವಿಶೇಷ ಬಸ್‌ಗಳನ್ನು ವ್ಯವಸ್ಥೆ ಮಾಡಿದೆ.

ಮುಂಬಯಿ ನಗರದ 24 ಮಾರ್ಗಗಳಲ್ಲಿ 60 ಬೆಸ್ಟ್ ಬಸ್ಸುಗಳು ಸುಮಾರು 180 ಪ್ರಯಾಣವನ್ನು ನಡೆಸಿದೆ ಎಂದು ಬೆಸ್ಟ್ ಹೇಳಿದೆ. ಮುಂಬಯಿಯಲ್ಲಿ 63 ನೀಟ್ ಪರೀಕ್ಷಾ ಕೇಂದ್ರಗಳಿದ್ದವು.

ಪ್ರಧಾನಿ ನರೇಂದ್ರ ಮೋದಿ ಅವರು ಕೋಲ್ಕತ್ತಾದಿಂದ ದಿಲ್ಲಿಗೆ ಮರಳಿದ್ದು, ನೀಟ್ ಪರೀಕ್ಷೆಗೆ ತೆರಳುವ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದನ್ನು ತಡೆಯಲು ದಿಲ್ಲಿಯ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲೇ ಕೆಲ ಹೊತ್ತು ಕಳೆದು ಬಳಿಕ ಪ್ರಧಾನಿ ನಿವಾಸಕ್ಕೆ ತೆರಳಿದ್ದಾರೆ ಎಂದು ಮೂಲಗಳು ಹೇಳಿವೆ.

ಪ್ರಧಾನಿ ಮೋದಿ ಅವರು ಅಪರಾಹ್ನ ಗಂಟೆ 1ರ ವೇಳೆಗೆ ದಿಲ್ಲಿ ವಿಮಾನ ನಿಲ್ದಾಣಕ್ಕೆ ತಲುಪಿದ್ದರು. ಆದರೆ ತಕ್ಷಣವೇ ಲೋಕ ಕಲ್ಯಾಣ್ ಮಾರ್ಗದಲ್ಲಿರುವ ಪ್ರಧಾನಿ ನಿವಾಸಕ್ಕೆ ತೆರಳದೆ ವಿಮಾನ ನಿಲ್ದಾಣದಲ್ಲೇ ಕೆಲ ಹೊತ್ತು ಉಳಿದಿದ್ದರು ಎಂದು ಮೂಲಗಳು ತಿಳಿಸಿವೆ. ಮೋದಿ ಅವರ ಪ್ರಯಾಣ ವೇಳೆ ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಿರುವುದರಿಂದ ನೀಟ್ ಪರೀಕ್ಷೆಗೆ ತೆರಳುವ ವಿದ್ಯಾರ್ಥಿಗಳಿಗೆ ಅಡ್ಡಿಯಾಗುತ್ತದೆ ಎಂದು ಅವರು ಪ್ರಯಾಣವನ್ನು ವಿಳಂಬ ಮಾಡಿದ್ದರು ಎಂದು ಮೂಲಗಳು ತಿಳಿಸಿವೆ.

ಗುಜರಾತಿನಲ್ಲಿ 79400 ವಿದ್ಯಾರ್ಥಿಗಳು ಮರು ಪರೀಕ್ಷೆಗೆ ಹಾಜರಾಗಿದ್ದು, 211 ಕೇಂದ್ರಗಳಲ್ಲಿ ಸುರಕ್ಷತೆಗಾಗಿ ಡ್ರೋನ್‌ಗಳು ಮತ್ತು ಹೆಚ್ಚುವರಿ ಭದ್ರತಾ ಸಿಬ್ಬಂದಿಗಳನ್ನು ನಿಯುಕ್ತಿ ಮಾಡಲಾಗಿತ್ತು.

ದೇಶದ ರಾಜಧಾನಿ ದಿಲ್ಲಿ ಸೇರಿದಂತೆ ಹಲವು ರಾಜ್ಯಗಳಲ್ಲಿ ಪರೀಕ್ಷಾ ಕೇಂದ್ರಗಳ ಹೊರಗೆ ನಿಂತಿದ್ದ ವಿದ್ಯಾರ್ಥಿಗಳ ಹೆತ್ತವರು ಮತ್ತು ಪೋಷಕರಿಗೆ ಕುಡಿಯುವ ನೀರು ಮತ್ತು ಉಪಾಹಾರಗಳನ್ನು ವ್ಯವಸ್ಥೆ ಮಾಡಲಾಗಿತ್ತು.

ರಾಜಸ್ಥಾನದ ಅಜ್ಮೀರ್‌ನಲ್ಲಿ ಕುಲ್ಸುಮ್ ಬಾನೇ ಎಂಬ ಅಭ್ಯರ್ಥಿಗೆ ಪರೀಕ್ಷಾ ಕೇಂದ್ರಕ್ಕೆ ಆಕೆ ಧರಿಸಿದ್ದ ಬಟ್ಟೆಯ ಬಗ್ಗೆ ಆಕ್ಷೇಪ ಎತ್ತಿ ಪ್ರವೇಶ ನಿರಾಕರಿಸಲಾಯಿತು. ಆದರೆ ಬಿಯಾವರ್‌ನಿಂದ ಬಂದಿದ್ದ ಆಕೆ ತಾನು ಮೇ 3ರಂದು ಕೂಡಾ ಇದೇ ಉಡುಪು ಧರಿಸಿ ಬಂದಿದ್ದೆ ಎಂದು ಭದ್ರತಾ ಸಿಬ್ಬಂದಿ ಜತೆ ವಾದಿಸಿದ್ದಳು. ಮೊದಲು ತನಗೆ ದುಪ್ಪಟ್ಟ ತೆಗೆಯಲು ಹೇಳಿದ್ದರು. ಬಳಿಕ ತನಗೆ ಬುರ್ಖಾ ತೆಗೆಯಲು ಸೂಚಿಸಲಾಯಿತು. ಆದರೆ ತಾನು ಅದನ್ನು ಒಪ್ಪದೆ ಎನ್‌ಟಿಎ ತನಗೆ ಅನುಮತಿ ನೀಡಿದ್ದಾರೆ ಭದ್ರತಾ ಸಿಬ್ಬಂದಿ ಹೇಗೆ ಅಡ್ಡಿ ಪಡಿಸಲು ಸಾಧ್ಯ ಎಂದು ಇದೇ ಉಉಪಲ್ಲಿ ಪ್ರವೇಶ ನೀಡದೆ ಇದ್ದರೆ ತಾನು ಪರೀಕ್ಷೆ ಬರೆಯುವುದಿಲ್ಲ ಎಂದು ತಿಳಿಸಿದ್ದಳು. ಆಕೆಗೆ ಪ್ರವೇಶ ನೀಡಲಾಗಿದೆ ಎಂದು ಬಳಿಕ ಎನ್‌ಡಿಎ ಸ್ಪಷ್ಟನೆ ನೀಡಿದೆ. ಹಲವೆಡೆ ವಿದ್ಯಾರ್ಥಿಗಳ 'ಜನಿವಾರ' ಮತ್ತು ಉಡದಾರವನ್ನು ತೆಗೆಸಲಾಗಿದ ಅದಕ್ಕೆ ಪ್ರತಿಭಟನೆ ಕೂಡಾ ನಡೆದಿದ್ದು ಹಿಜಾಬ್ ಧರಿಸಿದ ಹುಡುಗಿಯರು ಒಳಗೆ ಹೋಗಲು ಅವಕಾಶ ನೀಡಿರುವಾಗ ನಮಗೇಕೆ ಈ ಅನ್ಯಾಯ ಎಂದು ಪ್ರತಿಭಟನೆ ನಡೆದಿದೆ.

ಜೀನ್ಸ್ ತೊಟ್ಟವರಿಗೆ ಪರೀಕ್ಷಾ ಕೇಂದ್ರ ಪ್ರವೇಶಕ್ಕೆ ಅವಕಾಶ ಇರಲಿಲ್ಲ. ವಿದ್ಯಾರ್ಥಿಗಳು ಮೊಬೈಲ್ ಅಥವಾ ಇತರ ಯಾವುದಅ ಎಲೆಕ್ಟ್ರಾನಿಕ್ ವಸ್ತುಗಳನ್ನು ಕೊಂಡೊಯ್ಯಲು ಅವಕಾಶ ಇರಲಿಲ್ಲ. ಆಧಾರ್ ಕಾರ್ಡ್ ಮತ್ತು ಪ್ರವೇಶ ಪತ್ರವನ್ನು ಮಾತ್ರ ವಿದ್ಯಾರ್ಥಿಗಳು ಒಳಗೆ ಕೊಂಡೊಯ್ಯಲು ಅವಕಾಶ ಇತ್ತು.

ಕೈಯಲ್ಲಿ ಯಾವುದೇ ರೀತಿಯ ದಾರ, ಮೂಗುತಿ ಆಭರಣ ಧರಿಸಿ ಪರೀಕ್ಷಾ ಕೇಂದ್ರದೊಳಗೆ ಪ್ರವೇಶಿಸಲು ನಿರ್ಬಂಧಿಸಲಾಗಿತ್ತು.

ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಭಾರೀ ಭದ್ರತೆ ಮಾಡಲಾಗಿತ್ತು. ವಿದ್ಯಾರ್ಥಿಗಳಿಗೆ ಅಪರಾಹ್ನ ಗಂಟೆ 1.30ರ ಬಳಿಕವೇ ಪರೀಕ್ಷಾ ಕೇಂದ್ರ ಪ್ರವೇಶಕ್ಕೆ ಅವಕಾಶ ನೀಡಲಾಗಿತ್ತು. ಗುಜರಾತಿನ ಅಹ್ಮದಾಬಾದ್ ಒಂದು ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದಾಗ ವಿದ್ಯಾರ್ಥಿಗಳ ಹೆತ್ತವರು ಪ್ರತಿಭಟಿಸಿದ್ದರಿಂದ ವಾಗ್ವಾದ, ಗೊಂದಲ, ಗದ್ದಲ ಉಂಟಾಗಿದ್ದು ಹಿಜಾಬ್ ಧರಿಸಿ ಒಳಗೆ ಹೋಗಲು ಹೇಗೆ ಅವಕಾಶ ನೀಡಲಾಗಿದೆ ಎಂದು ಜನರು ಅಧಿಕಾರಿಗಳ ಜತೆ ಜಗಳಕ್ಕೆ ಇಳಿದಿದ್ದರು. ಗಲಾಟೆ ಕಾರಣದಿಂದಾಗಿ ಹಿಂದು ಸಂಘಟನೆಯೊಂದರ ಇಬ್ಬರನ್ನು ನಗರದ ವಸ್ತಪು ಪ್ರದೇಶದ ಪೊಲೀಸ್ ಠಾಣೆಗೆ ಕರೆದೊಯ್ದು ಬಳಿಕ ಬಿಡುಗಡೆ ಮಾಡಲಾಗಿದೆ.

ನೀಟ್ ಅಭ್ಯರ್ಥಿ ಆತ್ಮಹತ್ಯೆ

ರವಿವಾರ ನಡೆದ ನೀಟ್ ಮರು ಪರೀಕ್ಷೆಗೆ ಹಾಜರಾಗಬೇಕಿದ್ದ 19 ವರ್ಷದ ವಿದ್ಯಾರ್ಥಿನಿಯೊಬ್ಬಳು ಹೈದರಬಾದ್ ನಗರದ ಮಿಯಾಪುರದ ಅಪಾರ್ಟ್‌ಮೆಂಟ್ ಒಂದರಲ್ಲಿ ಶನಿವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ತನ್ನ ಸಾವಿಗೆ ನಾನೇ ಕಾರಣ ಎಂದು ಆಕೆ ಪತ್ರವೊಂದರಲ್ಲಿ ಬರೆದಿರುವುದಾಗಿ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ನೀಟ್ ಪರೀಕ್ಷೆಗೆ ಭಾರಿ ಸಿದ್ಧತೆ ನಡೆಸಿದ್ದ ಆಕೆ ಸಹೋದರಿಯರ ಜತೆಯಲ್ಲಿ ವಾಸಿಸುತ್ತಿದ್ದಳು ಎಂದು ತಿಳಿಸಿರುವ ಅಧಿಕಾರಿ ನೀಟ್ ಮರು ಪರೀಕ್ಷೆ ಒತ್ತಡದಿಂದ ಆಕೆ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆಯಿದೆ ಎಂದಿದ್ದಾರೆ.

ಅಮೆರಿಕ, ಇರಾನ್,ಮಧ್ಯವರ್ತಿಗಳಿಂದ ಶಾಂತಿ ಒಪ್ಪಂದ ಅನುಷ್ಠಾನದ ಕುರಿತು ಮಾತುಕತೆ ಆರಂಭ

ಜುರಿಚ್, ಜೂ.21 - ಅಮೆರಿಕ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಮತ್ತು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘರ್ ಘಾಲಿಬಾಫ್ ನೇತೃತ್ವದ ನಿಯೋಗಗಳು ರವಿವಾರ ಸ್ವಿಸ್ ಪರ್ವತ ರೆಸಾರ್ಟ್ ಬರ್ಗೆನ್‌ಸ್ಟ್ಯಾಕ್‌ನಲ್ಲಿ ಪಶ್ಚಿಮ ಏಷ್ಯಾದಲ್ಲಿ ಶಾಂತಿಯನ್ನು ಪುನಃಸ್ಥಾಪಿಸುವ ಗುರಿಯನ್ನು ಹೊಂದಿರುವ ಮಾತುಕತೆಗಳನ್ನು ಆರಂಭಿಸಿದವು.

ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಮತ್ತು ಹಿರಿಯ ಕತಾರ್ ನಾಯಕರು ಕೂಡ ಚತುರ್ಭುಜ ಮಾತುಕತೆಗಳಲ್ಲಿ ಮಧ್ಯವರ್ತಿಗಳಾಗಿ ಉಪಸ್ಥಿತರಿದ್ದದ್ದು,ಇದನ್ನು ಲೇಕ್ ಲುಸೆರ್ನ್ ಶೃಂಗಸಭೆ ಎಂದು ಕರೆಯಲಾಗುತ್ತದೆ.

ಕಳೆದ ವಾರ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಸಹಿ ಮಾಡಿದ ತಿಳುವಳಿಕೆ ಒಪ್ಪಂದದ (ಎಂಒಯು) ಪ್ರಮುಖ ನಿಬಂಧನೆಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಚರ್ಚೆಗಳು ಕೇಂದ್ರೀಕೃತವಾಗಿವೆ, ಷರೀಫ್ ಖಾತರಿದಾರರಾಗಿ ಸಹಿ ಹಾಕಿದ್ದಾರೆ.

ಇರಾನ್‌ನ ಪರಮಾಣು ಕಾರ್ಯಕ್ರಮ, ಅದರ ಮೇಲೆ ವಿಧಿಸಲಾದ ನಿರ್ಬಂಧಗಳು ಮತ್ತು ಲೆಬನಾನ್‌ನಲ್ಲಿ ಇಸ್ರೇಲ್‌ನ ಆಕ್ರಮಣ ಸೇರಿದಂತೆ ಪ್ರಮುಖ ಕ್ಷೇತ್ರಗಳ ಮೇಲೆ ಕೇಂದ್ರೀಕರಿಸಿ ಪಶ್ಚಿಮ ಏಷ್ಯಾದಲ್ಲಿ ಶಾಂತಿಯನ್ನು ಪುನಃಸ್ಥಾಪಿಸಲು 60 ದಿನಗಳ ಮಾತುಕತೆ ವಿಂಡೋದ ಆರಂಭವನ್ನು ಈ ಒಪ್ಪಂದವು ಗುರುತಿಸಿದೆ.

ಮಾತುಕತೆಗಳ ತಾಂತ್ರಿಕ ಅಂಶಗಳ ಕುರಿತು ಚರ್ಚೆಗಳು ಶುಕ್ರವಾರ ಆರಂಭವಾಗಬೇಕಿತ್ತು, ಆದರೆ ಪ್ರಾಥಮಿಕವಾಗಿ ಇಸ್ರೇಲ್ ಮತ್ತು ಇರಾನ್ ಬೆಂಬಲಿತ ಹೆಜ್ಬೊಲ್ಲಾ ನಡುವೆ ಹೊಸ ಸುತ್ತಿನ ಗುಂಡಿನ ದಾಳಿಯಿಂದಾಗಿ ವಿಳಂಬವಾಯಿತು.

ಇದೇ ವೇಳೆ ಉಪಾಧ್ಯಕ್ಷ ವ್ಯಾನ್ಸ್ ಅವರು ಇರಾನಿನ ಉನ್ನತ ಅಧಿಕಾರಿಗಳನ್ನು ಭೇಟಿಯಾಗುತ್ತಿದ್ದಾರೆ. ಅಮೆರಿಕ -ಇರಾನ್ ಶಾಂತಿ ಒಪ್ಪಂದದ ತಾಂತ್ರಿಕ ಅಂಶಗಳ ಕುರಿತಾದ ಚರ್ಚೆಗಳಿಗೆ ಸಂಬಂಧಿಸಿದಂತೆ ಪೂರ್ವ ಉತ್ಪಾದಕ ಫಲಿತಾಂಶಗಳು ದೊರೆಯುವ ನಿರೀಕ್ಷೆಯಿದೆ ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದ್ದಾರೆ.

ಅಮೆರಿಕ ಮತ್ತು ಇರಾನ್ ಮಾತುಕತೆಗಳಲ್ಲಿ ಎರಡು ಪ್ರಮುಖ ಪಕ್ಷಗಳಾಗಿದ್ದರೂ, ಪಾಕಿಸ್ತಾನ ಮತ್ತು ಕತಾರ್ ಮಧ್ಯವರ್ತಿಗಳಾಗಿವೆ.

ನನ್ನ ನೇತೃತ್ವದ ಶಿವಸೇನೆ ಏಕೈಕ ಶಿವಸೇನೆ: ಉದ್ಧವ್ ಠಾಕ್ರೆ

ಮುಂಬಯಿ, ಜೂ. 21 - ಏಕನಾಥ್ ಶಿಂದೆ ನೇತೃತ್ವದ ಪಕ್ಷ ಮಾತ್ರ ಶಿವಸೇನೆ ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾಹ ಅವರ ಹೇಳಿಕೆಗೆ ತಿರುಗೇಟು ನೀಡಿದ ಶಿವಸೇನೆ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು, ತನ್ನ ನೇತೃತ್ವದ ಶಿವಸೇನೆ ಏಕೈಕ ಶಿವಸೇನೆ ಎಂದು ಪ್ರತಿಪಾದಿಸಿದರು.

ಬಂಡಾಯ ಸೇನಾ (ಯುಬಿಟಿ) ಸಂಸದ ಸಂಜಯ್ ಪಾಟೀಲ್ ಅವರ ಈಶಾನ್ಯ ಮುಂಬಯಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಭಾಂಡೂಪ್‌ನಲ್ಲಿ ಠಾಕ್ರೆ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ತಮ್ಮ ತಂದೆ ಬಾಳಠಾಕೆ ಸ್ಥಾಪಿಸಿದ ಅವಿಭಜಿತ ಶಿವಸೇನೆ ಕಾಂಗ್ರೆಸ್ ವಿರುದ್ಧ 30 ವರ್ಷಗಳನ್ನು ಕಳೆದಿದೆ, ಆದರೆ ಅದು ಬಿಜೆಪಿ ಮಾಡಿದಂತೆ ಪಕ್ಷವನ್ನು ಕದಿಯಲು ಅಥವಾ ಮುಗಿಸಲು ಎಂದಿಗೂ ಪ್ರಯತ್ನಿಸಲಿಲ್ಲ ಎಂದು ಠಾಕ್ರೆ ಹೇಳಿದರು.

ನನ್ನ ನೇತೃತ್ವದ ಶಿವಸೇನೆ ಏಕೈಕ ಶಿವಸೇನೆಯಾಗಿದೆ ಎಂದು ಠಾಕ್ರೆ ಹೇಳಿದರು.

ಶನಿವಾರ ಶಾಹ ಕೊಲ್ಹಾಪುರದಲ್ಲಿ ಮಾತನಾಡಿದ ಸಂದರ್ಭ,ಮೊದಲು ಜನರು ಶಿಂದೆ ನೇತೃತ್ವದ ಬಣವನ್ನು ಪ್ರತ್ಯೇಕವಾಗಿ ಉಲ್ಲೇಖಿಸಬೇಕಾಗಿತ್ತು, ಆದರೆ ಈಗ ಯಾವುದೇ ಬಣ ಉಳಿದಿಲ್ಲ, ಮತ್ತು ಏಕನಾಥ್ ಶಿಂದೆ ನೇತೃತ್ವದ ಒಂದೇ ಒಂದು ಶಿವಸೇನೆ ಇದೆ ಎಂದಿದ್ದರು. ಬಿಜೆಪಿಗೆ ಮೊದಲು ರಾಜಕೀಯ ಮಹತ್ವ ಕಡಿಮೆ ಇತ್ತು ಮತ್ತು ಪಕ್ಷ ಬೆಳೆಯಲು ಅವಿಭಜಿತ ಶಿವಸೇನೆ ಸಹಾಯ ಮಾಡಿತು ಎಂದು ಠಾಕ್ರೆ ಹೇಳಿಕೊಂಡರು. ಸೇನಾ (ಯುಬಿಟಿ)ದಲ್ಲಿ ಬಂಡಾಯದ ಗುಸುಗುಸು ನಡುವೆ, ಠಾಕ್ರೆ ಅವರು ತಾವು ನಿರಾಶೆಗೊಂಡಿಲ್ಲ ಎಂದು ಹೇಳಿದರು.

ಬೀಡ್: ವಿವಾಹ ಪೂರ್ವ ಫೋಟೋಶೂಟ್‌ನಿಂದ ಬಾಲ್ಯ ವಿವಾಹ ಯೋಜನೆ ಬಹಿರಂಗ; ಅಪ್ರಾಪ್ತ ಬಾಲಕಿಯ ರಕ್ಷಣೆ

ಬೀಡ್, ಜೂ. 21 - ಮಹಾರಾಷ್ಟ್ರದ ಬೀಡ್ ಜಿಲ್ಲೆಯಲ್ಲಿ 15 ವರ್ಷದ ಬಾಲಕಿಯನ್ನು ಒಳಗೊಂಡ ಬಾಲ್ಯ ವಿವಾಹ ಪ್ರಯತ್ನವನ್ನು ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ವಿವಾಹ ಪೂರ್ವ ಫೋಟೋಶೂಟ್‌ಗಳು ಮತ್ತು ರೀಲ್‌ಗಳನ್ನು ಅಪ್‌ಲೋಡ್ ಮಾಡುವ ಹೆಚ್ಚುತ್ತಿರುವ ಪ್ರವೃತ್ತಿಯಿಂದ ವಿಫಲವಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ವಿವೇಕ್ ಜಾನ್ಸನ್ ಅವರಿಗೆ ಸಾಮಾಜಿಕ ಮಾಧ್ಯಮದಲ್ಲಿ ಅಪ್‌ಲೋಡ್ ಮಾಡಲಾದ ವಿವಾಹ ಪೂರ್ವ ಫೋಟೋಶೂಟ್‌ನ ಚಿತ್ರಗಳ ಬಗ್ಗೆ ಸುಳಿವು ಸಿಕ್ಕಿತು ಮತ್ತು ಅವರ ಹಸ್ತಕ್ಷೇಪದ ನಂತರ, ಜಿಯೋರೈ ತಾಲೂಕಿನಲ್ಲಿ ಅಪ್ರಾಪ್ತ ಬಾಲಕಿ ಮತ್ತು 23 ವರ್ಷದ ವ್ಯಕ್ತಿಯ ನಡುವಿನ ವಿವಾಹವನ್ನು ಜೂನ್ 19 ರಂದು ನಿಲ್ಲಿಸಲಾಯಿತು ಎಂದು ಸಿಡಬ್ಲ್ಯೂಸಿ ಅಧ್ಯಕ್ಷ ಅಶೋಕ್ ತಂಗಡೆ ಹೇಳಿದ್ದಾರೆ.

ಯೋಗ 'ದಿವ್ಯ ಔಷಧ'; ಮುಖ್ಯಮಂತ್ರಿ ಫಡ್ನವೀಸ್

ಹೆಚ್ಚಿನ ಕುತೂಹಲವಿದೆ ಎಂದು ಮುಖ್ಯಮಂತ್ರಿ ಹೇಳಿದರು.

ವ್ಯಕ್ತಿ ಕೇವಲ ದೇಹವಲ್ಲ, ಮನಸ್ಸು ಮತ್ತು ಆತ್ಮವೂ ಹೌದು ಎಂದು ಒತ್ತಿ ಹೇಳಿದ ಮುಖ್ಯಮಂತ್ರಿ, ಮಾನವನ ಮನಸ್ಸು ಪ್ರಕೃತಿಯೊಂದಿಗೆ ಸಂಪರ್ಕ ಹೊಂದಿದೆ ಎಂದು ಹೇಳಿದರು. ಅದಕ್ಕಾಗಿಯೇ ಯೋಗ ವಿಜ್ಞಾನದಲ್ಲಿ ದೇಹವನ್ನು ಮಾತ್ರವಲ್ಲ, ಮನಸ್ಸು, ಆತ್ಮ ಮತ್ತು ದೇಹ ಮೂರನ್ನೂ ಪರಿಗಣಿಸಲಾಗುತ್ತದೆ. ಯೋಗ ವಿಜ್ಞಾನದಲ್ಲಿ, ಪ್ರಕೃತಿಯ ಅಂಶಗಳೊಂದಿಗೆ ಮನಸ್ಸಿನ ಸಂಪರ್ಕವನ್ನು ಪುನರುಜ್ಜೀವನಗೊಳಿಸಲಾಗುತ್ತದೆ. ಯೋಗದ ನಿರಂತರ ಅಭ್ಯಾಸವು ದೇಹದ ಮೇಲೆ ಮಾತ್ರವಲ್ಲದೆ ಮಾನಸಿಕವಾಗಿ ಸಮರ್ಥರಾಗುವುದರ ಮೇಲೂ ಪರಿಣಾಮ ಬೀರುತ್ತದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಿವಪ್ರಕಾಶ್ ಕೂಡ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ವಿವಿಧ ಯೋಗ ಭಂಗಿಗಳನ್ನು ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ಯೋಗ ಶಿಕ್ಷಕರು ಮತ್ತು ಯೋಗ ಪಟುಗಳು ಉಪಸ್ಥಿತರಿದ್ದರು.

ತ್ರಿಕೋನ ಸರಣಿ ಗೆದ್ದ ಭಾರತ 'ಎ' ತಂಡ

ಮೊದಲ ಪುಟದಿಂದ

ಮತ್ತೊಂದೆಡೆ, ಭಾರತದ ಪರ ಯಶ್ ಠಾಕೂರ್‌ಮತ್ತು ವಿಪ್ರಜ್ ನಿಗಮ್ ಅದ್ಭುತ ಬೌಲಿಂಗ್ ಮಾಡಿದರು. ಇಬ್ಬರೂ ಬೌಲರ್‌ಗಳು ತಲಾ ಮೂರು ವಿಕೆಟ್ ಪಡೆದರು. ಅನುಕುಲ್ ರಾಯ್ ಕೂಡ ಎರಡು ವಿಕೆಟ್ ಪಡೆದರು. ಅಶೋಕ್ ಶರ್ಮಾ ಮತ್ತು ತಿಲಕ್ ವರ್ಮಾ ಕೂಡ ತಲಾ ಒಂದು ವಿಕೆಟ್ ಪಡೆದರು.

ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್..

ಈ ಪ್ರಶಸ್ತಿ ಪಂದ್ಯದಲ್ಲಿ, ಶ್ರೀಲಂಕಾ ನಾಯಕ ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡರು. ಮೊದಲು ಬ್ಯಾಟಿಂಗ್ ಮಾಡಿದ ಟೀಮ್ ಇಂಡಿಯಾ ವೈಭವ್ ಸೂರ್ಯವಂಶಿ (29 ಎಸೆತಗಳಲ್ಲಿ 94), ನಾಯಕ ತಿಲಕ್ ವರ್ಮಾ (90 ಎಸೆತಗಳಲ್ಲಿ 67) ಸಿಡಿಸಿದ ಅರ್ಧಶತಕಗಳ ನೆರವಿನಿಂದ 9 ವಿಕೆಟ್ ನಷ್ಟಕ್ಕೆ 377 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು.

ಟಾಸ್ ಸೋತು ಬ್ಯಾಟಿಂಗ್ ಆರಂಭಿಸಿದ ಭಾರತದ ಪರ ವೈಭವ್ ಸೂರ್ಯವಂಶಿ ಮತ್ತು ಪ್ರಿಯಾಂಶ ಆರ್ಯ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶನ ತೋರಿದರು. ಈ ಜೋಡಿ ಮೊದಲ ವಿಕೆಟ್‌ಗೆ 132 ರನ್ ಸೇರಿಸಿತು. ಟಿ20ಯಂತೆ ಬ್ಯಾಟಿಂಗ್ ಮಾಡಿದ ವೈಭವ್ ಸೂರ್ಯವಂಶಿ ಕೇವಲ 29 ಎಸೆತಗಳಲ್ಲಿ 94 ರನ್ ಗಳಿಸಿ ಕೇವಲ 6 ರನ್‌ಗಳಿಂದ ಶತಕ ಮಿಸ್ ಮಾಡಿಕೊಂಡರು. ಅವರ ಇನ್ನಿಂಗ್ಸ್‌ನಲ್ಲಿ 10 ಬೌಂಡರಿ ಮತ್ತು 8 ಸಿಕ್ಸರ್‌ಗಳಿದ್ದವು. ವೈಭವ್ ಮೊಹಮ್ಮದ್ ಶಿರಾಜ್ ಎಸೆದ 3ನೇ ಓವರ್‌ನಲ್ಲೇ 26 ರನ್ ಗಳಿಸಿ ಕೇವಲ 11 ಎಸೆತಗಳಲ್ಲಿ ಅರ್ಧಶತಕ ತಲುಪುವ ಮೂಲಕ ವಿಶ್ವ ದಾಖಲೆ ನಿರ್ಮಿಸಿದರು.

ಇವರಿಗೆ ಸಾಥ್ ಕೊಟ್ಟ ಪ್ರಿಯಾಂಶ್ 29 ಎಸೆತಗಳಲ್ಲಿ 6 ಬೌಂಡರಿ, 1 ಸಿಕ್ಸರ್ ಸಹಿತ 39 ರನ್‌ಗಳಿಸಿ ಔಟ್ ಆದರು. ಇವರಿಬ್ಬರ ವಿಕೆಟ್ ಪತನದ ನಂತರ ಭಾರತದ ರನ್‌ಗತಿಗೆ ಕಡಿವಾಣ ಬಿದ್ದಿತು. ಉಪನಾಯಕ ರುತುರಾಜ್ ಗಾಯಕ್ವಾಡ್ ಹಾಗೂ ತಿಲಕ್ ವರ್ಮಾ 3ನೇ ವಿಕೆಟ್ ಜೊತೆಯಾಟದಲ್ಲಿ 106 ಎಸೆತಗಳನ್ನಾಡಿ 84 ರನ್ ಸೇರಿಸಿದರು. ಗಾಯಕ್ವಾಡ್ 51 ಎಸೆತಗಳಲ್ಲಿ 2 ಬೌಂಡರಿ, 1 ಸಿಕ್ಸರ್ ಸಹಿತ 40 ರನ್‌ಗಳಿಸಿ ಔಟ್ ಆದರು. ನಂತರ ತಿಲಕ್ ವರ್ಮಾ ಹಾಗೂ ಕುಮಾರ್ ಕುಶಾಗ್ರ 4ನೇ ವಿಕೆಟ್‌ಗೆ 63 ರನ್ ಸೇರಿಸಿದರು. ಕುಶಾಗ್ರ 39 ಎಸೆತಗಳಲ್ಲಿ 36 ರನ್‌ಗಳಿಸಿ ಔಟ್ ಆದರು.

ತಿಲಕ್ ವರ್ಮಾ 90 ಎಸೆತಗಳನ್ನಾಡಿ 4 ಬೌಂಡರಿ, 1 ಸಿಕ್ಸರ್‌ಸಹಿತ 67 ರನ್ ಗಳಿಸಿ ಕುಶಾಗ್ರ ಔಟ್ ಆದ ಮುಂದಿನ ಓವರ್‌ನಲ್ಲೇ ಔಟ್ ಆದರು. ಆ ನಂತರ ಭಾರತ ತಂಡದಿಂದ ದೊಡ್ಡ ಜೊತೆಯಾಟ ಬರಲಿಲ್ಲ. ಬಂದ ಬ್ಯಾಟರ್‌ಗಳೆಲ್ಲಾ ಅಲ್ಪಮೊತ್ತಕ್ಕೆ ವಿಕೆಟ್ ಒಪ್ಪಿಸಿದರು. ಸೂರ್ಯಾಂಶ್ ಶೆಡ್ಗೆ 2, ನಿಶಾಂತ್ ಸಿಂಧು 16, ವಿಪ್ರಜ್ ನಿಗಮ್ 27 ರನ್‌ಗಳಿಸಿ ಔಟ್ ಆದರು. ಕೊನೆಯ ಎರಡು ಓವರ್‌ಗಳಲ್ಲಿ ಅಬ್ಬರಿಸಿದ ಅನುಕುಲ್ ರಾಯ್ 15 ಎಸೆತಗಳಲ್ಲಿ 1 ಬೌಂಡರಿ, 4 ಸಿಕ್ಸರ್‌ಗಳ ಸಹಿತ 39 ರನ್‌ಗಳಿಸಿ ತಂಡದ ಮೊತ್ತವನ್ನ 370ರ ಗಡಿ ದಾಟಿಸಿದರು.

ಶ್ರೀಲಂಕಾ ಎ ಪರ ರವಿಂದು ಫರ್ನಾಂಡೊ 72ಕ್ಕೆ2, ವನುಜಾ ಸಹಾನ್ 39ಕ್ಕೆ2, ಕುಗುದಾಸ್ ಮಾತುಲನ್ 82ಕ್ಕೆ2, ದುಲಜ್ ಸಮುದಿತಾ 54ಕ್ಕೆ1, ಸಹಾನ್ ಅರಾಚಿಗೆ 35ಕ್ಕೆ1, ಮೊಹಮ್ಮದ್ ಶಿರಾಜ್ 56ಕ್ಕೆ1 ವಿಕೆಟ್ ಪಡೆದರು.

ಉತ್ತರ ಪ್ರದೇಶ: ತಾಯಿಯ ಬಳಿ ಮಲಗಿದ್ದ 9 ತಿಂಗಳ ಮಗುವನ್ನು ಕರೆದುಕೊಂಡು ಹೋಗಿ ಅತ್ಯಾಚಾರವೆಸಗಿದ 12 ವರ್ಷದ ಬಾಲಕ!

ಅಪಹರಿಸುವ ಮೊದಲು ಮದ್ಯ ಸೇವಿಸಿ ಮೊಬೈಲ್‌ನಲ್ಲಿ ಅಶ್ಲೀಲ ಚಿತ್ರಗಳನ್ನು ವೀಕ್ಷಿಸಿದ್ದ ಆರೋಪಿ

ಗೋರಖ್‌ಪುರ, ಜೂ. 21 - ತನ್ನ ತಾಯಿಯ ಪಕ್ಕದಲ್ಲಿ ಮಲಗಿದ್ದ ಒಂಬತ್ತು ತಿಂಗಳ ಮಗುವನ್ನು ಕರೆದುಕೊಂಡು ಹೋಗಿ 12 ವರ್ಷದ ಬಾಲಕನೊಬ್ಬ ಅತ್ಯಾಚಾರ ಮಾಡಿದ್ದಾನೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಬಂಧನಕ್ಕೆ ಒಳಗಾದ ನಂತರ ಆರೋಪಿ ಬಾಲಾಪರಾಧಿ ಶುಕ್ರವಾರ ರಾತ್ರಿ ಮದ್ಯ ಸೇವಿಸಿ ನಂತರ ತನ್ನ ಮೊಬೈಲ್ ಫೋನ್‌ನಲ್ಲಿ ಅಶ್ಲೀಲ ಚಿತ್ರಗಳನ್ನು ವೀಕ್ಷಿಸಿ ಮಲಗಿದ್ದ ಶಿಶುವನ್ನು ಅಪಹರಿಸಿದ್ದೇನೆ ಎಂದು ಪೊಲೀಸರಿಗೆ ತಿಳಿಸಿದ್ದಾನೆ.

ಆತನ ಫೋನ್‌ನಲ್ಲಿ 50ಕ್ಕೂ ಹೆಚ್ಚು ಅಶ್ಲೀಲ ವೀಡಿಯೊಗಳು ಮತ್ತು 100ಕ್ಕೂ ಹೆಚ್ಚು ಅಶ್ಲೀಲ ವೆಬ್‌ಸೈಟ್‌ಗಳಿಗಾಗಿ ಹುಡುಕಾಟಗಳು ಕಂಡುಬಂದಿವೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ. ಗುಲಾರಿಹಾ ಪೊಲೀಸ್ ಠಾಣೆ ಪ್ರದೇಶದಲ್ಲಿ ಈ ಘಟನೆ ನಡೆದಿದೆ. ಕುಟುಂಬದ ಪ್ರಕಾರ, ಮಗು ಬೆಳಗಿನ ಜಾವ 2 ಗಂಟೆ ಸುಮಾರಿಗೆ ಕಾಣೆಯಾಗಿದ್ದು, ಗ್ರಾಮ ಮತ್ತು ಹತ್ತಿರದ ಹೊಲಗಳಲ್ಲಿ ತೀವ್ರ ಹುಡುಕಾಟ ನಡೆಸಲಾಯಿತು. ಶನಿವಾರ ಬೆಳಿಗ್ಗೆ, ಮನೆಯಿಂದ ಸುಮಾರು 500 ಮೀಟರ್ ದೂರದ ಹೊಲದಲ್ಲಿನ ಶೆಡ್ ಬಳಿ, ರಕ್ತಸ್ರಾವ ಮತ್ತು ತೀವ್ರ ನೋವಿನಿಂದ ಶಿಶು ಪತ್ತೆಯಾಗಿದೆ.

ಕುಟುಂಬ ಸದಸ್ಯರು ಆಕೆಯನ್ನು ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದರು, ಅಲ್ಲಿ ಆಕೆಯ ಸ್ಥಿತಿ ಹದಗೆಟ್ಟ ನಂತರ ಬಿಆರ್‌ಡಿ ವೈದ್ಯಕೀಯ ಕಾಲೇಜಿಗೆ ಕರೆದೊಯ್ಯಲಾಯಿತು.

ವೈದ್ಯಕೀಯ ಪರೀಕ್ಷೆಯಲ್ಲಿ ಲೈಂಗಿಕ ದೌರ್ಜನ್ಯ ದೃಢಪಟ್ಟಿದ್ದು, ಶಿಶುವಿನ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ವಿಚಾರಣೆಯ ಸಮಯದಲ್ಲಿ ಪೊಲೀಸರು ಮಗುವಿನ ಪೋಷಕರು ಮತ್ತು ಅಜ್ಜಿಯರು ಸೇರಿದಂತೆ ಕುಟುಂಬ ಸದಸ್ಯರೊಂದಿಗೆ ಮಾತನಾಡಿದರು, ನಂತರ ಮೂರು ದಿನಗಳ ಹಿಂದೆ ಚಂಡೀಗಢದಿಂದ ಬಂದಿದ್ದ ಬಲಿಪಶುವಿನ 12 ವರ್ಷದ ಸಂಬಂಧಿ ಬಾಲಕನ ಮೇಲೆ ಅನುಮಾನ ವ್ಯಕ್ತಪಡಿಸಿದರು.

ಭಾನುವಾರ ವಶಕ್ಕೆ ಪಡೆದ ಬಾಲಕ ಆರಂಭದಲ್ಲಿ ಅಸಮಂಜಸ ಹೇಳಿಕೆಗಳನ್ನು ನೀಡಿದ್ದನು ಆದರೆ ನಂತರ ತಪ್ಪೊಪ್ಪಿಕೊಂಡಿದ್ದಾನೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಮಗು ಚಿಕಿತ್ಸೆ ಪಡೆಯುತ್ತಿದೆ ಮತ್ತು ಪ್ರಕರಣದಲ್ಲಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ (ನಗರ) ನಿಮೇಶ್ ಪಾಟೀಲ್ ತಿಳಿಸಿದ್ದಾರೆ.

ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ ಜಂತರ್‌ಮಂತರ್‌ನಲ್ಲಿ ಸಿಜೆಪಿ-ಬೆಂಬಲಿಗರು ನಡೆಸಿತ್ತಿರುವ ಆಹೋರಾತ್ರಿ ಪ್ರತಿಭಟನೆ 2ನೇ ದಿನವೂ ಮುಂದುವರಿಕೆ

ಹೊಸದಿಲ್ಲಿ, ಜೂ. 21 - ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಒತ್ತಾಯಿಸಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಸಂಸ್ಥಾಪಕ ಅಭಿಜೀತ್ ದೀಪ್ಕೆ ನೇತೃತ್ವದಲ್ಲಿ ದೆಹಲಿಯ ಜಂತರ್‌ಮಂತರ್‌ನಲ್ಲಿ ಆಹೋರಾತ್ರಿ ಪ್ರತಿಭಟನೆ ನಡೆಸಿದ್ದಾರೆ.

ಶನಿವಾರ ಆರಂಭವಾದ ಪ್ರತಿಭಟನೆಯು ಭಾನುವಾರವೂ ಮುಂದುವರಿದಿದ್ದು, ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರುವಂತೆ ಮನವಿ ಮಾಡಿದ್ದಾರೆ.

ನೀಟ್ ಮರುಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಪರೀಕ್ಷೆ ಮುಗಿದ ಬಳಿಕ ಪ್ರತಿಭಟನೆಯಲ್ಲಿ ಭಾಗಿಯಾಗುವಂತೆಯೂ ದೀಪ್ಕೆ ಕರೆ ನೀಡಿದ್ದಾರೆ.

''ನಾವು ಕೋಟೆಗೆ ಮುತ್ತಿಗೆ ಹಾಕಿದ್ದೇವೆ. ನಿಮ್ಮೆಲ್ಲರ ಬೆಂಬಲವಿಲ್ಲದೆ ಈ ಚಳವಳಿ ಯಶಸ್ವಿಯಾಗುವುದಿಲ್ಲ'' ಎಂದು ಹೇಳಿದ್ದಾರೆ.

ಪ್ರತಿಭಟನಕಾರರಿಗೆ ಶನಿವಾರ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಪ್ರತಿಭಟನೆ ನಡೆಸಲು ದೆಹಲಿ ಪೊಲೀಸ್ ಅನುಮತಿ ನೀಡಿತ್ತು. ಅಲ್ಲದೆ ಸ್ಥಳ ತೆರವುಗೊಳಿಸುವಂತೆ ಇಲ್ಲವಾದಲ್ಲಿ ಕಾನೂನು ಕ್ರಮ ಕೈಗೊಳ್ಳುವುದಾಗಿ ದೆಹಲಿ ಪೊಲೀಸರು ಎಚ್ಚರಿಕೆ ನೀಡಿದ್ದರು. ಆದರೆ ಅಲ್ಲಿಂದ ಕದಲದ ಪ್ರತಿಭಟನಾಕಾರರು ಧರಣಿಯಲ್ಲಿ ನಿರತರಾಗಿದ್ದಾರೆ.

ಒಂದು ವೇಳೆ ಜಂತರ್‌ಮಂತರ್‌ನಿಂದ ತೆರವುಗೊಳಿಸುವುದಾದರೆ ಪ್ರತಿಭಟನೆಗೆ ಬೇರೆ ಸ್ಥಳ ನಿಗದಿ ಮಾಡುವಂತೆ ದೀಪ್ಕೆ ಒತ್ತಾಯಿಸಿದ್ದಾರೆ. ಅಲ್ಲಿಯವರೆಗೆ ಜಂತರ್‌ಮಂತರ್‌ನಲ್ಲೇ ಪ್ರತಿಭಟನೆ ಮುಂದುವರಿಸುವುದಾಗಿ ತಿಳಿಸಿದ್ದಾರೆ.

ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಈ ಕುರಿತು ಸರಣಿ ಪೋಸ್ಟ್ ಹಾಕಿರುವ ದೀಪ್ಕೆ, ಬಲವಂತವಾಗಿ ಜನರು ಜಂತರ್‌ಮಂತರ್‌ಗೆ ಬರುವುದನ್ನು ತಡೆಯಬೇಡಿ ಎಂದು ಪೊಲೀಸರಿಗೆ ಮನವಿ ಮಾಡಿದ್ದಾರೆ.

ನೀಟ್ ಮರುಪರೀಕ್ಷೆಯ ವಿದ್ಯಾರ್ಥಿಗಳಿಗಾಗಿ 180 ವಿಶೇಷ ಬಸ್‌ಗಳ ಓಡಾಟ

ಮೊದಲ ಪುಟದಿಂದ

ಆದಾಗ್ಯೂ, ವಿಶೇಷ ಸೇವೆಗಳ ಮಾರ್ಗದ ವಿವರಗಳನ್ನು ಬೆಳಿಗ್ಗೆ 10 ಗಂಟೆಯ ಮೊದಲು ಸಾಮಾಜಿಕ ಮಾಧ್ಯಮ ವೇದಿಕೆಗಳು ಅಥವಾ ಮಾಧ್ಯಮಗಳಿಗೆ ಅಧಿಕೃತ ಸಂವಹನದ ಮೂಲಕ ಸಾರ್ವಜನಿಕಗೊಳಿಸಲಾಗಿಲ್ಲ, ಇದರಿಂದಾಗಿ ವಿದ್ಯಾರ್ಥಿಗಳು ತಮ್ಮ ಪ್ರಯಾಣವನ್ನು ಮುಂಚಿತವಾಗಿ ಯೋಜಿಸಲು ಕಷ್ಟವಾಯಿತು. ಸಮಸ್ಯೆಯನ್ನು ಅಧಿಕಾರಿಗಳ ಗಮನಕ್ಕೆ ತಂದ ಮೇಲೆ ಬೆಳಿಗ್ಗೆ ಬಳಿಕ ಮಾರ್ಗವಾರು ಮಾಹಿತಿಯನ್ನು ಬಿಡುಗಡೆ ಮಾಡಲಾಯಿತು.

ಬೆಸ್ಟ್ ಸಂಯುಕ್ತ ಕಾಮ್ಗಾರ್ ಕೃತಿ ಸಮಿತಿ ಕರೆ ನೀಡಿರುವ ಮುಷ್ಕರವು ಶುಕ್ರವಾರದಿಂದ ಪಾಲಿಕೆ ಬಸ್ ಸಾರಿಗೆ ವ್ಯವಸ್ಥೆಯನ್ನು ಬಹುತೇಕ ಸ್ಥಗಿತಗೊಳಿಸಿದ್ದು, ಪ್ರಯಾಣಿಕರು ತಮ್ಮ ದೈನಂದಿನ ಪ್ರಯಾಣಕ್ಕಾಗಿ ಲೋಕಲ್ ರೈಲುಗಳು, ಮೆಟ್ರೋ ಸೇವೆಗಳು, ಟ್ಯಾಕ್ಸಿಗಳು ಮತ್ತು ಆಟೋರಿಕ್ಷಾಗಳನ್ನು ಅವಲಂಬಿಸಬೇಕಾಯಿತು.

ಮಹಾರಾಷ್ಟ್ರ ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆ (ಮೆಸ್ಮಾ) ಮತ್ತು ನೌಕರರು ಮುಷ್ಕರ ನಡೆಸದಂತೆ ತಡೆಯುವ ಕೈಗಾರಿಕಾ ನ್ಯಾಯಾಲಯದ ಮಧ್ಯಂತರ ಆದೇಶದ ಹೊರತಾಗಿಯೂ ಆಂದೋಲನ ಮುಂದುವರೆದಿದೆ.

ಬೆಸ್ಟ್‌ನ ಖಾಯಂ ಮತ್ತು ತಾತ್ಕಾಲಿಕ ಸಿಬ್ಬಂದಿ ಹಾಗೂ ವೆಟ್-ಲೀಸ್ ನಿರ್ವಾಹಕರ ಹೆಚ್ಚಿನ ಉದ್ಯೋಗಿಗಳು ಮುಷ್ಕರದಲ್ಲಿ ಭಾಗವಹಿಸುತ್ತಿದ್ದಾರೆ.

ಶನಿವಾರ ಮೆಸ್ಮಾ ಅಡಿಯಲ್ಲಿ ನಡೆಯುತ್ತಿರುವ ಮುಷ್ಕರದಲ್ಲಿ ಭಾಗವಹಿಸುವ ನೌಕರರಿಗೆ ಮತ್ತು ವೆಟ್-ಲೀಸ್ ಗುತ್ತಿಗೆದಾರರಿಗೆ ನೋಟಿಸ್ ನೀಡಲಾಗಿದ್ದು,ಮೆಸ್ಮಾ ಅಡಿಯಲ್ಲಿ, ಮುಷ್ಕರ ನಡೆಸುತ್ತಿರುವ ನೌಕರರ ವಿರುದ್ಧ ಕಾನೂನು ಕ್ರಮಗಳನ್ನು ಆರಂಭಿಸಬಹುದಾಗಿದೆ.

ಶುಕ್ರವಾರ ಮುಷ್ಕರದ ಮೊದಲ ದಿನ ಕೇವಲ 48 ಬಸ್‌ಗಳು ಮಾತ್ರ ಕಾರ್ಯನಿರ್ವಹಿಸಿದವು, ಆದರೆ ಹಲವಾರು ಬಸ್‌ಗಳು ಅಡಚಣೆ ಮತ್ತು ಕಲ್ಲು ತೂರಾಟದ ಘಟನೆಗಳ ಬಳಿಕ ಡಿಪೋಗಳಿಗೆ ಹಿಂತಿರುಗಬೇಕಾಯಿತು ಎಂದು ವರದಿಯಾಗಿದೆ.

ಸಾರಿಗೆ ಸಚಿವ ಪ್ರತಾಪ್ ಸರ್ನಾಯಕ್ ಶುಕ್ರವಾರ ಯೂನಿಯನ್ ಪ್ರತಿನಿಧಿಗಳು ಮತ್ತು ನಗರ ಸಾರಿಗೆ ಇಲಾಖೆ ಮತ್ತು ಬೆಸ್ಟ್ ಸಂಸ್ಥೆಯ ಹಿರಿಯ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದರೂ ಚರ್ಚೆಗಳು ಅಪೂರ್ಣವಾಗಿಯೇ ಉಳಿದವು.

ಶನಿವಾರ, ದಿನದ ಮೊದಲಾರ್ಧದಲ್ಲಿ ಕೇವಲ ನಾಲ್ಕು ಬಸ್‌ಗಳು ಮಾತ್ರ ರಸ್ತೆಗಳಲ್ಲಿದ್ದವು, ಇದರಿಂದಾಗಿ ಪ್ರಯಾಣಿಕರು ಇತರ ಸಾರಿಗೆ ವಿಧಾನಗಳನ್ನು ಅವಲಂಬಿಸಬೇಕಾಯಿತು. ಚಾಲಕರು, ಕಂಡಕ್ಟರ್‌ಗಳು ಮತ್ತು ಇತರ ಕಾರ್ಯಾಚರಣಾ ಸಿಬ್ಬಂದಿಗಳ ಹಾಜರಾತಿಯೂ ಕಳಪೆಯಾಗಿತ್ತು.

ಶನಿವಾರ ಸಂಜೆ ನೀಡಿದ ಒಂದು ಹೇಳಿಕೆಯಲ್ಲಿ, ಪ್ರತಿಭಟನೆಯನ್ನು ಮುನ್ನಡೆಸುತ್ತಿರುವ ನೌಕರರ ಸಂಘಗಳು ಸರಕಾರದೊಂದಿಗೆ ಯಾವುದೇ ಸಮಯದಲ್ಲಿ ಮಾತುಕತೆಗೆ ಸಿದ್ಧರಿದ್ದೇವೆ ಮತ್ತು ತಮ್ಮ ಬಾಕಿ ಇರುವ ಬೇಡಿಕೆಗಳ ಕುರಿತು ಆರಂಭಿಕ ನಿರ್ಧಾರ ತೆಗೆದುಕೊಳ್ಳುವಂತೆ ರಾಜ್ಯ ನಾಯಕತ್ವವನ್ನು ಒತ್ತಾಯಿಸಿವೆ.

ಮುಷ್ಕರವು ಮೆಟ್ರೋ ಸೇವೆಗಳಲ್ಲಿ ಪ್ರಯಾಣಿಕರ ಸಂಖ್ಯೆಯಲ್ಲಿ ತೀವ್ರ ಹೆಚ್ಚಳಕ್ಕೆ ಕಾರಣವಾಗಿದ್ದು, ಉಪನಗರ ರೈಲ್ವೆ ಜಾಲದ ಮೇಲೆ ಒತ್ತಡವನ್ನು ಹೆಚ್ಚಿಸಿದೆ, ಆದರೆ ಅನೇಕ ಕಚೇರಿಗೆ ಹೋಗುವವರು ಮನೆಯಿಂದಲೇ ಕೆಲಸ ಮಾಡಲು ಆಯ್ಕೆ ಮಾಡಿಕೊಂಡಿದ್ದಾರೆ. ಟ್ಯಾಕ್ಸಿಗಳು ಮತ್ತು ಆಟೋರಿಕ್ಷಾಗಳಿಗಾಗಿ ದೀರ್ಘ ಕಾಯುವಿಕೆ ಮತ್ತು ಬಸ್‌ಗಳ ಅನುಪಸ್ಥಿತಿಯಿಂದಾಗಿ ಹೆಚ್ಚಿನ ಪ್ರಯಾಣ ವೆಚ್ಚವನ್ನು ಪ್ರಯಾಣಿಕರು ವರದಿ ಮಾಡಿದ್ದಾರೆ.

ಮಳೆ ಪರಿಸ್ಥಿತಿ ಕಳವಳಕಾರಿ; ಮುಖ್ಯಮಂತ್ರಿ ಫಡ್ನವೀಸ್

ಮೊದಲ ಪುಟದಿಂದ

ಜೂ.23 ರಿಂದ ಕರಾವಳಿ ಕೊಂಕಣ ಪ್ರದೇಶದಲ್ಲಿ ಮಳೆ ಚಟುವಟಿಕೆ ತೀವ್ರಗೊಳ್ಳುವ ನಿರೀಕ್ಷೆಯಿದೆ ಎಂದು ಸಿಎಂ ಹೇಳಿದರಲ್ಲದೆ, ವಿದರ್ಭ ಮತ್ತು ಮರಾಠವಾಡದಲ್ಲಿ ಹಗುರದಿಂದ ಮಧ್ಯಮ ಮಳೆಯಾಗುವ ಸಾಧ್ಯತೆಯಿದೆ, ಜುಲೈ ಮೊದಲ ವಾರದವರೆಗೆ ಬಿತ್ತನೆಗೆ ಅಗತ್ಯವಾದ ವ್ಯಾಪಕ ಮಳೆ ಗೋಚರಿಸುವುದಿಲ್ಲ ಎಂದರು.

ಸರಕಾರದ ಸಲಹೆಗಳನ್ನು ಪಾಲಿಸುವಂತೆ ರೈತರಿಗೆ ಮನವಿ ಮಾಡಿದ ಅವರು, ಕನಿಷ್ಠ 100 ಮಿಮೀ ಮಳೆಯಾದ ಬಳಿಕವೇ ಬಿತ್ತನೆ ಕೈಗೊಳ್ಳಬೇಕು ಎಂದು ಹೇಳಿದರು.

ಮಹಾರಾಷ್ಟ್ರದ ನೀರಿನ ಸಂಗ್ರಹವು ಕಳೆದ ವರ್ಷದ ಇದೇ ಅವಧಿಯಲ್ಲಿ ಶೇ. 33 ಕ್ಕೆ ಹೋಲಿಸಿದರೆ ಶೇ. 24 ರಷ್ಟಿದೆ ಮತ್ತು ಕುಡಿಯುವ ನೀರಿನ ಸರಬರಾಜನ್ನು ಸಂರಕ್ಷಿಸಲು ನೀರು ಹಿಂಪಡೆಯುವಿಕೆಯ ಮೇಲೆ ನಿರ್ಬಂಧಗಳನ್ನು ವಿಧಿಸಲಾಗಿದೆ ಎಂದು ಫಡ್ನವೀಸ್ ವಿವರಿಸಿದರು.

ಮಳೆ ಅನಿಶ್ಚಿತವಾಗಿ ಮುಂದುವರಿದರೆ ಮತ್ತು ನಾವು ನೀರನ್ನು ಸಂರಕ್ಷಿಸದಿದ್ದರೆ, ಮಹಾರಾಷ್ಟ್ರವು ದೊಡ್ಡ ಕುಡಿಯುವ ನೀರಿನ ಬಿಕ್ಕಟ್ಟನ್ನು ಎದುರಿಸಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು.

ಮುಖ್ಯಮಂತ್ರಿಗಳು ಸರಕಾರದ 36,585 ಕೋಟಿ ರೂ.ಗಳ ಕೃಷಿ ಸಾಲ ಮನ್ನಾ ಪ್ಯಾಕೇಜ್‌ನ್ನು ಸಮರ್ಥಿಸಿಕೊಂಡರಲ್ಲದೆ, ಇದು 56 ಲಕ್ಷ ರೈತರಿಗೆ ಪ್ರಯೋಜನವನ್ನು ನೀಡುತ್ತದೆ ಮತ್ತು ಹೊಸ ಸಾಲವನ್ನು ಪಡೆಯುವ ಅವರ ಸಾಮರ್ಥ್ಯವನ್ನು ಪುನಃಸ್ಥಾಪಿಸುವ ಗುರಿಯನ್ನು ಹೊಂದಿದೆ ಎಂದು ಹೇಳಿದರು.

'ನಮಗೆ, ಸಾಲ ಮನ್ನಾ ರಾಜಕೀಯ ವಿಷಯವಲ್ಲ. ನಮ್ಮ ರೈತರು ಬದುಕುಳಿಯಬೇಕು ಮತ್ತು ಹೊಸ ಸಾಲಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಮರಳಿ ಪಡೆಯಬೇಕು ಎಂದು ನಾವು ಬಯಸುತ್ತೇವೆ. ಯಾವುದೇ ಸಾಲ ಮನ್ನಾ ಎಂದಿಗೂ ರೈತನನ್ನು ಶ್ರೀಮಂತನನ್ನಾಗಿ ಮಾಡಿಲ್ಲ, ಮತ್ತು ಅದು ಶಾಶ್ವತ ಪರಿಹಾರವಲ್ಲ, ಆದರೆ ಸಂದರ್ಭಗಳು ಕೆಲವೊಮ್ಮೆ ಅಂತಹ ಹೆಜ್ಜೆಯನ್ನು ಅಗತ್ಯಗೊಳಿಸುತ್ತವೆ' ಎಂದು ಮುಖ್ಯಮಂತ್ರಿ ತಿಳಿಸಿದರು.

ಬ್ಯಾಂಕಿಂಗ್ ವ್ಯವಸ್ಥೆಯ ಮೇಲೆ ಯೋಜನೆಯ ಪರಿಣಾಮವನ್ನು ಸಮಿತಿಯು ಪರಿಶೀಲಿಸಿದೆ ಮತ್ತು ಬ್ಯಾಂಕುಗಳು ಒತ್ತಡಕ್ಕೆ ಒಳಗಾಗದಂತೆ ನೋಡಿಕೊಳ್ಳಲು ಸರಕಾರವು ಸುರಕ್ಷತಾ ಕ್ರಮಗಳನ್ನು ಸೇರಿಸಿದೆ ಎಂದು ಫಡ್ನವೀಸ್ ಹೇಳಿದರು.

ತಮ್ಮ ನೇತೃತ್ವದ ಮತ್ತು ಇಬ್ಬರು ಉಪಮುಖ್ಯಮಂತ್ರಿಗಳು ಹಾಗೂ ಇತರ ಮಂತ್ರಿಗಳನ್ನು ಒಳಗೊಂಡ ಸಚಿವ ಉಪಸಮಿತಿಗೆ ಯೋಜನೆಯ ಅನುಷ್ಠಾನದ ಸಮಯದಲ್ಲಿ ಉಂಟಾಗುವ ತೊಂದರೆಗಳನ್ನು ಪರಿಹರಿಸಲು ಮತ್ತು ಅಗತ್ಯವಿರುವಲ್ಲೆಲ್ಲಾ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಲು ಅಧಿಕಾರ ನೀಡಲಾಗಿದೆ ಎಂದು ಅವರು ಹೇಳಿದರು.

ಮೂರು ವಾರಗಳ ಮುಂಗಾರು ಅಧಿವೇಶನದಲ್ಲಿ ಸುಮಾರು 10 ಮಸೂದೆಗಳನ್ನು ಅನುಮೋದನೆಗಾಗಿ ತೆಗೆದುಕೊಳ್ಳಲಾಗುವುದು ಎಂದು ಫಡ್ನವೀಸ್ ಹೇಳಿದರು.

ಅವುಗಳಲ್ಲಿ, ಪ್ರಮುಖವಾದ ಶಾಸನವೆಂದರೆ ಮಹಿಳಾ ರೈತರಿಗೆ ಕಾನೂನು ಸ್ಥಾನಮಾನ ನೀಡುವ ಮಸೂದೆ. ನಾವು ಕೃಷಿ ವಲಯವನ್ನು ಅಧ್ಯಯನ ಮಾಡಿದಾಗ, ಮಹಿಳೆಯರು ಕೃಷಿ ಚಟುವಟಿಕೆಗಳಿಗೆ ಹೆಚ್ಚಿನ ಕೊಡುಗೆ ನೀಡುತ್ತಾರೆ ಎಂದು ನಾವು ಕಂಡುಕೊಂಡಿದ್ದೇವೆ. ಆದಾಗ್ಯೂ, ಅವರಲ್ಲಿ ಅನೇಕರನ್ನು ರೈತರೆಂದು ಗುರುತಿಸಲಾಗಿಲ್ಲ ಏಕೆಂದರೆ ಭೂಮಿಯನ್ನು ಅವರ ಹೆಸರಿನಲ್ಲಿ ನೋಂದಾಯಿಸಲಾಗಿಲ್ಲ. ಪರಿಣಾಮವಾಗಿ, ಅವರಿಗೆ ರೈತ ಸ್ಥಾನಮಾನವನ್ನು ನಿರಾಕರಿಸಲಾಗಿದೆ ಎಂದು ಅವರು ಹೇಳಿದರು.

ಈ ನಿಟ್ಟಿನಲ್ಲಿ ಹಲವಾರು ಶಿಫಾರಸುಗಳನ್ನು ಮೊದಲೇ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಮಹಿಳಾ ರೈತ ವರ್ಷದ ಉಪಕ್ರಮದ ಸಂದರ್ಭದಲ್ಲಿ, ಸಾರ್ವಜನಿಕ ಆರೋಗ್ಯ ತಜ್ಞೆ ಡಾ. ಸೌಮ್ಯ ಸ್ವಾಮಿನಾಥನ್ ಅವರು ಮಹಿಳಾ ರೈತರಿಗೆ ಕಾನೂನು ಮಾನ್ಯತೆ ನೀಡುವ ಕಾನೂನು ಅವರಿಗೆ ಹೇಗೆ ಪ್ರಯೋಜನವನ್ನು ನೀಡುತ್ತದೆ ಎಂಬುದನ್ನು ವಿವರಿಸಿದರು. ಆ ಚರ್ಚೆಗಳ ಆಧಾರದ ಮೇಲೆ, ಸರಕಾರ ಈ ಶಾಸನವನ್ನು ತರಲು ನಿರ್ಧರಿಸಿದೆ ಎಂದು ಅವರು ಹೇಳಿದರು.

ಈ ಕ್ರಮಗಳು ಜನರ ಹಿತಾಸಕ್ತಿಗಳನ್ನು ಪೂರೈಸುತ್ತವೆ ಎಂದು ಖಚಿತಪಡಿಸಿಕೊಳ್ಳಲು ನಾವು ಬದ್ಧರಾಗಿದ್ದೇವೆ ಎಂದು ಅವರು ತಿಳಿಸಿದರು.

ಅಧಿವೇಶನಕ್ಕೂ ಮುನ್ನ ಜ್ಞಾಪಕ ಪತ್ರವನ್ನು ಹಸ್ತಾಂತರಿಸಿ ಸಾಂಪ್ರದಾಯಿಕ ಚಹಾ ಕೂಟವನ್ನು ಬಹಿಷ್ಕರಿಸಿದ್ದಕ್ಕಾಗಿ ಪ್ರತಿಪಕ್ಷಗಳನ್ನು ಟೀಕಿಸಿದ ಫಡ್ನವೀಸ್, ತಮ್ಮ ಪ್ರತಿಸ್ಪರ್ಧಿಗಳು ಸ್ವಲ್ಪ ಪ್ರಯತ್ನ ಮಾಡುತ್ತಿದ್ದಾರೆ.ಸರಕಾರವು ಅವುಗಳನ್ನು ಪರಿಹರಿಸಿದ್ದರೂ ಅವರು ಅದೇ ವಿಷಯಗಳನ್ನು ಎತ್ತುತ್ತಲೇ ಇದ್ದಾರೆ ಎಂದು ಹೇಳಿದರು.

'ಅವರು ಹಾಜರಾಗಿದ್ದರೆ, ನಾವು ಸಮಸ್ಯೆಗಳನ್ನು ಚರ್ಚಿಸಬಹುದು ಮತ್ತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಬಹುದು. ಬದಲಾಗಿ, ಅವರು ನಮಗೆ ಆರು ಪುಟಗಳ ಪತ್ರವನ್ನು ಹಸ್ತಾಂತರಿಸಿದರು. ಒಂದು ಒಳ್ಳೆಯ ವಿಷಯವೆಂದರೆ ಕಳೆದ ಬಾರಿ ಅವರ ಜ್ಞಾಪಕ ಪತ್ರದಲ್ಲಿ ಸಹಿಗಳಿಲ್ಲ ಎಂಬ ಟೀಕೆಗಳ ಬಳಿಕ ಈ ಬಾರಿ ಪತ್ರದಲ್ಲಿ ಸಹಿಗಳಿವೆ' ಎಂದು ಅವರು ತಿಳಿಸಿದರು.

ದಾಖಲೆಯನ್ನು ನೋಡಿದವರು ಸಹಿಗಳನ್ನು ಪ್ರತ್ಯೇಕ ಹಾಳೆಗಳಲ್ಲಿ ತೆಗೆದುಕೊಂಡು ಆರು ಪುಟಗಳ ಜ್ಞಾಪಕ ಪತ್ರಕ್ಕೆ ಲಗತ್ತಿಸಿರುವುದನ್ನು ಗಮನಿಸಿರಬಹುದು ಎಂದು ಅವರು ಹೇಳಿದರು.

ಸಮಸ್ಯೆಯೆಂದರೆ ಪ್ರಶ್ನೆಗಳಿಗೆ ಉತ್ತರಿಸಿದ ಬಳಿಕ ಮತ್ತು ಕ್ರಮ ತೆಗೆದುಕೊಂಡ ಬಳಿಕವೂ ಅವರು ಅದೇ ವಿಷಯಗಳನ್ನು ಎತ್ತುತ್ತಲೇ ಇರುತ್ತಾರೆ ಏಕೆಂದರೆ ಅವರಿಗೆ ನಿಜವಾಗಿಯೂ ವಿರೋಧಿಸುವುದು ಹೇಗೆ ಎಂದು ತಿಳಿದಿಲ್ಲ.ವಿರೋಧಕ್ಕಾಗಿ ವಿರೋಧವು ಅವರ ಏಕೈಕ ಕಾರ್ಯಸೂಚಿಯಾಗಿದೆ ಎಂದು ಅವರು ತಿಳಿಸಿದರು.

Printed & Published by Mr. Pravin Murlidhar Shingote on behalf of Shree Ambika Printers & Publications and Printed at Shree Ambika Printers & Publications, Plot No. D-222/1/B, T T C Industrial Area, MIDC, Shiravane, Opp. D. Y. Patil Stadium, Near Mumbai-Pune Highway, Nerul (E), Navi Mumbai, Thane-400706. Published from 215, 2nd Flr, Narayan Udyog Bhavan, Industrial Estate, Lalbaug, Mumbai - 400012. Tel. : 24715208 To 2 471 5224. Founder : Late Murlidhar Ananta Shingote. Editor : Chandrashekhar Palethady (*Responsible for selection of News under the PRB Act) Regd.No.MH/by South 296 RNI No.: 56957/92 E-mail : shrirammalla@gmail.com

ಕರ್ನಾಟಕ

ಸಂಪಾದಕರ ಮಾತು...

ಸೋಮವಾರ, 22, ಜೂನ್ 2026.

ನೈತಿಕತೆಯಿಲ್ಲದ ರಾಜಕಾರಣ

ಮಹಾರಾಷ್ಟ್ರದಲ್ಲಿ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಶಿವಸೇನೆ (ಯುಬಿಟಿ)ಯ 9 ಲೋಕಸಭಾ ಸದಸ್ಯರಲ್ಲಿ 6 ಎಂಪಿಗಳ ಪಕ್ಷದ ನಾಯಕತ್ವ ವಿರುದ್ಧ ಬಂಡಾಯ ಎದ್ದು ಉಪ ಮುಖ್ಯಮಂತ್ರಿ ಏಕನಾಥ್ ಶಿಂದೆ ಅವರ ಶಿವಸೇನೆ ಸೇರುವುದಾಗಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಕೋರಿಕೆ ಸಲ್ಲಿಸಿದ್ದಾರೆ. ಆ ಬಗ್ಗೆ ಪರಿಶೀಲಿಸುವುದಾಗಿ ಬಿರ್ಲಾ ಹೇಳಿದ್ದಾರೆ. ಸಂಸತ್ತಿನ ಮುಂಗಾರು ಅಧಿವೇಶನ ವೇಳೆಗೆ ಶಿವಸೇನೆ(ಯುಬಿಟಿ)ಯ 6 ಎಂಪಿಗಳು ಶಿವಸೇನೆಯ ಎಂಪಿಗಳಾಗಿ ಆಡಳಿತ ಎನ್‌ಡಿಎ ಕಡೆಯಲ್ಲಿ ಆಸನ ಪಡೆಯಲಿದ್ದಾರೆ ಎನ್ನುವುದು ಸ್ಪಷ್ಟವಾಗಿದೆ.ಮತ್ತೊಂದೆಡೆ ಮಮತಾ ಬ್ಯಾನರ್ಜಿ ಅವರ ಟಿಎಂಸಿಯಿಂದ ಪ್ರತ್ಯೇಕ ಆದ 20ಕ್ಕೂ ಹೆಚ್ಚು ಲೋಕಸಭಾ ಸದಸ್ಯರೂ ಎನ್‌ಸಿಪಿ(ಎ) ಪಕ್ಷದ ಎಂಪಿಗಳಾಗಿ ಬದಲಾಗಿ ಎನ್‌ಡಿಎ ಮೈತ್ರಿ ಪಕ್ಷವಾಗಿ ಆಸನ ಪಡೆಯಲಿದ್ದಾರೆ. ಇತರ ವಿರೋಧ ಪಕ್ಷಗಳ ಎಷ್ಟು ಲೋಕಸಭಾ ಸದಸ್ಯರನ್ನು ಆಡಳಿತ ಬಿಜೆಪಿ ಎನ್‌ಡಿಎ ಸದಸ್ಯರನ್ನಾಗಿ ಪರಿವರ್ತನೆ ಮಾಡಿ ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಕಾಯ್ದೆ ತಿದ್ದುಪಡಿ ಮಸೂದೆ ಮತ್ತು ಲೋಕಸಭೆ ಹಾಗೂ ವಿಧಾನಸಭೆಗಳ ಕ್ಷೇತ್ರ ಮರು ವಿಂಗಡಣೆಯ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಮತ್ತೆ ಮಂಡನೆ ಮಾಡುತ್ತದೆಯೋ ಎಂದು ಕಾದು ನೋಡಬೇಕಿದೆ.

ಏಕನಾಥ್ ಶಿಂದೆ ಅವರು 2022ರ ಜೂನ್ 20ರಂದು ಶಿವಸೇನೆಯನ್ನು ವಿಭಜನೆ ಮಾಡುವ ಮೂಲಕ ಶಿವಸೇನೆ ಅಧ್ಯಕ್ಷ ಉದ್ಧವ್ ಠಾಕ್ರೆ ಅವರ ಸರಕಾರವನ್ನು ಪತನ ಮಾಡಿ ಬಿಜೆಪಿ ಬೆಂಬಲದಲ್ಲಿ ಮುಖ್ಯಮಂತ್ರಿಯಾಗಿ ಎರಡೂವರೆ ವರ್ಷ ಆಡಳಿತ ನಡೆಸಿದ್ದಾರೆ. ಆದರೆ ಅವರು ಮುಖ್ಯಮಂತ್ರಿಯಾಗಿದ್ದಾಗ 2024ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಏಕನಾಥ್ ಶಿಂದೆ ಅವರ ಶಿವಸೇನೆ ಮತ್ತು ಉಪ ಮುಖ್ಯಮಂತ್ರಿ ಅಜಿತ್ ಪವಾರ್‌ಅವರ ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷದ ಮೈತ್ರಿ ರಂಗ ಮಹಾಯುತಿ ಭಾರೀ ಹಿನ್ನಡೆ ಅನುಭವಿಸಿದ್ದು 48 ಲೋಕಸಭಾ ಸ್ಥಾನಗಳಲ್ಲಿ ಕೇವಲ 17 ಸ್ಥಾನಗಳನ್ನು ಗೆದ್ದುಕೊಂಡರೆ ಉದ್ಧವ್ ಠಾಕ್ರೆ ಅವರ ಶಿವಸೇನೆ(ಯುಬಿಟಿ), ಕಾಂಗ್ರೆಸ್ ಮತ್ತು ಶರದ್ ಪವಾರ್‌ಅವರ ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷ(ಎಸ್ ಪಿ) ಮೈತ್ರಿ ರಂಗ ಮಹಾ ವಿಕಾಸ್ ಅಘಾಡಿ(ಎಂವಿಎ) 31 ಸ್ಥಾನಗಳ ಗೆಲುವಿನ ಜಯಭೇರಿ ಬಾರಿಸಿತ್ತು. ಲೋಕಸಭಾ ಚುನಾವಣೆಯಲ್ಲಿ ಮಹಾಯುತಿಯ ಸೋಲಿಗೆ ಮುಖ್ಯ ಕಾರಣ ಆಗಿದ್ದು ಶಿವಸೇನೆ ಮತ್ತು ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷದ ವಿಭಜನೆ ಬಗ್ಗೆ ಜನರಲ್ಲಿ ಉಂಟಾಗಿದ್ದ ಆಕ್ರೋಶ ಎನ್ನುವುದು ವಾಸ್ತವ. ಆದರೆ ಬಳಿಕ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಮಹಾ ವಿಕಾಸ್ ಅಘಾಡಿ ಸಂಪೂರ್ಣ ನೆಲ ಕಚ್ಚಿದರೆ ಮಹಾಯುತಿ ಅಭೂತಪೂರ್ವ ಗೆಲುವು ಸಾಧಿಸಿ ಅಧಿಕಾರ ಉಳಿಸಿಕೊಂಡಿತ್ತು.

ಮಹಾಯುತಿ ಅಧಿಕಾರ ಉಳಿಸಿಕೊಳ್ಳಲು ಪ್ರಧಾನ ಕಾರಣ ಆಗಿದ್ದು ಮಹಿಳೆಯರಿಗೆ ಮಾಸಿಕ 1,500 ರೂಪಾಯಿ ನೀಡುವ ಮುಖ್ಯಮಂತ್ರಿ ಮಾಜ್ಹಿ ಲಾಡ್ಕಿ ಬಹಿನ್ ಯೋಜನೆ ಎನ್ನುವುದು ಸಾರ್ವತ್ರಿಕ ಸತ್ಯ. ಲೋಕಸಭಾ ಚುನಾವಣೆಯಲ್ಲಿ ಸೋತ ಮಹಾಯುತಿಗೆ ಲೋಕಸಭಾ ಚುನಾವಣೆಯನ್ನು ಎದುರಿಸಲು ಕಂಡು ಬಂದಿದ್ದು ನೆರೆ ರಾಜ್ಯ ಕರ್ನಾಟಕದಲ್ಲಿ ಮಹಿಳೆಯರಿಗೆ ಗೃಹ ಲಕ್ಷ್ಮಿ ಯೋಜನೆಯಡಿ ಮಾಸಿಕ 2000 ರೂಪಾಯಿ ಆರ್ಥಿಕ ಸಹಾಯಧನದ ಕಾರ್ಯಕ್ರಮ. ಉಚಿತ ಯೋಜನೆಗಳನ್ನು ಟೀಕೆ ಮಾಡುತ್ತಾ ಬಂದಿದ್ದ ಬಿಜೆಪಿ ಅದಾಗಲೇ ಮಧ್ಯಪ್ರದೇಶದಲ್ಲಿ ಕೂಡಾ ಉಚಿತ ಯೋಜನೆಗಳ ಕೊಡುಗೆಯಿಂದ ಸರಕಾರ ಉಳಿಸಿಕೊಂಡಿತ್ತು. ಮಹಾರಾಷ್ಟ್ರದಲ್ಲಿ ಕೂಡಾ ಕರ್ನಾಟಕದ ಮಹಿಳಾ ಆರ್ಥಿಕ ಸಬಲೀಕರಣದ ಯೋಜನೆಯನ್ನು ಶಿಂದೆ ಸರಕಾರ ಅನುಷ್ಠಾನಕ್ಕೆ ತಂದು ಭಾರೀ ಬಹುಮತದಿಂದ ಅಧಿಕಾರ ಉಳಿಸಿಕೊಂಡಿತ್ತು. ವಿಧಾನಸಭಾ ಚುನಾವಣೆಯಲ್ಲಿ ಮಹಾಯುತಿ ಭರ್ಜರಿ ಗೆಲುವು ಮೂಲಕ ಸರಕಾರ ಉಳಿಸಿಕೊಂಡರೂ ಏಕನಾಥ್ ಶಿಂದೆ ಅವರನ್ನು ಬಿಜೆಪಿ ಮುಖ್ಯಮಂತ್ರಿಯಾಗಿ ಮುಂದುವರಿಸದೆ ದೇವೇಂದ್ರ ಫಡ್ನವೀಸ್ ಅವರನ್ನು ಮರಳಿ ಮುಖ್ಯಮಂತ್ರಿ ಮಾಡಿದೆ.ಫಡ್ನವೀಸ್ ಅವರು ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಒಂದೂವರೆ ವರ್ಷ ಕಳೆಯಿತು. ಅಷ್ಟರಲ್ಲಿ ಈಗ ಶಿವಸೇನೆಯಲ್ಲಿ ಶಿಂದೆ ಅವರು ಮರಳಿ ಮುಖ್ಯಮಂತ್ರಿ ಆಗಬೇಕು ಎಂಬ ವಾದ ತಲೆಯೆತ್ತಿದೆ. ಶಿವಸೇನೆ ಮಂತ್ರಿಗಳು ಮತ್ತು ಎಂಎಲ್‌ಎಗಳು ಶಿಂದೆ ಅವರು ಮತ್ತೆ ಮುಖ್ಯಮಂತ್ರಿ ಆಗಬೇಕು ಮತ್ತು ದೇವೇಂದ್ರ ಫಡ್ನವೀಸ್ ಅವರನ್ನು ಬಿಜೆಪಿ ರಾಷ್ಟ್ರ ರಾಜಕಾರಣಕ್ಕೆ ಕೊಂಡೊಯ್ಯಬೇಕು ಎನ್ನುವ ವಾದವನ್ನು ಮುಂದಿಟ್ಟಿದ್ದಾರೆ.

ಈ ಬೆಳವಣಿಗೆಯ ನಡುವೆ ಉದ್ಧವ್ ಠಾಕ್ರೆ ಅವರ ಪಕ್ಷದ ಆರು ಲೋಕಸಭಾ ಸದಸ್ಯರನ್ನು ಶಿಂದೆ ಅವರ ಶಿವಸೇನೆಯ ಸೇರ್ಪಡೆ ಮಾಡುವ 'ಹುಲಿ ಕಾರ್ಯಾಚರಣೆ'ಆರಂಭ ಆಗಿದೆ. ಉದ್ಧವ್ ಠಾಕ್ರೆ ಅವರಿಗೆ ಅವರ ಪಕ್ಷದ ಲೋಕಸಭಾ ಸದಸ್ಯರು ಶಿಂದೆ ಜತೆಗೆ ಸಂಪರ್ಕದಲ್ಲಿದ್ದಾರೆ ಎಂಬ ಮಾಹಿತಿ ಸಿಕ್ಕಿದ್ದನ್ನು ಅನುಸರಿಸಿ ಠಾಕ್ರೆ ಅವರ ಪಕ್ಷದ ಎಲ್ಲ ಎಂಪಿಗಳ ಸಭೆಯನ್ನು ಅವರ ಮುಂಬಯಿ ನಿವಾಸದಲ್ಲಿ ಜೂನ್ 14ರಂದು ರವಿವಾರ ಕರೆದಿದ್ದರು. ಆ ಸಭೆಗೆ ನಾಲ್ಕು ಲೋಕಸಭಾ ಸದಸ್ಯರು ಹಾಜರಾದರೆ ಇತರ ಐವರು ಬೇರೆ ಬೇರೆ ಕಾರಣ ನೀಡು ವಿಡಿಯೋ ಕಾನ್ಫರೆನ್ಸ್ ಮೂಲಕ ಸಂಪರ್ಕದಲ್ಲಿ ಇದ್ದರು. ಅದನ್ನು ಅನುಸರಿಸಿ ಪಕ್ಷದ ಎಲ್ಲ 9 ಲೋಕಸಭಾ ಸದಸ್ಯರೂ ಉದ್ದವ್ ಠಾಕ್ರೆ ಅವರ ಸಭೆಗೆ ಹಾಜರಾಗಿದ್ದಾರೆ ಎಂದು ಪಕ್ಷ ಹೇಳಿಕೊಂಡಿತ್ತು. ಆದರೆ ಅಷ್ಟರಲ್ಲಿ ಐವರು ಶಿವಸೇನೆ(ಯುಬಿಟಿ) ಲೋಕಸಭಾ ಎಂಪಿಗಳು ದಿಲ್ಲಿಗೆ ತಲುಪಿದ್ದು ಉಪ ಮುಖ್ಯಮಂತ್ರಿ ಏಕನಾಥ್ ಶಿಂದೆ ಅವರ ಜತೆಗೆ ಗೌಪ್ಯ ಸಭೆ ನಡೆಸಿದ್ದು ಬೆಳಕಿಗೆ ಬಂದಿತ್ತು. ಅದನ್ನು ಅನುಸರಿಸಿ ಶಿವಸೇನೆ (ಯುಬಿಟಿ) ಸಂಸದೀಯ ಪಕ್ಷದ ಅರವಿಂದ ಸಾವಂತ್ ಜೂನ್ 18ರಂದು ದಿಲ್ಲಿಯಲ್ಲಿ ಪಕ್ಷದ ಸಂಸದೀಯ ಪಕ್ಷದ ಸಭೆ ಕರೆದಿದ್ದರು. ಆದರೆ ಆ ಸಭೆಗೆ ಉದ್ದವ್ ಠಾಕ್ರೆ ಅವರ ಪಕ್ಷದ ಆರು ಲೋಕಸಭಾ ಸದಸ್ಯರು ಗೈರು ಹಾಜರಾಗುವ ಮೂಲಕ ಪಕ್ಷದ ಶಿಸ್ತು ಉಲ್ಲಂಘನೆ ಮಾಡಿದ್ದಾರೆ. ಅದನ್ನು ಅನುಸರಿಸಿ ಸಾವಂತ್ ಅವರು ಆರು ಎಂಪಿಗಳಿಗೂ ಸಭೆಗೆ ಗೈರು ಹಾಜರು ಬಗ್ಗೆ ಕಾರಣ ಕೇಳಿ ಶೋಕಾಸ್ ನೋಟೀಸ್ ನೀಡಿದ್ದಾರೆ. ಒಂದು ವಾರದ ಒಳಗೆ ನೊಟೀಸಿಗೆ ಉತ್ತರ ನೀಡದೇ ಇದ್ದರೆ ಪಕ್ಷ ಶಿಸ್ತು ಕ್ರಮ ತೆಗೆದುಕೊಳ್ಳಲಿದೆ ಎಂದು ಸಾವಂತ್ ಎಚ್ಚರಿಕೆ ನೀಡಿದ್ದಾರೆ. ಲೋಕಸಭಾ ಸ್ಪೀಕರ್‌ಓಂ ಬಿರ್ಲಾ ಅವರಿಗೂ ಸಾವಂತ್ ಅವರು ಪತ್ರ ನೀಡಿ ಯಾವುದೇ ಕಾರಣಕ್ಕೂ ಶಿವಸೇನೆ(ಯುಬಿಟಿ) ವಿಭಜನೆ ಆಗಿದೆ ಎಂದು ಮಾನ್ಯ ಮಾಡಬಾರದು ಎಂದು ಒತ್ತಾಯ ಮಾಡಿದ್ದಾರೆ. ಮತ್ತೊಂದೆಡೆ ಉದ್ಧವ್ ಠಾಕ್ರೆ ಅವರ ಪಕ್ಷದ 6 ಬಂಡಾಯ ಲೋಕಸಭಾ ಸದಸ್ಯರು ಲೋಕಸಭಾ ಸ್ಪೀಕರ್‌ಬಿರ್ಲಾ ಅವರಿಗೆ ಪತ್ರ ನೀಡಿ ತಾವು ಶಿಂದೆ ಅವರ ಶಿವಸೇನೆಯ ಎಂಪಿಗಳು ಎಂದು ಮಾನ್ಯ ಮಾಡುವಂತೆ ಕೋರಿಕೆ ಸಲ್ಲಿಸಿದ್ದಾರೆ.

ಏಕನಾಥ್ ಶಿಂದೆ ಅವರು ಉದ್ದವ್ ಠಾಕ್ರೆ ಅವರ ನೇತೃತ್ವದ ಶಿವಸೇನೆ ಶಾಸಕಾಂಗ ಪಕ್ಷವನ್ನು 2022ರ ಜೂನ್ ತಿಂಗಳಲ್ಲಿ ಮೂರನೇ ಎರಡರಷ್ಟು ಬಹುಮತದಿಂದ ವಿಭಜನೆ ಮಾಡಿದಂತೆ ನಾಲ್ಕು ವರ್ಷಗಳ ಬಳಿಕ ಠಾಕ್ರೆ ಅವರ ಶಿವಸೇನೆ(ಯುಬಿಟಿ) ಸಂಸದೀಯ ಪಕ್ಷವನ್ನು ಮೂರನೇ ಎರಡು ಬಹುಮತದಿಂದ ಒಡೆಯಲು ಬಯಸಿದ್ದಾರೆ. ಜೂನ್ 19ರಂದು ಶಿವಸೇನೆಯ 60ನೇ ಸಂಸ್ಥಾಪನಾ ವರ್ಷಾಚರಣೆ ಸಮಾರಂಭದಲ್ಲಿ ಮಾತನಾಡುತ್ತಾ ಉದ್ಧವ್ ಠಾಕ್ರೆ ಅವರ ಪಕ್ಷದ ಆರು ಲೋಕಸಭಾ ಸದಸ್ಯರ ಪಕ್ಷಾಂತರ ತಂತ್ರ ಕೇವಲ ಟ್ರೈಲರ್ ಆಗಿದ್ದು ನಿಜವಾದ ಚಲನಚಿತ್ರ ಇನ್ನು ಬಾಕಿ ಇದೆ ಎಂದು ಉದ್ದವ್ ಠಾಕ್ರೆ ಅವರಿಗೆ ಎಚ್ಚರಿಕೆ ನೀಡಿದ್ದಾರೆ. ಅವರ ಆ ಎಚ್ಚರಿಕೆಯ ಹಿಂದೆ ಠಾಕ್ರೆ ಅವರ ಪಕ್ಷದ ಎಂಎಲ್‌ಎಗಳನ್ನೂ ಪಕ್ಷಾಂತರ ಮಾಡಿಸುವ ಕಾರ್ಯ ನಡೆಯಲಿದೆ ಎಂಬ ಸಂದೇಶ ಇದೆ ಎನ್ನುವುದು ಸ್ಪಷ್ಟವಾಗಿದೆ. ಶಿವಸೇನೆ ಶಾಸಕಾಂಗ ಪಕ್ಷವನ್ನು ವಿಭಜನೆ ಮಾಡಿ ಮುಖ್ಯಮಂತ್ರಿ ಆದ ಏಕನಾಥ್ ಶಿಂದೆ ಅವರು ಠಾಕ್ರೆ ಅವರ ಶಿವಸೇನೆ (ಯುಬಿಟಿ) ಸಂಸದೀಯ ಪಕ್ಷವನ್ನು ವಿಭಜನೆ ಮಾಡಿ ಯಾವ ಸ್ಥಾನಮಾನವನ್ನು ಬಿಜೆಪಿಯಿಂದ ಪಡೆಯುತ್ತಾರೆ ಎಂಬ ಕುತೂಹಲ ಇದೆ. ಆದರೆ ಠಾಕ್ರೆ ಅವರ ಶಿವಸೇನೆ(ಯುಬಿಟಿ)ಯ ಲೋಕಸಭಾ ಸದಸ್ಯರ ಪಕ್ಷಾಂತರ ಹೆಜ್ಜೆ ನಾಚಿಕೆಗೇಡಿನ ಕೃತ್ಯ. ಮತದಾರರಿಗೆ ಮಾಡುತ್ತಿರುವ ಮಹಾದ್ರೋಹ. ಜನರಿಂದ ಚುನಾಯಿತರಾದ ಎಂಎಲ್‌ಎ ಅಥವಾ ಎಂಪಿ ಪಕ್ಷಾಂತರ ಮಾಡಬಾರದು ಎಂಬ ಮಹತ್ತರ ಆಶಯದಿಂದ ಪಕ್ಷಾಂತರ ನಿಷೇಧ ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಆದರೆ ಆ ಕಾನೂನನ್ನೇ ತಮಗೆ ಬೇಕಾದಂತೆ ಬಳಸಿಕೊಳ್ಳುವ ರಾಜಕಾರಣಿಗಳ ರಾಜಕೀಯ ಅನೈತಿಕತೆ ಹೆಜ್ಜೆಯನ್ನು ಹತ್ತಿಕ್ಕಲು ಜನರೇ ಎದ್ದು ನಿಲ್ಲಬೇಕಾಗಬಹುದು. ಮಹಾರಾಷ್ಟ್ರದ ರಾಜಧಾನಿ ಮುಂಬಯಿ ಮಹಾನಗರದ ಸಾರಿಗೆ ಸಂಸ್ಥೆ ಬೆಸ್ಟ್ ಉದ್ಯೋಗಿಗಳ ಅನಿರ್ದಿಷ್ಟ ಮುಷ್ಕರದಿಂದಾಗಿ 25 ಲಕ್ಷಕ್ಕೂ ಹೆಚ್ಚು ನಾಗರಿಕರು ದೈನಂದಿನ ಜೀವನ ನಿರ್ವಹಣೆಗೆ ಪರದಾಟ ನಡೆಸುತ್ತಿದ್ದಾರೆ. ರವಿವಾರ ನೀಟ್ ಯುಜಿ ಮರು ಪರೀಕ್ಷೆ ಇತ್ತು. ನೀಟ್ ಮರು ಪರೀಕ್ಷೆಯ ವಿದ್ಯಾರ್ಥಿಗಳಿಗೆ 60ಕ್ಕೂ ಹೆಚ್ಚು ವಿಶೇಷ ಬಸ್ಸು ವ್ಯವಸ್ಥೆ ಮಾಡಿರುವುದಾಗಿ ಸರಕಾರ ಹೇಳಿದೆ. ಆದರೆ ವಿದ್ಯಾರ್ಥಿಗಳು ಆ ವಿಶೇಷ ಬಸ್ಸುಗಳಿಗೆ ಕಾದು ಕುಳಿತು ನೀಟ್ ಮರು ಪರೀಕ್ಷೆಗೆ ಹಾಜರಾಗಲು ಸಾಧ್ಯವಿತ್ತೇ ಎನ್ನುವ ಪ್ರಶ್ನೆಯನ್ನು ವಿದ್ಯಾರ್ಥಿಗಳ ಪೋಷಕರು ಎತ್ತಿದ್ದಾರೆ. ಜನ ಸಾಮಾನ್ಯರು ಮುಂಬಯಿಯಲ್ಲಿ ಸಂಚಾರಕ್ಕೆ ಪರದಾಟ ನಡೆಸುತ್ತಿದ್ದಾರೆ.ಆದರೆ ಆಡಳಿತ ಪಕ್ಷಗಳು ವಿರೋಧ ಪಕ್ಷಗಳ ಎಂಪಿಗಳು ಮತ್ತು ಎಂಎಲ್‌ಎಗಳನ್ನು ಪಕ್ಷಾಂತರ ಮಾಡಿಸುವ ಸಂಚು ನಡೆಸುತ್ತಿರುವುದು ಪ್ರಜಾಪ್ರಭುತ್ವದ ಮರ್ದನ.

ಸೊಲ್ಲಾಪುರದಲ್ಲಿ ಕನ್ನಡಿಗರ ಆಕ್ರೋಶ: ಕನ್ನಡ ಶಾಲೆಗಳ ಉಳಿವು, ಶಿಕ್ಷಕರ ಹಕ್ಕುಗಳಿಗಾಗಿ ಭಾರೀ ಧರಣಿ ಸತ್ಯಾಗ್ರಹ





ಸೊಲ್ಲಾಪುರ, ಜೂ. 20: ಮಹಾರಾಷ್ಟ್ರದಲ್ಲಿ ಕನ್ನಡ ಶಾಲೆಗಳು, ಕನ್ನಡ ಶಿಕ್ಷಕರು ಹಾಗೂ ಕನ್ನಡಿಗರ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಆದರ್ಶ ಕನ್ನಡ ಬಳಗದ ನೇತೃತ್ವದಲ್ಲಿ ವಿವಿಧ ಕನ್ನಡ ಸಂಘಸಂಸ್ಥೆಗಳು ಹಾಗೂ ಶಿಕ್ಷಕ ಸಂಘಟನೆಗಳ ಸಹಯೋಗದಲ್ಲಿ ಜಿಲ್ಲಾ ಪರಿಷತ್ ಕಚೇರಿ ಎದುರು ಭವ್ಯ ಧರಣಿ ಸತ್ಯಾಗ್ರಹ ನಡೆಯಿತು.

ಕನ್ನಡಿಗರ ಶೈಕ್ಷಣಿಕ, ಭಾಷಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳ ರಕ್ಷಣೆಗೆ ಒತ್ತಾಯಿಸಿ ನಡೆದ ಈ ಸತ್ಯಾಗ್ರಹಕ್ಕೆ ಮರಾಠಿ ಹಾಗೂ ಉರ್ದು ಸಂಘಟನೆಗಳೂ ಬೆಂಬಲ ಸೂಚಿಸಿದ್ದು ವಿಶೇಷವಾಗಿತ್ತು. ಕನ್ನಡದ ಎಲ್ಲ ಖಾಲಿ ಶಿಕ್ಷಕ ಹುದ್ದೆಗಳನ್ನು ಭರ್ತಿ ಮಾಡುವುದು, ಟಿಇಟಿ ಹಾಗೂ ಟಿಎಐಟಿ ಪರೀಕ್ಷೆಗಳನ್ನು ಕನ್ನಡದಲ್ಲೇ ನಡೆಸುವುದು, ಕೇಂದ್ರ ಪ್ರಮುಖ ಹುದ್ದೆಗಳನ್ನು ಕನ್ನಡಕ್ಕಾಗಿ ಮೀಸಲಿಡುವುದು, ಶಿಕ್ಷಣ ಇಲಾಖೆಯ ಎಲ್ಲ ಪರೀಕ್ಷೆಗಳಲ್ಲಿ ಕನ್ನಡ ಮಾಧ್ಯಮಕ್ಕೆ ಅವಕಾಶ ನೀಡುವುದು, ಕನ್ನಡ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮರಾಠಿ ಮಾಧ್ಯಮದ ಶಿಕ್ಷಕರನ್ನು ವರ್ಗಾವಣೆ ಮಾಡುವುದು, ಅಂಗನವಾಡಿಗಳಲ್ಲಿ ಕನ್ನಡ ಬಲ್ಲ ಸೇವಿಕೆಯರನ್ನು ನೇಮಿಸುವುದು, ಕನ್ನಡ ಶಾಲೆಗಳಿಗೆ ಭಾಷಾ ಅಲ್ಪಸಂಖ್ಯಾತ ಸ್ಥಾನಮಾನ ನೀಡುವುದು, ಬಸವೇಶ್ವರ ಪ್ರಾಧಿಕಾರದ ಮೂಲಕ ವಿಶೇಷ ಅನುದಾನ ಒದಗಿಸುವುದು, ಗಡಿಭಾಗದಲ್ಲಿ ಬಸವೇಶ್ವರ ವಿದ್ಯಾಪೀಠ ಸ್ಥಾಪಿಸುವುದು ಹಾಗೂ ಶೈಕ್ಷಣಿಕ ಸಾಫ್ಟ್‌ವೇರ್, ತಾಂತ್ರಿಕ ಸಾಧನಗಳು ಮತ್ತು ಪಠ್ಯಸಾಮಗ್ರಿಗಳಲ್ಲಿ ಕನ್ನಡಕ್ಕೆ ಅವಕಾಶ ಕಲ್ಪಿಸುವುದು ಸೇರಿದಂತೆ ಹತ್ತು ಪ್ರಮುಖ ಬೇಡಿಕೆಗಳನ್ನು ಮುಂದಿರಿಸಲಾಯಿತು.

ಶಿಕ್ಷಕ ಸಮಿತಿಯ ಮುಖಂಡ ಸುರೇಶ್ ಪವಾರ್‌ಮಾತನಾಡಿ, ಕನ್ನಡ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಮೇಲೆ ನಿರಂತರ ಅನ್ಯಾಯ ನಡೆಯುತ್ತಿದೆ. ಟಿಇಟಿ ಪರೀಕ್ಷೆಯನ್ನು ಕನ್ನಡದಲ್ಲೇ ನಡೆಸಬೇಕು. ಕನ್ನಡ ಮಕ್ಕಳ ಶಿಕ್ಷಣದ ಹಕ್ಕುಗಳನ್ನು ರಕ್ಷಿಸಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಶಿಕ್ಷಕ ಸಂಘದ ನಾಯಕ ವೀರಭದ್ರ ಯಾದವಾಡ ಮಾತನಾಡಿ, ಕನ್ನಡ ಮತ್ತು ಮರಾಠಿ ಭಾಷೆಗಳು ಸಹೋದರ ಭಾಷೆಗಳು. ಸೊಲ್ಲಾಪುರ ಜಿಲ್ಲೆಯಲ್ಲಿ ಅಪಾರ ಸಂಖ್ಯೆಯ ಕನ್ನಡಿಗರು ವಾಸಿಸುತ್ತಿದ್ದು, ಅವರ ಹಕ್ಕುಗಳನ್ನು ಕಾಪಾಡುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದರು.

> ಮಹಾರಾಷ್ಟ್ರದ ಕನ್ನಡಿಗರ ಸಮಸ್ಯೆಗಳನ್ನು ಕರ್ನಾಟಕ ಸರ್ಕಾರದ ಗಮನಕ್ಕೆ ತಂದು, ಉನ್ನತ ಮಟ್ಟದ ಸಭೆ ನಡೆಸಿ ಪರಿಹಾರಕ್ಕೆ ಪ್ರಯತ್ನಿಸಲಾಗುವುದು.'
> --ಸೋಮಣ್ಣ ಬೇವಿನಮರದ ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

> 'ಮಹಾರಾಷ್ಟ್ರ ಸರ್ಕಾರವು ಕನ್ನಡ ಶಾಲೆಗಳು ಹಾಗೂ ಕನ್ನಡ ಶಿಕ್ಷಕರ ಸಮಸ್ಯೆಗಳನ್ನು ಶೀಘ್ರ ಬಗೆಹರಿಸಬೇಕು. ಇಲ್ಲದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು.' -ಮಲಿಕಜಾನ್ ಶೇಖ ಅಧ್ಯಕ್ಷರು, ಆದರ್ಶ ಕನ್ನಡ ಬಳಗ, ಮಹಾರಾಷ್ಟ್ರ.

ಬೆಂಗಳೂರುದಿಂದ ಆಗಮಿಸಿದ್ದ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯದರ್ಶಿ ವಿಜಯಕುಮಾರ್‌ಮಾತನಾಡಿ ಕರ್ನಾಟಕದಲ್ಲಿ ಮರಾಠಿ ಭಾಷಿಕರಿಗೆ ದೊರೆಯುವ ಸೌಲಭ್ಯಗಳ ಮಾದರಿಯಲ್ಲೇ ಮಹಾರಾಷ್ಟ್ರದಲ್ಲೂ ಕನ್ನಡಿಗರಿಗೆ ನ್ಯಾಯ ದೊರಕಬೇಕು ಎಂದು ಹೇಳಿದರು. ಧರಣಿಯಲ್ಲಿ ನಿವೃತ್ತ ವಿಸ್ತಾರಾಧಿಕಾರಿ ರತಿಲಾಲ್ ಭೂಸೆ, ರಾಜಶೇಖರ್ ಉಮ್ರಾಣಿಕರ್, ಸುರೇಶ್ ಶಟಗಾರ್, ಶಂಕರ್‌ಅಜಗೊಂಡೆ, ಸಿದ್ದಿಕಿ ಸರ್, ಮುಬಾರಕ್ ಶಕಲಾಲ್ ಶೇಖ್, ಧರೆಪ್ಪ ಕಟ್ಟಿಮನಿ, ರಂಜಿತ್ ತಿಟೆ, ಸೂರ್ಯಕಾಂತ್ ಹತ್ತೂರ, ಪ್ರಕಾಶ್ ಕೋಳಿ, ಅಶೋಕ್ ಪೊಮಾಜಿ, ಬಸವರಾಜ್ ಧನಶೆಟ್ಟಿ, ಮಹೇಶ್ ಮೇತ್ರಿ, ಸಿದ್ದರಾಯ ತೆಗ್ಗೆಳ್ಳಿ, ರಾಜಶ್ರೀ ಮುನ್ನೋಳಿ, ಶಾಲುಭಾಯಿ ಕೋರೆ, ರಾಜಶ್ರೀ ಹಲಸಂಗಿ-ಚಿಂಚೋಳಿ ಮ್ಯಾಮ್,ಮಲ್ಲಿಕಾರ್ಜುನ ಗುರವ, ಕಾಂತೇಶ್ ಅಕ್ಕಲಕೋಟೆ ಸೇರಿದಂತೆ ವಿವಿಧ ಶಿಕ್ಷಕ ಸಂಘಟನೆಗಳ ಮುಖಂಡರು, ಕನ್ನಡ ಸಂಘಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು, ಕನ್ನಡ ಹೋರಾಟಗಾರರು, ಸಾಹಿತಿಗಳು ಹಾಗೂ ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು.ಕಾರ್ಯಕ್ರಮದಲ್ಲಿ ವಿದ್ಯಾಧರ ಗುರವ ಸ್ವಾಗತಿಸಿದರು. ಬಸವರಾಜ ಗುರವ ನಿರೂಪಿಸಿದರು. ಶರಣಪ್ಪ ಫುಲಾರಿ ವಂದಿಸಿದರು.

ಭಿವಂಡಿ: ವಿಷಾಹಾರ ಸೇವಿಸಿ 79 ಜನರು ಆಸ್ಪತ್ರೆಗೆ ದಾಖಲು; ತಿನಿಸು ಅಂಗಡಿ ವಿರುದ್ಧ ಎಫ್‌ಡಿಎ ಕ್ರಮ

ಥಾಣೆ, ಜೂ.21 - ಮಹಾರಾಷ್ಟ್ರದ ಭಿವಂಡಿ ಪಟ್ಟಣದಲ್ಲಿ ವಿಷಾಹಾರ ಸೇವಿಸಿದ ಪರಿಣಾಮವಾಗಿ 79 ಜನರು ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು,ತಿಂಡಿಗಳನ್ನು ಸೇವಿಸಿದ ಬಳಿಕ ಈ ಘಟನೆ ನಡೆದಿರುವುದಾಗಿ ಹಿರಿಯ ವೈದ್ಯಕೀಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆಹಾರ ಮತ್ತು ಔಷಧ ಆಡಳಿತ (ಎಫ್‌ಡಿಎ) ಅಂದಿನಿಂದ ಆಹಾರ ಅಂಗಡಿಗಳ ಮೇಲೆ ದಾಳಿ ನಡೆಸಿ ಥಾಣೆ ಜಿಲ್ಲೆಯ ಪ್ರಮುಖ ತಿನಿಸು ಅಂಗಡಿಗಳನ್ನು ಮುಚ್ಚಿದೆ.

ಪೋಲೀಸರ ಪ್ರಕಾರ, ಜೂ.17 ರಂದು ಸ್ಥಳೀಯ ಸಂಸ್ಥೆಯಲ್ಲಿ ಆಹಾರ ಪದಾರ್ಥಗಳನ್ನು ಸೇವಿಸಿದ ಹಲವಾರು ಗ್ರಾಹಕರು ಮರುದಿನ ಹೊಟ್ಟೆ ನೋವು ಮತ್ತು ಅತಿಸಾರದ ಸಮಸ್ಯೆ ಅನುಭವಿಸಿದರು ಮತ್ತು ಅವರನ್ನು ಆಸ್ಪತ್ರೆಗಳಿಗೆ ಸೇರಿಸಲಾಯಿತು.

ಸುದ್ದಿಸಂಸ್ಥೆ ಜೊತೆ ಮಾತನಾಡಿದ ಐಜಿಎಂ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ. ಮಾಧವಿ ಎಸ್. ಪಾಂಡರೆ, ಘಟನೆಯ ಬಳಿಕ 124 ರೋಗಿಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ, ಅವರಲ್ಲಿ 45 ಜನರನ್ನು ಬಿಡುಗಡೆ ಮಾಡಲಾಗಿದೆ ಮತ್ತು 79 ಜನರನ್ನು ಪ್ರಸ್ತುತ ವೀಕ್ಷಣೆಯಲ್ಲಿ ಇರಿಸಲಾಗಿದೆ ಎಂದು ಹೇಳಿದರು.

ರೋಗಿಗಳ ಪರಿಸ್ಥಿತಿ ಸ್ಥಿರವಾಗಿದ್ದು, ಅಪಾಯದಿಂದ ಪಾರಾಗಿದ್ದಾರೆ. ಅವರಲ್ಲಿ ಇನ್ನೂ ಕೆಲವರು ಹೊಟ್ಟೆ ನೋವು ಕುರಿತಂತೆ ಹೇಳಿಕೊಂಡಿದ್ದಾರೆ, ಪರಿಸ್ಥಿತಿಯನ್ನು ನಿಭಾಯಿಸಲು ನಮ್ಮಲ್ಲಿ ಸಾಕಷ್ಟು ಸಿಬ್ಬಂದಿ ಮತ್ತು ಓಆರ್‌ಎಸ್ ಸ್ಟಾಕ್ ಇದೆ. ತುರ್ತು ಕರ್ತವ್ಯಗಳಿಗಾಗಿ ಕರ್ತವ್ಯವಿಲ್ಲದ ಸಿಬ್ಬಂದಿಯನ್ನು ಕೂಡ ಕರೆಸಿಕೊಳ್ಳಲಾಗಿದೆ ಎಂದು ಡಾ. ಪಾಂಡರೆ ಹೇಳಿದರು. ಅನಾರೋಗ್ಯದ ನಿಖರವಾದ ಕಾರಣವನ್ನು ನಿರ್ಧರಿಸಲು ಸೂಕ್ಷ್ಮ ಜೀವವಿಜ್ಞಾನ, ರಾಸಾಯನಿಕ ಮತ್ತು ಸಂಸ್ಕೃತಿ ವಿಶ್ಲೇಷಣೆಗಾಗಿ ರೋಗಿಗಳ ಮಾದರಿಗಳು ಕಳುಹಿಸಲಾಗಿದೆ ಎಂದು ಅವರು ಹೇಳಿದರು.

ಘಟನೆಯ ಬಳಿಕ ವಿವಿಧ ಮಳಿಗೆಗಳಲ್ಲಿ ತಪಾಸಣೆ ನಡೆಸಲಾಯಿತು ಎಂದು ಎಫ್‌ಡಿಎ ಸಹಾಯಕ ಆಯುಕ್ತ (ಭಿವಾಂಡಿ) ಸಂತೋಷ್ ಶಿರೋಸಿಯಾ.

ನಿಯಮ ಉಲ್ಲಂಘನೆಗಳಿಗಾಗಿ ನಾವು ಕನಿಷ್ಠ ಒಂದು ಉಪಹಾರ ಗೃಹವನ್ನು ಮುಚ್ಚಿದ್ದೇವೆ ಮತ್ತು ದೋಷಯುಕ್ತ ಘೋಷಣೆಗಳಿಗಾಗಿ ಇನ್ನೊಂದು ಮಳಿಗೆ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಪೀಡಿತ ಶಾವರ್ಮಾ ಮಳಿಗೆಯಿಂದ ಮಾದರಿಗಳನ್ನು ಪ್ರಯೋಗಾಲಯ ವಿಶ್ಲೇಷಣೆಗಾಗಿ ಕಳುಹಿಸಲಾಗಿದ್ದು,ಅದನ್ನು ಮುಚ್ಚಲಾಗಿದೆ ಎಂದು ಅವರು ಹೇಳಿದರು.

ಈ ಸಂಜೆ ಮಳಿಗೆ 4 ರಿಂದ ಬೆಳಗಿನ ಜಾವ 2 ರವರೆಗೆ ಕಾರ್ಯನಿರ್ವಹಿಸುತ್ತದೆ, ಆದರೆ ರಾತ್ರಿ 10 ಗಂಟೆಯ ನಂತರ ಶವರ್ಮಾ ಸೇವಿಸಿದವರು ಮಾತ್ರ ಅನಾರೋಗ್ಯಕ್ಕೆ ಒಳಗಾಗಿದ್ದಾರೆ ಎಂದು ಗಮನಿಸಲಾಗಿದೆ. ನಿಖರವಾಗಿ ಏನು ತಪ್ಪಾಗಿದೆ ಎಂದು ಹೇಳುವುದು ತುಂಬಾ ಮುಂಚೆಯೇ.ನಾವು ಖಾದ್ಯವನ್ನು ತಯಾರಿಸುವ ಪ್ರಕ್ರಿಯೆಯನ್ನು ಕೂಡ ಪರಿಶೀಲಿಸಲಾಗುತ್ತಿದೆ. ಮೇ-ಜೂನ್ ಅವಧಿಯಲ್ಲಿ ಹವಾಮಾನ ವೈಪರೀತ್ಯದಿಂದಾಗಿ ಆಹಾರ ವಿಷ ಪ್ರಕರಣಗಳು ಸಾಮಾನ್ಯವಾಗಿ ಹೆಚ್ಚಾಗುತ್ತವೆ ಎಂದು ಹೇಳಿದರು.

ಭಿವಂಡಿ ಒಂದು ಪ್ರಮುಖ ಲಾಜಿಸ್ಟಿಕ್ಸ್ ಕೇಂದ್ರವಾಗಿದೆ ಮತ್ತು ಹಲವಾರು ಗೋದಾಮುಗಳು ಅವಧಿ ಮೀರಿದ ವಸ್ತುಗಳನ್ನು ಮಾರಾಟ ಮಾಡುತ್ತವೆ.ಇದು ಘಟನೆಗೆ ಕಾರಣವಾಗಿದೆ. ಎಫ್‌ಡಿಎ ಇದನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಅದಕ್ಕಿಂತ ಹೆಚ್ಚಾಗಿ ಶೇಖರಣಾ ಸೌಲಭ್ಯಗಳ ಮೇಲೆ ದಾಳಿಗಳನ್ನು ನಾವು ನಿರೀಕ್ಷಿಸುತ್ತೇವೆ ಎಂದು ಸ್ಥಳೀಯ ಶಾಸಕ ರಯೀಸ್ ಶೇಖ್ ತಿಳಿಸಿದರು.

ಬಂಡಾಯ ಸಂಸದರ ಪೈಕಿ ಓಂರಾಜೆ ನಿಂಬಾಳ್ಕರ್ ಇಂದು 'ಮಾತೋಶ್ರೀ'ಯಲ್ಲಿ ಉದ್ಧವ್ ಠಾಕ್ರೆ ಜತೆಗೆ ಭೇಟಿ

ಮುಂಬಯಿ,ಜೂ.21 - ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ (ಯುಬಿಟಿ)ಯ ಆರು ಸಂಸದರು ಬಂಡಾಯದ ಬಾವುಟ ಹಾರಿಸಿರುವರಾದರೂ ಈ ಆರು ಸಂಸದರು ಇನ್ನೂ ಉದ್ಧವ್ ಠಾಕ್ರೆ ಅಥವಾ ಆದಿತ್ಯ ಠಾಕ್ರೆ ಅವರನ್ನು ಟೀಕಿಸಿಲ್ಲ. ಬಂಡಾಯ ಸಂಸದರ ಪೈಕಿ ಓಂರಾಜೆ ನಿಂಬಾಳ್ಕರ್ ಮಾತ್ರ ನೇರವಾಗಿ ಮಾಧ್ಯಮಗಳೊಂದಿಗೆ ಮಾತನಾಡುತ್ತಿದ್ದು ನಾಳೆ ಸೋಮವಾರ ಮಾತೋಶ್ರೀಯಲ್ಲಿ ಉದ್ಧವ್ ಠಾಕ್ರೆ ಅವರನ್ನು ಭೇಟಿಯಾಗಲಿದ್ದಾರೆ ಎಂದು ತಿಳಿದುಬಂದಿದೆ.

ಇದರಿಂದಾಗಿ 'ಆಪರೇಷನ್ ಟೈಗರ್' ದೊಡ್ಡ ತಿರುವು ಪಡೆದುಕೊಳ್ಳುತ್ತಿದ್ದು, ಉಪಮುಖ್ಯಮಂತ್ರಿ ಏಕನಾಥ್ ಶಿಂದೆಗೆ ದಾರಿ ಅಷ್ಟು ಸುಲಭವಲ್ಲ ಎಂದು ನಂಬಲಾಗಿದೆ. ಆರು ಸಂಸದರು ಬಂಡಾಯವೆದ್ದು,ತಮ್ಮದೇ ಸ್ವತಂತ್ರ ಗುಂಪನ್ನು ರಚಿಸಲು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಅರ್ಜಿ ಸಲ್ಲಿಸಿದ್ದಾರೆ ಎಂಬ ವರದಿಗಳು ಬಂದವು. ಅದಾದ ಬಳಿಕ ಜೂ.19 ರಂದು ನಡೆದ ಶಿವಸೇನೆ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಈ ಬಂಡಾಯ ಸಂಸದರು ಶಿಂದೆಸೇನೆ ಜತೆಗೆ ವೇದಿಕೆಯಲ್ಲಿರುತ್ತಾರೆ ಎಂದು ಹೇಳಲಾಗಿತ್ತು.ಆದರೆ ಈ ಕ್ಷಣ ತಪ್ಪಿಹೋಯಿತು.

ಓಂರಾಜೆ ನಿಂಬಾಳ್ಕರ್ ಇಂದು ಧಾರಾಶಿವ್‌ಗೆ ಭೇಟಿ ನೀಡಿದ್ದು,ಅಲ್ಲಿ ಅವರು ಸ್ಥಳೀಯ ಪದಾಧಿಕಾರಿಗಳು, ಕಾರ್ಯಕರ್ತರು, ಶಾಸಕರೊಂದಿಗೆ ಚರ್ಚಿಸಲಿದ್ದಾರೆ. ಇದಕ್ಕೆ ಮೊದಲು ಅವರ ಸ್ನೇಹಿತ ಕೈಲಾಶ್ ಪಾಟೀಲ್ ಮತ್ತು ಶಾಸಕ ವರುಣ್ ಸರ್ದೇಸಾಯಿ ಅವರನ್ನು ಮನವೊಲಿಸಲು ಪ್ರಯತ್ನಿಸಿದರು.ಬಳಿಕ ಅವರು ಮುಂಬಯಿಯ ಮಾತೋಶ್ರೀಗೆ ಆಗಮಿಸಿ ಉದ್ಧವ್ ಠಾಕ್ರೆ ಅವರನ್ನು ಭೇಟಿ ಮಾಡಿ ತಮ್ಮ ವೈಯಕ್ತಿಕ ಮಾತನ್ನು ಮಂಡಿಸುವುದಾಗಿ ಭರವಸೆ ನೀಡಿದರು ಎಂದು ಮೂಲಗಳು ತಿಳಿಸಿವೆ.

ನಿಂಬಾಳ್ಕರ್ ಅವರ ತಂದೆ ಪವನ್‌ರಾಜೆ ನಿಂಬಾಳ್ಕರ್ ಅವರ ಹತ್ಯೆ ಪ್ರಕರಣದ ತೀರ್ಪು ಶನಿವಾರ ಪ್ರಕಟವಾಗಿ ಈ ಪ್ರಕರಣದ ಎಲ್ಲಾ ಆರೋಪಿಗಳನ್ನು ಖುಲಾಸೆಗೊಳಿಸಲಾಯಿತು. ಇದಾದ ಬಳಿಕ ನಿಂಬಾಳ್ಕರ್ ಶಿವಸೇನೆ ಶಿಂದೆ ಬಣವನ್ನು ಸೇರುತ್ತಾರೋ ಇಲ್ಲವೋ? ಎಂಬ ಪ್ರಶ್ನೆ ಸೃಷ್ಟಿಯಾಗಿದೆ. ಈಗ ಸಂಸದ ನಿಂಬಾಳ್ಕರ್ ಅವರು ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ತಂದೆಯೊಂದಿಗಿನ ಹಳೆಯ ಫೋಟೋವನ್ನು ಹೊಂದಿರುವ ವೀಡಿಯೊವನ್ನು ಹಂಚಿಕೊಂಡಿದ್ದಾರೆ.

ಇದರೊಂದಿಗೆ, ಅವರು ಕವಿತೆಯ ಕೆಲವು ಪ್ರಮುಖ ಸಾಲುಗಳನ್ನು ಬರೆದಿದ್ದು, ಸುತ್ತಲಿನ ಕತ್ತಲೆ ಕತ್ತಲೆ ಮತ್ತು ದುಃಖಕರವಾಗಿದ್ದರೂ.ನಾಳೆ ಸತ್ಯದ ಸೂರ್ಯ ಉದಯಿಸುತ್ತಾನೆ ಎಂದು ನನಗೆ ಖಚಿತವಾಗಿದೆ ಎಂದು ಅವರು ಕವಿತೆ ಮೂಲಕ ತಿಳಿಸಿದ್ದಾರೆ. ' ನನ್ನ ಕುಟುಂಬವು 20 ವರ್ಷಗಳಿಂದ ನ್ಯಾಯಕ್ಕಾಗಿ ಹೋರಾಡುತ್ತಿದೆ. ನಾನು ಈ ಪ್ರಕರಣವನ್ನು ದಿಲ್ಲಿ ನ್ಯಾಯಾಲಯಕ್ಕೆ ಕೊಂಡೊಯ್ಯುತ್ತೇನೆ' ಎಂದು ಅವರು ಹೇಳಿದ್ದಾರೆ.

2018ರ ನಕಲಿ ಕರೆನ್ಸಿ ಪ್ರಕರಣ: ಆರೋಪಿ ದೋಷಿ ಎಂದು ತೀರ್ಪು

ಥಾಣೆ,ಜೂ.21 - 2018ರ ನಕಲಿ ಕರೆನ್ಸಿ ಮತ್ತು ಅಕ್ರಮ ಬಂದೂಕುಗಳನ್ನು ಹೊಂದಿದ್ದ ಪ್ರಕರಣದಲ್ಲಿ ತಪ್ಪೊಪ್ಪಿಕೊಂಡ ಬಳಿಕ 38 ವರ್ಷದ ವ್ಯಕ್ತಿಯನ್ನು ಥಾಣೆ ನ್ಯಾಯಾಲಯವು ದೋಷಿ ಎಂದು ತೀರ್ಪು ನೀಡಿದ್ದು,ಸುಮಾರು 8 ವರ್ಷಗಳ ನ್ಯಾಯಾಂಗ ಬಂಧನದಲ್ಲಿ ಈಗಾಗಲೇ ಅನುಭವಿಸಿದ ಜೈಲುಶಿಕ್ಷೆಯನ್ನು ಆತನಿಗೆ ವಿಧಿಸಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ವಿ ಎಲ್ ಬೋಸ್ಲೆ ಅವರು ಜೂ.17 ರಂದು ಆರೋಪಿ ಆಶಿಶ್ ಶಿವಕುಮಾರ್ ಶರ್ಮಾನನ್ನು 8,600 ರೂ.ಗಳ ಸಾಮೂಹಿಕ ದಂಡವನ್ನು ಪಾವತಿಸುವ ಮೂಲಕ ತಕ್ಷಣ ಬಿಡುಗಡೆ ಮಾಡಲು ಆದೇಶಿಸಿದರು.

ಮಹಾರಾಷ್ಟ್ರದ ಥಾಣೆ ಜಿಲ್ಲೆಯ ದಿವಾದಲ್ಲಿ ಪೊಲೀಸರು ನಡೆಸಿದ ದಾಳಿಯಲ್ಲಿ 1,09,650 ರೂ. ಮುಖಬೆಲೆಯ ನಕಲಿ ನೋಟುಗಳು, ಸ್ಕ್ಯಾನರ್-ಪ್ರಿಂಟರ್ ಮತ್ತು ಪರವಾನಗಿ ಇಲ್ಲದ ಬಂದೂಕನ್ನು ವಶಪಡಿಸಿಕೊಂಡ ಬಳಿಕ ಶರ್ಮಾ2018ರ ಜು.11 ರಿಂದ ಜೈಲಿನಲ್ಲಿದ್ದರು.

'ನಕಲಿ ನೋಟುಗಳ ತಯಾರಿಕೆಯ ಅಪರಾಧವು ಗಂಭೀರ ಆರ್ಥಿಕ ಅಪರಾಧವಾಗಿದೆ. ನಕಲಿ ನೋಟುಗಳು ಆರ್ಥಿಕ ಸ್ಥಿರತೆಯನ್ನು ಹಾಳುಮಾಡುತ್ತವೆ ಮತ್ತು ಸಾಮಾನ್ಯ ನಾಗರಿಕರು ಮತ್ತು ರಾಷ್ಟ್ರೀಯ ಆರ್ಥಿಕತೆಗೆ ಹಾನಿ ಮಾಡುತ್ತವೆ' ಎಂದು ನ್ಯಾಯಾಧೀಶರು ಆದೇಶದಲ್ಲಿ ತಿಳಿಸಿದರು.

ಆದಾಗ್ಯೂ, ನ್ಯಾಯಾಲಯವು ಅವರ ಕಳಪೆ ಆರೋಗ್ಯ, ಕುಟುಂಬ ಬೆಂಬಲದ ಕೊರತೆ ಮತ್ತು ಹಿಂದಿನ ದಾಖಲೆಯನ್ನು ಕೂಡ ಗಣನೆಗೆ ತೆಗೆದುಕೊಂಡಿತು.

'ವಿಷಯದ ಒಟ್ಟಾರೆ ದೃಷ್ಟಿಕೋನವನ್ನು ತೆಗೆದುಕೊಂಡು, ಈಗಾಗಲೇ ಅನುಭವಿಸಿರುವ ಗಣನೀಯ ಅವಧಿಗೆ ವಿರುದ್ಧವಾಗಿ ಅಪರಾಧದ ಗುರುತ್ವವನ್ನು ಸಮತೋಲನಗೊಳಿಸುವಾಗ, ಆರೋಪಿಯು ಈಗಾಗಲೇ ಅನುಭವಿಸಿರುವ ಜೈಲು ಶಿಕ್ಷೆ ಮತ್ತು ದಂಡದ ಜೊತೆಗೆ, ಈ ಪ್ರಕರಣದಲ್ಲಿ ನ್ಯಾಯದ ಅಂತ್ಯವನ್ನು ಪೂರೈಸುತ್ತದೆ ಎಂದು ಈ ನ್ಯಾಯಾಲಯವು ಪರಿಗಣಿಸುತ್ತದೆ' ಎಂದು ಅದು ಹೇಳಿದೆ.

ನ್ಯಾಯಾಲಯವು ವಿವಿಧ ಅಪರಾಧಗಳಿಗಾಗಿ ವ್ಯಕ್ತಿಗೆ 8,600 ರೂ.ಗಳ ಸಾಮೂಹಿಕ ದಂಡವನ್ನು ಪಾವತಿಸಲು ಆದೇಶಿಸಿತು.

ಸಹ-ಆರೋಪಿ ಮೊಹಮ್ಮದ್ ಇಸ್ಮಾಯಿಲ್ ಯಾಸಿನ್ ಸಿದ್ಧಿಕಿ ವಿರುದ್ಧದ ಪ್ರಕರಣವು ತಾನು ತಪ್ಪಿತಸ್ಥನಲ್ಲ ಎಂದು ಒಪ್ಪಿಕೊಂಡಿದ್ದು, ನಿಯಮಿತ ವಿಚಾರಣೆಯ ಮೂಲಕ ಪ್ರತ್ಯೇಕವಾಗಿ ಮುಂದುವರಿಯುತ್ತದೆ.

ಮೀರಾ-ಭಾಯಂದರ್‌ನಲ್ಲಿ ನೀರಿನ ಕೊರತೆ; ಪೂಲ್ ಪಾರ್ಟಿ ಯೋಜನೆಗೆ ಸಚಿವ ಪ್ರತಾಪ್ ಸರ್ನಾಯಕ್ ವಿರೋಧ

ಥಾಣೆ, ಜೂ.21 -ಮೀರಾ- ಭಾಯಂದರ್‌ನಲ್ಲಿ ಬಿಜೆಪಿ ಶಾಸಕರಿಗೆ ಸಂಬಂಧಿಸಿದ ಕ್ಲಬ್‌ನಲ್ಲಿ ನಿಗದಿಪಡಿಸಲಾದ ಪೂಲ್ ಪಾರ್ಟಿಯನ್ನು ಮಹಾರಾಷ್ಟ್ರ ಸಾರಿಗೆ ಸಚಿವ ಪ್ರತಾಪ್ ಸರ್ನಾಯಕ್ ವಿರೋಧಿಸಿದ್ದು,ನಗರದಲ್ಲಿ ತೀವ್ರ ನೀರಿನ ಕೊರತೆಯ ನಡುವೆ ಯೋಜಿಸಲಾದ ಇಂತಹ ಕಾರ್ಯಕ್ರಮವನ್ನು ಅಸಂವೇದನಾಶೀಲ ಎಂದು ಕರೆದಿದ್ದಾರೆ.

ಶನಿವಾರ ಭಾಯಂದರ್‌ನಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸರ್ನಾಯಕ್, ಶಾಸಕ ನರೇಂದ್ರ ಮೆಹ್ತಾ ಅವರೊಂದಿಗೆ ಸಂಬಂಧ ಹೊಂದಿರುವ ಸೆವೆನ್ ಇಲೆವೆನ್ ಕ್ಲಬ್‌ನಲ್ಲಿ ಜೂ.27 ರಂದು ನಿಗದಿಪಡಿಸಲಾದ ಕಾರ್ಯಕ್ರಮದ ವಿರುದ್ಧ ಶಿವಸೈನಿಕರು ಪ್ರತಿಭಟನೆ ನಡೆಸಬೇಕೆಂದು ಒತ್ತಾಯಿಸಿದರು.

ನಾಗರಿಕರು ತೀವ್ರ ತೊಂದರೆಗಳನ್ನು ಎದುರಿಸುತ್ತಿರುವ ಸಮಯದಲ್ಲಿ ಸಾವಿರಾರು ಲೀಟರ್ ನೀರನ್ನು ಬಳಸುವ ಕಾರ್ಯಕ್ರಮಗಳನ್ನು ಆಯೋಜಿಸುವುದು ಸಾರ್ವಜನಿಕ ಭಾವನೆಗೆ ವಿರುದ್ಧವಾಗಿದೆ ಎಂದು ಅವರು ಹೇಳಿದರು.

ನೀರಿನ ವ್ಯರ್ಥವನ್ನು ತಡೆಯಲು ನಗರಪಾಲಿಕೆ, ಪೊಲೀಸರು ಮತ್ತು ಜಿಲ್ಲಾ ಅಧಿಕಾರಿಗಳು ತಕ್ಷಣ ಮಧ್ಯಪ್ರವೇಶಿಸಬೇಕೆಂದು ಅವರು ಒತ್ತಾಯಿಸಿದರು.

ಸೂರ್ಯ ಜಲ ಯೋಜನೆಯಲ್ಲಿನ ಅಡಚಣೆಯಿಂದಾಗಿ ಹಲವಾರು ಪ್ರದೇಶಗಳು ಸತತ ಎರಡು ದಿನಗಳ ಕಾಲ ನೀರಿಲ್ಲದೆ ಸಂಕಷ್ಟಕ್ಕೆ ಸಿಲುಕಿವೆ ಎಂದು ಸಚಿವರು ಹೇಳಿದರು.

ಮುಂಬಯಿ ನಗರದ ನಾಗರಿಕರು ಒಂಟಿ ಮಹಿಳಾ ನೀತಿಗೆ ಸಲಹೆಗಳನ್ನು ಕಳುಹಿಸುವಂತೆ ಮನವಿ

ಮುಂಬಯಿ,ಜೂ.21 - ರಾಜ್ಯದಲ್ಲಿ ವಿಧವೆಯರು, ವಿಚ್ಛೇದಿತರು, ಪರಿತ್ಯಕ್ತರು, ಅವಿವಾಹಿತರು ಮತ್ತು ಇತರ ಎಲ್ಲಾ ರೀತಿಯ ಒಂಟಿ ಮಹಿಳೆಯರ ಸರ್ವತೋಮುಖ ಅಭಿವೃದ್ಧಿ ಮತ್ತು ಸಬಲೀಕರಣಕ್ಕಾಗಿ ಸರಕಾರವು ಪ್ರತ್ಯೇಕ ಒಂಟಿ ಮಹಿಳಾ ನೀತಿಯನ್ನು ಸಿದ್ಧಪಡಿಸುತ್ತಿದೆ. ಈ ನೀತಿಯ ಪರಿಣಾಮಕಾರಿ ಮತ್ತು ಸಮಗ್ರ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು, ನಾಗರಿಕರು, ಮಹಿಳಾ ಸಂಘಟನೆಗಳು, ಸಾಮಾಜಿಕ ಸಂಸ್ಥೆಗಳು, ವಿದ್ವಾಂಸರು ಮತ್ತು ವಿಷಯ ತಜ್ಞರು ತಮ್ಮ ಸಲಹೆಗಳು ಮತ್ತು ಪ್ರತಿಕ್ರಿಯೆಗಳನ್ನು ವಾಟ್ಸಾಪ್ ಸಂಖ್ಯೆ 9869869283 ಗೆ ಕಳುಹಿಸಬೇಕು ಎಂದು ಮುಂಬಯಿ ನಗರ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಶೋಭಾ ಶೆಲಾರ್ ಪತ್ರಿಕಾ ಪ್ರಕಟಣೆಯ ಮೂಲಕ ಮನವಿ ಮಾಡಿದ್ದಾರೆ.

ಒಂಟಿಮಹಿಳೆಯರಸಾಮಾಜಿಕ, ಆರ್ಥಿಕಮತ್ತುಕಾನೂನು ಸಬಲೀಕರಣಕ್ಕಾಗಿ ನೀತಿಯನ್ನು ಸಿದ್ಧಪಡಿಸುವಾಗ, ವಿವಿಧ ಹಂತಗಳಿಂದ ಅನುಭವಗಳು ಮತ್ತು ಸಲಹೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಆದ್ದರಿಂದ, ಸಲಹೆಗಳನ್ನು ಕಳುಹಿಸುವಾಗ, ಸಮಸ್ಯೆಯನ್ನು ಪ್ರಸ್ತುತಪಡಿಸುವ ಬದಲು ನಿರ್ದಿಷ್ಟ ಪರಿಹಾರಗಳು, ಹೊಸ ಯೋಜನೆಗಳು, ಅಸ್ತಿತ್ವದಲ್ಲಿರುವ ಯೋಜನೆಗಳಲ್ಲಿ ಅಗತ್ಯ ತಿದ್ದುಪಡಿಗಳು ಮತ್ತು ಕಾನೂನು ಬದಲಾವಣೆಗಳ ಬಗ್ಗೆ ವಿವರವಾದ ಸಲಹೆಗಳನ್ನು ಸಲ್ಲಿಸಬೇಕು. ಒಂಟಿ ಮಹಿಳಾ ನೀತಿಯ ಅಂತಿಮ ಕರಡನ್ನು ಸಿದ್ಧಪಡಿಸುವಾಗ ಸ್ವೀಕರಿಸಿದ ಸಲಹೆಗಳು ಮತ್ತು ಪ್ರತಿಕ್ರಿಯೆಯನ್ನು ಗಂಭೀರವಾಗಿ ಪರಿಗಣಿಸಲಾಗುವುದು. ಆದ್ದರಿಂದ, ಸಂಬಂಧಪಟ್ಟ ಎಲ್ಲರೂ ಈ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಶೋಭಾ ಶೆಲಾರ್ ಹೇಳಿದರು.

ನಿತ್ಯ ಚಿಂತನ

ಮನೋರಂಜನೆಗಾಗಿ ಆಟವಾಟಲು ಅದೆಷ್ಟೋ ಆಟಗಳಿವೆ . ಆದರೆ ಕೆಲವರು ಅದೆಲ್ಲವನ್ನು ಬಿಟ್ಟು ನಂಬಿಕೆ , ವಿಶ್ವಾಸ, ಸಂಬಂಧಗಳ ಜೊತೆಗೆ ಆಟವಾಡಿ ಮತ್ತೊಬ್ಬರ ಜೀವನ ಹಾಳು ಮಾಡುವ ಮೂಲಕ ಸಂತೋಷಪಡುತ್ತಾರೆ . ಇಂತಹ ಕೆಲಸವನ್ನು ಯಾವನೇ ಮನುಷ್ಯ ಎಂದಿಗೂ ಮಾಡಬಾರದು . ಒಂದು ಹೂ ಯಾವ ರೀತಿ ಮತ್ತೊಂದು ಹೂವಿನ ಜೊತೆಗೆ ಯಾವುದೇ ಸ್ಪರ್ಧೆಗೆ ಇಳಿಯದೆ ಅದು ತನ್ನ ಪಾಡಿಗೆ ತಾನು ಅರಳಿ ಜಗತ್ತಿಗೆ ಸುಗಂಧವನ್ನು ನೀಡಿ ಮರೆಯಾಗುತ್ತದೋ ನಾವು ಕೂಡಾ ಈ ಹೂವಿನ ತರದ ಬದುಕನ್ನು ತಮ್ಮದಾಗಿರಿಸಿ ಕೊಳ್ಳಲು ಪ್ರಯತ್ನಿಸ ಬೇಕು . ಮತ್ತೊಬ್ಬರ ಬದುಕನ್ನಾಗಲಿ , ನಮ್ಮದಿ , ಸಂತೋಷವನ್ನು ಹಾಳಮಾಡಬಾರದು . ಜೀವನವನ್ನು ಅರ್ಥಪೂರ್ಣವಾಗಿ , ಸುಂದರವಾಗಿ ಕಳೆಯಲು ಪ್ರಯತ್ನಿಸ ಬೇಕು. ಯಾರ ಬಗ್ಗೆಯೂ ದ್ವೇಷವನ್ನು ಕಟ್ಟಿಕೊಳ್ಳಬಾರದು . ಸರಳತೆ ಮತ್ತು ಸಮಾಧಾನವೇ ಬದುಕಿನ ಅತಿದೊಡ್ಡ ಸಂಪತ್ತು ಎಂದು ತಿಳಿದು ಕೊಳ್ಳಬೇಕು . ಯಾವುದೇ ಕೆಲಸವಾಗಿರಲಿ ಅದನ್ನು ಮಾಡಬಲ್ಲೆ ಎನ್ನುವ ಆತ್ಮವಿಶ್ವಾಸವಿರಬೇಕೇ ಹೊರತು ಎಲ್ಲವೂ ನನ್ನಿಂದಲೇ , ನಾನು ಇಲ್ಲದೆ ಏನೂ ಇಲ್ಲ ಎನ್ನುವ ಅಹಂಕಾರ ಮನುಷ್ಯರಲ್ಲಿರ ಬಾರದು . ಆದ್ದರಿಂದ ಬದುಕಿನಲ್ಲಿ ಮತ್ತೊಬ್ಬರ ಸಾಧನೆಯನ್ನು ಕಂಡು ಅಸೂಯೆ ಪಡುವ ಬದಲು ಬೇರೆಯವರ ಸಾಧನೆಯನ್ನು ನಮ್ಮ ಬದುಕಿಗೆ ಪ್ರೇರಣೆಯಾಗಿ , ಸ್ಫೂರ್ತಿಯಾಗಿರಿಸಿ ಕೊಳ್ಳುವ ಗುಣವನ್ನು ಮೈಗೂಡಿಸಿ ಕೊಂಡು ಮುನ್ನಡೆಯಲು ಪ್ರಯತ್ನಿಸುವ ಅಗತ್ಯವಿದೆ. ಮನುಷ್ಯನ ನಿಜವಾದ ಸಂಪತ್ತು ಆತನಲ್ಲಿರುವ ಹಣ , ಬಂಗಾರ ಅಥವಾ ಕಾರು ,ಬಂಗಲೆಯಲ್ಲಿರುವುದಿಲ್ಲ . ಬದಲಾಗಿ ಆತನ ನಗುತ್ತಿರುವ ಕುಟುಂಬ ಮತ್ತು ತನ್ನ ಸಂತೃಪ್ತ ಮನಸ್ಸಿನಲ್ಲಿ ಮನೆ ಮಾಡಿಕೊಂಡಿರುತ್ತದೆ ಎಂಬುವುದನ್ನು ತಿಳಿದು ಬಾಳುವ ಅಗತ್ಯವಿದೆ. ವಾದ ಪ್ರತಿವಾದದಿಂದ ಯಾವ ಪ್ರಶ್ನೆಗೂ ಉತ್ತರವೂ ಸಿಗುವುದಿಲ್ಲ . ಬದಲಾಗಿ ಒಂದು ಮೌನ ಸಾವಿರ ಪ್ರಶ್ನೆಗಳಿಗೆ ಉತ್ತರ ನೀಡುತ್ತದೆ ಎಂಬ ಸತ್ಯವನ್ನು ಅರಗಿಸಿ ಕೊಳ್ಳುವ ಅಗತ್ಯವಿದೆ.

ಶ್ರೀಧರ್ ಉಚ್ಚಿಲ್ (ಮೊ.ನಂಬ್ರ : 9930370553)

ಕವನ: ತೀರ್ಥ ರೂಪ



ಹೊಳೆಯಾಗಿ ಹರಿದ ಭಾವ ರೂಪ
ಮುದ್ದಿನಮ್ಮನ ಕಂಬನಿ ಧಾರೆಯ ಸಮಕ್ಷಮ
ಕಿರು ಕಾಲುವೆಯಾಗಿ ಹರಿದ ಬೆವರು ಹನಿಗಳ
ಮರೆ ಮಾಚಿಸಿದ ಅಂತರಾಳ ಸುಂದರ

ನೋವು-ಸಂಕಷ್ಟಗಳಿಗೆ ಮುಸು ಮುಸು
ಅಳುವ ಅಮ್ಮನ ಬಾಡಿದ ಮೊಗದಾವರೆಯೆದುರು
ಸದ್ದಿಲ್ಲದೆ ಅಗಾಧ ನೋವು ನುಂಗುವ
ಈತ ಅಡಿ ತಪ್ಪದ ಸಮಚಿತ್ತದ ಸರದಾರ !

ಮಾತೆಯ ಮಡಿಲಿಂದಿಳಿದು ಹಸುಳೆ
ತೊದಲು ನುಡಿಯಾಡುವ ತುಸು ಮೊದಲು
ವಿಶಾಲ ಹೆಗಲಿಗೇರಿಸಿ ಸುತ್ತಾಡಿ ನಲಿಸಿ
ಲೋಕ ತೋರಿದ ಪ್ರಿಯ ಮಾರ್ಗದರ್ಶಕ ಮಾಸ್ತರ !

ಮಮತೆಯ ಸಾಕಾರ ಮೂರ್ತಿಯಾಗಿ ಹೆತ್ತಮ್ಮ
ಮಕ್ಕಳ ಪೊರೆದು ಸಲಹಿದ ಮರುಕ್ಷಣ,
ಭದ್ರತೆಯ ಸೈನಿಕನಾಗಿ ಸದ್ದಿಲ್ಲದೆ ಸರಿದಾರಿಗೆಳೆದು
ಭವಿಷ್ಯ ಬೆಳಗಿಸಿದ ತೀರ್ಥರೂಪ ಸುಬೇದಾರ

ಮಡದಿಯ ಮನಸೇಚ್ಛೆಗೆ ರೇಷ್ಮೆಯ ಪಟ್ಟೆ ಸೀರೆ
ಮಗ-ಮಗಳ ಸರಿ ಷೋಕಿಗೆ ಹೊಸ ಗರಿ ಬಟ್ಟೆ
ನಡುವೆ ತಾನೇನುಟ್ಟೆನೆಂದರಿಯದೆ
ತನ್ನವರ ಸಂಭ್ರಮದಿ ಖುಷಿ ಕಂಡ ನಿರಾಡಂಬರ

ಬೇಡಿದ್ದು ಬೇಡದ್ದು ಸರ್ವಸ್ವವ ತಾ ನೀಡಿ
ಸಂಸ್ಕಾರ ಸಂಸ್ಕೃತಿಯ ತಿದ್ದಿ ತೀಡಿ
ಕಾಮಧೇನು-ಕಲ್ಪವೃಕ್ಷದ ಸರಿಸಮದ ಸಾಟಿಯಲಿ
ಶ್ರೀಗಂಧದ ಕೊರಡಾಗಿ ಕರಗಿದ
ಪ್ರತಿಫಲಾಪೇಕ್ಷೆಯನರಿಯದ ಧೀರ

ಸ್ವಾಭಿಮಾನಿ ಸಹೃದಯ ಕೈ ಚಾಚುವುದಿಲ್ಲ;
ಕಾಯ ಕರಗಿ ತ್ವಚೆಯ ಸುಕ್ಕುಗಳಲ್ಲಿ
ನೆರಿಗೆಗಳು ನೋವ ಬಿಂಬಿಸುವ ಮುನ್ನ
ಕೊಂಚವಾದರೂ ಹಗುರವಾಗಿಸಿಕೊಳ್ಳಿ
ಋಣಭಾರ!

ಬಿನ್ನಹಕೆ ಮುನ್ನವರಿತು ಸೇವೆಗೆಳಸಿ ಅರಿತು ಪೂಜಿಸಿ...
ಸರ್ವ ಶಕ್ತ ವಿಷಕಂಠನಿವ ಶಿವ-ಶಂಕರ !

ರಮಣ್ ಶೆಟ್ಟಿ ರೆಂಜಾಳ.

ಸುಡೊಕು 1830

			2				3	
		9		8		2	6	4
1	5	2		3	6		9	
4		3						
	8			2			1	
						8		6
	4		7	5		6	2	3
3	7	5		4		1		
	2				8			


MANGAL SENACHA, BANGALORE

1ರಿಂದ 9 ರ ನರೆಗಿನ ಸಂಖ್ಯೆಗಳನ್ನು ಪ್ರತಿ 3-3 ಬಾಕ್ಸ್‌ಗೂ ತುಂಬಿ. ಪ್ರತಿ ಉದ್ದ ಹಾಗೂ ಸಾಲಿನಲ್ಲೂ 1-9 ಅಂಕಿಗಳಿರಬೇಕು.

ಸುಡೊಕು 1829

4	6	2	3	5	8	9	1	7
8	1	7	9	2	6	3	5	4
3	5	9	1	7	4	8	2	6
6	4	1	5	3	7	2	8	9
2	7	5	8	4	9	6	3	1
9	3	8	2	6	1	4	7	5
1	2	3	6	9	5	7	4	8
5	9	4	7	8	2	1	6	3
7	8	6	4	1	3	5	9	2

ಪದಬಂದ - 1912




ಎಡದಿಂದ ಬಲಕ್ಕೆ

1.ತುಂಬಾ ಹಳೆಯದಾದು -4
3.ಮದುಮಗಳಿಗೆ ಹಾಕುವ ಗೋರಂಟಿ-4
5.ಮಧ್ಯ ಸೇವನೆಯಂತೆಯೇ ಇದು?-4
6.ನವ ಅನ್ವೇಷಣೆಯ ಕವಿ -4
8.ಹೊಸತು ಕಂಡಾಗ ನೆನಪಾದ ಸಂಖ್ಯೆ-2
10.ಮಹಾ ಗುಟ್ಟು -3
12.ಸಂಪೂರ್ಣವಾದುದು-3
14.ಅವರ ಬಳಿ ಇರುವ ಆಧಾರ ಗ್ರಂಥ -3
17.ಕಷ್ಟವಿಲ್ಲದ್ದು -3
19.ತಾ ಎನ್ನುತ್ತಾ ನಕ್ಷತ್ರ? -2
21.ಕನ್ನಡ ವ್ಯಾಕರಣವೇ? -4
23.ಕ್ಷಮೆ ಉದಾರವಾಗಿದೆ -4
24.ಕಡ್ಡಾಯವಾಗಿ ಹಾಕಿದ ಹತೋಟಿ -4
25.ಕನಕನಿಗೆ ಬಂದ ದಯೆ-4

ಮೇಲಿನಿಂದ ಕೆಳಕ್ಕೆ

1.ಸಮಾಜದಲ್ಲಿ ಕಂಡ ಶಾಂತಿ, ನೆಮ್ಮದಿ-4
2.ನಮ್ಮ ವಂದನೆ -4
3.ಮನದೊಳಗೆ ಜತನ -3
4.ಗಿರಿಜೆ ಇಟ್ಟ ಅಡ-3
7.ಹೋಲಿಸಿದಾಗ ವಿಭಿನ್ನತೆ -3
9.ಆ ವ್ಯಾಪಾರಿಯ ವರ್ತನೆ ವಿಚಿತ್ರ -3
11.ಅವರು ಹೌದಲ್ಲವೇ ಎಂದಾಗ ನೆನಪಾದ ಸಿಹಿತಿಂಡಿ-2
13.ಅಕ್ಕರೆಯೇ ಈಕೆಯ ಮಮಕಾರ -3
15.ರಮ್ಯ ಮಹಿಳೆ -3
16.ಜಲಜಳ ಮನೆಯಲ್ಲಿ ನೀರಿನ ಸಮಸ್ಯೆ-2
18.ಭಯಂಕರವಾದುದು -4
20.ರಾಜ್ಯದ ಹೊಣೆಗಾರಿಕೆ -4
21.ಕೆಲಸ ಮಾಡುವವನು-3
22.ಕ್ಷಣಮಾತ್ರವೂ ತಡ ಇಲ್ಲ -3

ಉತ್ತರ - 1911



ಮೇಜರ್‌ಕ್ರಿಕೆಟ್ ಲೀಗ್‌ನಲ್ಲಿ ಮಿಂಚಿನ ಶತಕ; ಕ್ರಿಸ್ ಗೇಲ್ ದಾಖಲೆ ಮುರಿದ ಕೀರನ್ ಪೊಲಾರ್ಡ್

ಹೊಸದಿಲ್ಲಿ , ಜೂ.21 - ಯೂನಿವರ್ಸಲ್ ಬಾಸ್ ಎಂದೇ ಹೆಸರಾಗಿರುವ ಕ್ರಿಸ್ ಗೇಲ್ ಅವರೇ ಈವರೆಗೂ ಟಿ20 ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಕಲೆಹಾಕಿದ ಗೌರವಕ್ಕೆ ಪಾತ್ರರಾಗಿದ್ದರು. ಇದೀಗ ವೆಸ್ಟ್ ಇಂಡೀಸ್‌ನ ಮತ್ತೊಬ್ಬ ಸ್ಫೋಟಕ ಆಲ್‌ರೌಂಡರ್ ಕೀರನ್ ಪೊಲಾರ್ಡ್ ಅವರು ಈ ದಾಖಲೆಯನ್ನು ತಮ್ಮ ಹೆಸರಿಗೆ ಬರೆಸಿಕೊಂಡಿದ್ದಾರೆ. ಮೇಜರ್‌ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಕೀರನ್ ಪೊಲಾರ್ಡ್ ಕೇವಲ 56 ಎಸೆತಗಳಲ್ಲಿ ಭರ್ಜರಿ ಶತಕ ಸಿಡಿಸುವ ಮೂಲಕ ಟಿ20 ಕ್ರಿಕೆಟ್‌ನಲ್ಲಿ ಹೊಸ ಮೈಲಿಗಲ್ಲು ತಲುಪಿದ್ದಾರೆ.



ವಾಷಿಂಗ್ಟನ್ ಫ್ರೀಡಂ ವಿರುದ್ಧದ ಪಂದ್ಯದಲ್ಲಿ ಎಂಐ ನ್ಯೂಯಾರ್ಕ್ ತಂಡದ ಪರ ಆಡಿದ ಪೊಲಾರ್ಡ್, 246 ರನ್‌ಗಳ ಬೃಹತ್ ಗುರಿಯನ್ನು ಬೆನ್ನಟ್ಟುವಾಗ ಫ್ರೀಡಂ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಅವರ ಈ ಸ್ಫೋಟಕ ಇನ್ನಿಂಗ್ಸ್‌ನಲ್ಲಿ 11 ಮನಮೋಹಕ ಬೌಂಡರಿ ಹಾಗೂ 4 ಭರ್ಜರಿ ಸಿಕ್ಸರ್‌ಗಳಿದ್ದವು. ಪೊಲಾರ್ಡ್ ಅವರ ಈ ಶತಕದ ಹೋರಾಟ ತಂಡವನ್ನು ಗೆಲುವಿನ ದಡ ಸೇರಿಸಲು ಸಾಧ್ಯವಾಗದಿದ್ದರೂ, ಅವರು ಟಿ20 ಕ್ರಿಕೆಟ್‌ನ ಅಧಿಪತಿಯಾಗಿ ಹೊರಹೊಮ್ಮಲು ಸಹಾಯ ಮಾಡಿತು. ಇದಕ್ಕೂ ಮುನ್ನ ಮಿಚೆಲ್ ಓವನ್ ಬಾರಿಸಿದ 155 ರನ್‌ಗಳ ನೆರವಿನಿಂದ ವಾಷಿಂಗ್ಟನ್ ಫ್ರೀಡಂ ತಂಡ ಎಂಐ ನ್ಯೂಯಾರ್ಕ್ ಮುಂದೆ ಬೃಹತ್ ಗುರಿ ಇಟ್ಟಿತ್ತು.

ದೀರ್ಘಕಾಲ ಗೇಲ್ ಹೆಸರಿನಲ್ಲಿದ್ದ ದಾಖಲೆ: ಈ ಶತಕದ ಮೂಲಕ ಪೊಲಾರ್ಡ್ ಅವರು ಕ್ರಿಸ್ ಗೇಲ್ ಅವರನ್ನು ಹಿಂದಿಕ್ಕಿ ಟಿ20 ಕ್ರಿಕೆಟ್ ಇತಿಹಾಸದಲ್ಲೇ ಅತ್ಯಿಹೆಚ್ಚು ರನ್ ಗಳಿಸಿದ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಗೇಲ್ 463 ಪಂದ್ಯಗಳಿಂದ 14,562 ರನ್ ಗಳಿಸುವ ಮೂಲಕ ದೀರ್ಘಕಾಲ ಈ ದಾಖಲೆಯನ್ನು ತಮ್ಮ ಬಳಿ ಇರಿಸಿಕೊಂಡಿದ್ದರು. ಅದರಲ್ಲಿ 88 ಅರ್ಧಶತಕ ಮತ್ತು 22 ಶತಕಗಳಿದ್ದವು.

ಈ ಪಂದ್ಯಕ್ಕೂ ಮುನ್ನ ಗೇಲ್ ದಾಖಲೆ ಮುರಿಯಲು ಪೊಲಾರ್ಡ್‌ಗೆ 81 ರನ್‌ಗಳ ಅಗತ್ಯವಿತ್ತು, ಅವರು ಕೇವಲ 50 ಕ್ಕೂ ಹೆಚ್ಚು ಎಸೆತಗಳಲ್ಲಿ ಈ ಸಾಧನೆ ಮಾಡಿದರು. ಪೊಲಾರ್ಡ್ ಈಗ 735 ಇನ್ನಿಂಗ್ಸ್‌ಗಳಿಂದ 14,582 ರನ್ ಕಲೆಹಾಕಿದ್ದಾರೆ. ಗೇಲ್ ಅವರಿಗೆ ಹೋಲಿಸಿದರೆ ಪೊಲಾರ್ಡ್ ಆಡಿರುವ ಇನ್ನಿಂಗ್ಸ್‌ಗಳ ಸಂಖ್ಯೆ ಹೆಚ್ಚಿದ್ದರೂ, ಅವರು ಈ ಮಾದರಿಯಲ್ಲಿ 333 ವಿಕೆಟ್‌ಗಳನ್ನೂ ಪಡೆದಿದ್ದಾರೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಹಾಗಾಗಿ ಒಬ್ಬ ಆಲ್‌ರೌಂಡರ್‌ಆಗಿ ಈ ಸಾಧನೆ ಮಾಡಿರುವುದರಿಂದ ಅವರಿಗೆ ಎಲ್ಲೆಡೆಯಿಂದಲೂ ಪ್ರಶಂಸೆಯ ಸುರಿಮಳೆ ವ್ಯಕ್ತವಾಗಿದೆ.

ಗೇಲ್ ನಮ್ಮ ರೋಲ್ ಮಾಡೆಲ್: ಪೊಲಾರ್ಡ್ ಕ್ರಿಸ್ ಗೇಲ್ ಅವರ ದಾಖಲೆಯನ್ನು ಮುರಿದ ನಂತರ ಮಾತನಾಡಿದ ಕೀರನ್ ಪೊಲಾರ್ಡ್ ತಮಗೆ ಬೆಂಬಲ ನೀಡಿದ ಕುಟುಂಬ ಮತ್ತು ಸ್ನೇಹಿತರಿಗೆ ಧನ್ಯವಾದ ಅರ್ಪಿಸಿದರು. ಗೇಲ್ ತಮ್ಮ ಪಾಲಿನ ರೋಲ್ ಮಾಡೆಲ್ ಆಗಿದ್ದು, ಅವರ ದಾಖಲೆಯನ್ನು ಮುರಿದಿರುವುದು ಅದ್ಭುತ ಅನುಭವ ಎಂದಿದ್ದಾರೆ. ನನಗೆ ತುಂಬಾ ಸಂತೋಷವಾಗುತ್ತಿದೆ. ನನ್ನನ್ನು ಸದಾ ಬೆಂಬಲ ನೀಡಿದ ನನ್ನ ಸ್ನೇಹಿತರು, ಕುಟುಂಬಸ್ಥರು ಸೇರಿದಂತೆ ಪ್ರತಿಯೊಬ್ಬರಿಗೂ ಧನ್ಯವಾದಗಳು. ಕ್ರಿಸ್ ಗೇಲ್ ನಮ್ಮಂಥವರು ಯಾವಾಗಲೂ ಗೌರವದಿಂದ ನೋಡುವ ಮತ್ತು ಮಾದರಿಯಾಗಿ ಸ್ವೀಕರಿಸುವ ಆಟಗಾರ. ತಂಡದಲ್ಲಿ 6 ಅಥವಾ 7 ನೇ ಕ್ರಮಾಂಕದಲ್ಲಿ ಬಂದು ಬ್ಯಾಟ್ ಮಾಡುವುದು ತುಂಬಾ ಕಷ್ಟದ ಕೆಲಸ. ಇಷ್ಟು ದಿನಗಳ ಕಾಲ ಪಂದ್ಯಗಳನ್ನು ಫಿನಿಶರ್‌ಆಗಿ ಮುಗಿಸುವುದೇ ನನ್ನ ಜವಾಬ್ದಾರಿಯಾಗಿತ್ತು ಎಂದು ಪಂದ್ಯದ ನಂತರ ಪೊಲಾರ್ಡ್ ತಿಳಿಸಿದ್ದಾರೆ.

ಫಿಫಾ ವಿಶ್ವಕಪ್ : 12 ವರ್ಷಗಳ ಬಳಿಕ ನಾಕೌಟ್ ಪ್ರವೇಶಿಸಿದ ಜರ್ಮನಿ

ಟೊರಾಂಟೋ, ಜೂ.21 - ಫಿಫಾ ವಿಶ್ವಕಪ್ 2026ರ ಅತ್ಯಂತ ರೋಚಕ ಗ್ರೂಪ್ 'ಇ' ಪಂದ್ಯದಲ್ಲಿ ಮಾಜಿ ಚಾಂಪಿಯನ್ ಜರ್ಮನಿ ತಂಡವು ಆಫ್ರಿಕಾದ ಬಲಿಷ್ಠ ಐವರಿ ಕೋಸ್ಟ್ ತಂಡವನ್ನು ಮಣಿಸಿ ನಾಕೌಟ್ ಹಂತಕ್ಕೆ ಲಗ್ಗೆ ಇಟ್ಟಿದೆ. ಕೆನಡಾದ ಟೊರಾಂಟೋದಲ್ಲಿ ಭಾನುವಾರ ನಡೆದ ಈ ಹೈ-ವೋಲ್ಟೇಜ್ ಪಂದ್ಯದಲ್ಲಿ ಜರ್ಮನಿ 2-1 ಗೋಲುಗಳ ರೋಚಕ ಜಯ ದಾಖಲಿಸಿದ.

ಮೊದಲಾರ್ಧದಲ್ಲಿ ಒಂದು ಗೋಲಿನ ಹಿನ್ನೆಡೆ ಅನುಭವಿಸಿದರೂ, ದ್ವಿತೀಯಾರ್ಧದಲ್ಲಿ ಪಂದ್ಯದ ಚಿತ್ರಣವನ್ನೇ ಬದಲಿಸಿದ ಜರ್ಮನ್ ಪಡೆ ರೌಂಡ್ ಆಫ್ 32 ಹಂತಕ್ಕೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ಜರ್ಮನಿ ಫುಟ್‌ಬಾಲ್ ಕ್ರೀಡೆಯಲ್ಲಿ ಈ ವಿಜಯವು ಒಂದು ಹೊಸ ಯುಗದ ಆರಂಭ ಎಂದೇ ಬಿಂಬಿತವಾಗುತ್ತಿದೆ. 12 ವರ್ಷಗಳ ನಂತರ ಜರ್ಮನಿ ವಿಶ್ವಕಪ್ ಟೂರ್ನಿಯಲ್ಲಿ ನಾಕೌಟ್ ಹಂತ ಪ್ರವೇಶಿಸಿದೆ. ಜರ್ಮನಿ 2014ರಲ್ಲಿ ವಿಶ್ವ ಚಾಂಪಿಯನ್ ಪಟ್ಟ ಅಲಂಕರಿಸಿದ ಬಳಿಕ, ತಂಡಕ್ಕೆ ವಿಶ್ವಕಪ್ ಅಖಾಡದಲ್ಲಿ ಗ್ರಹಣ ಹಿಡಿದಂತಾಗಿತ್ತು.



ಪಂದ್ಯದ ಆರಂಭದಿಂದಲೂ ಉಭಯ ತಂಡಗಳು ಪರಸ್ಪರ ರಕ್ಷಣಾ ಕೋಟೆಯನ್ನು ಭೇದಿಸಲು ಪ್ರಯತ್ನ ನಡೆಸಿದರು. ಆದರೆ ಮೊದಲ ಗೋಲಿನ ನಗೆ ಬೀರಿದ್ದು, ಆಫ್ರಿಕನ್ ದೈತ್ಯ ಐವರಿ ಕೋಸ್ಟ್. ಪಂದ್ಯದ 30ನೇ ನಿಮಿಷದಲ್ಲಿ ಯಾನ್ ಡಿಯೋಮಂಡೆ ನೀಡಿದ ಅತ್ಯುತ್ತಮ ಪಾಸ್ ಅನ್ನು ಅತ್ಯಂತ ಜಾಣ್ಮೆಯಿಂದ ಜರ್ಮನಿಯ ಗೋಲುಪೆಟ್ಟಿಗೆಗೆ ರವಾನಿಸುವಲ್ಲಿ ಯಶಸ್ವಿಯಾದರು. ಇದರೊಂದಿಗೆ ಮೊದಲಾರ್ಧದ ಮುಕ್ತಾಯಕ್ಕೆ ಐವರಿ ಕೋಸ್ಟ್ ತಂಡವು 1-0 ರ ಮುನ್ನಡೆ ಕಾಯ್ದುಕೊಂಡು ಜರ್ಮನಿಗೆ ತೀವ್ರ ಆತಂಕ ಉಂಟುಮಾಡಿತು.

ದ್ವಿತೀಯಾರ್ಧದಲ್ಲಿ ಜರ್ಮನಿ ತರಬೇತುದಾರ ಭರ್ಜರಿ ಪ್ಲಾನಿಂಗ್ ಮಾಡಿದರು. ಜರ್ಮನಿಯ 59ನೇ ನಿಮಿಷದಲ್ಲಿ ಐವರಿ ಕೋಸ್ಟ್ ತಂಡದ ರಕ್ಷಣಾ ವಿಭಾಗಕ್ಕೆ ಭಾರೀ ಪೆಟ್ಟು ನೀಡಲು ಪ್ಲಾನ್ ಮಾಡಿಕೊಂಡಿತು. ಡೆನಿಸ್ ಉಂದಾವ್ ಮತ್ತು ನಾದಿಮ್ ಅಮೀರಿ ಅವರನ್ನು ಒಟ್ಟಿಗೆ ಮೈದಾನಕ್ಕಿಳಿಸಿದರು. ಈ ನಿರ್ಧಾರವು ಜರ್ಮನಿಯ ಆಟದ ವೇಗ ಹಾಗೂ ಆಕ್ರಮಣ ಶಕ್ತಿಯನ್ನು ದುಪ್ಪಟ್ಟು ಮಾಡಿತು. ಕೇವಲ ಎಂಟು ನಿಮಿಷಗಳ ಅಂತರದಲ್ಲಿ ತಂಡಕ್ಕೆ ಇದರಿಂದ ಪ್ರತಿಫಲ ದೊರೆಯಿತು.

ಪಂದ್ಯದ 67ನೇ ನಿಮಿಷದಲ್ಲಿ ನಾದಿಮ್ ಅಮೀರಿ ರಕ್ಷಣಾ ವಿಭಾಗದ ಆಟಗಾರರನ್ನು ವಂಚಿಸಿ ಕಳುಹಿಸಿದ ಅದ್ಭುತ ಕ್ರಾಸ್ ಅನ್ನು ಡೆನಿಸ್ ಉಂದಾವ್ ಗೋಲು ಬಾರಿಸಿದರು. ಇದರಿಂದಾಗಿ ಜರ್ಮನಿ 1-1 ರಿಂದ ಸಮಬಲ ಸಾಧಿಸುತ್ತಿದ್ದಂತೆ ಮೈದಾನದಲ್ಲಿ ನೆರೆದಿದ್ದ ಅಭಿಮಾನಿಗಳಲ್ಲಿ ಸಂಭ್ರಮ ಮನೆಮಾಡಿತು.

ಹೆಚ್ಚುವರಿ ಸಮಯದಲ್ಲಿ ಜರ್ಮನಿ ಕ್ರೀಡಾ ಜಗತ್ತು ಸಂಭ್ರಮಿಸುವಂತಹ ಗೆಲುವಿನ ಗೋಲು ಮೂಡಿಬಂತು. ಫೆಲಿಕ್ಸ್ ನ್ಮೇಚಾ ನೀಡಿದ ಪಾಸ್‌ನ ಸಂಪೂರ್ಣ ಲಾಭ ಪಡೆದ ಉಂದಾವ್, ತಮ್ಮ ಎಡಗಾಲಿನಿಂದ ಚೆಂಡನ್ನು ಗೋಲು ಪೆಟ್ಟಿಗೆಯ ಒಳಕ್ಕೆ ನೂಕಿದರು. ಪರಿಣಾಮ ಜರ್ಮನಿ ಇತಿಹಾಸ ನಿರ್ಮಿಸಿತು.

ಇಕ್ವೆಡಾರ್‌ತಂಡಕ್ಕೆ ಆಘಾತ

ಇ ಗುಂಪಿನ ಮತ್ತೊಂದು ಪಂದ್ಯದಲ್ಲಿ ಜಾಗತಿಕ ಫುಟ್‌ಬಾಲ್ ಅಚ್ಚರಿಯಿಂದ ನೋಡುವಂತಹ ಫಲಿತಾಂಶ ಬಂದಿತು. ಪುಟ್ಟ ಕೆರಿಬಿಯನ್ ದ್ವೀಪ ರಾಷ್ಟ್ರವಾದ ಕ್ಯುರಾಸ್ಸಾವೊ, ದಕ್ಷಿಣ ಅಮೆರಿಕದ ಪ್ರಬಲ ಶಕ್ತಿ ಇಕ್ವೆಡಾರ್‌ತಂಡದ ವಿರುದ್ಧ ಡ್ರಾ ಸಾಧಿಸುವಲ್ಲಿ ಸಫಲವಾಯಿತು. ಈ ಮೂಲಕ ಕ್ಯುರಾಸ್ಸಾವೊ ತನ್ನ ಮೊದಲ ಅಂಕ ಕಲೆ ಹಾಕಿತು. ತಂಡವನ್ನು ಗೋಲು ರಹಿತ (0-0) ಸಮಬಲಕ್ಕೆ ರೋಕುವಲ್ಲಿ ಯಶಸ್ವಿಯಾಗಿದೆ. ಆ ಮೂಲಕ ತನ್ನ ಚೊಚ್ಚಲ ವಿಶ್ವಕಪ್ ಟೂರ್ನಿಯಲ್ಲೇ ಇತಿಹಾಸದ ಮೊದಲ ಮಹತ್ವದ ಅಂಕವನ್ನು ಕ್ಯುರಾಸ್ಸಾವೊ ಕಬಳಿಸಿದೆ. ಜರ್ಮನಿ ವಿರುದ್ಧದ ಮೊದಲ ಪಂದ್ಯದಲ್ಲಿ 1-7 ರ ಹೀನಾಯ ಸೋಲಿನಿಂದ ತತ್ತರಿಸಿದ್ದ ಕ್ಯುರಾಸ್ಸಾವೊ ತಂಡಕ್ಕೆ ಈ ಪಂದ್ಯವು ಹೊಸ ಭರವಸೆಯನ್ನು ನೀಡಿದೆ. ಮೊದಲ ಪಂದ್ಯದಲ್ಲಿ ಐವರಿ ಕೋಸ್ಟ್ ವಿರುದ್ಧ ಸೋಲು ಕಂಡಿದ್ದ ಇಕ್ವೆಡಾರ್‌ಈ ಪಂದ್ಯದಲ್ಲಿ ಪೂರ್ಣ ಮೂರು ಅಂಕಗಳನ್ನು ಪಡೆಯುವ ಕನಸಿಗೆ ಪೆಟ್ಟು ಬಿದ್ದಿದೆ.

ವಿಪಕ್ಷಗಳು ಬಹಿಷ್ಕಾರ ಕೈಬಿಟ್ಟು ಚರ್ಚೆಗೆ ಬರಬೇಕು; ಉಪಮುಖ್ಯಮಂತ್ರಿ ಏಕನಾಥ್ ಶಿಂದೆ

ಮುಂಬಯಿ,ಜೂ.21 - ರೈತರು, ಮಹಿಳೆಯರು, ಕಾರ್ಮಿಕರು, ಯುವಕರು ಮತ್ತು ಸಾಮಾನ್ಯ ನಾಗರಿಕರ ಹಿತರಕ್ಷಣೆಗೆ ಸರ್ವೋಚ್ಚ ಆದ್ಯತೆ ನೀಡಿರುವ ಮಹಾಯುತಿ ಸರಕಾರವು ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಐತಿಹಾಸಿಕ ನಿರ್ಧಾರಗಳನ್ನು ತೆಗೆದುಕೊಂಡಿದೆ. ಸಾಲ ಮನ್ನಾ, ರೈತರ ನೆರವು, ಲಾಡ್ಕಿ ಬಹಿನ್ ಯೋಜನೆ, ಕೈಗಾರಿಕಾ ಹೂಡಿಕೆ, ಮೆಟ್ರೋ, ವಿಮಾನ ನಿಲ್ದಾಣ, ಹೆದ್ದಾರಿಗಳು, ಬಂದರುಗಳು ಮತ್ತು ವಸತಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ರಾಜ್ಯವು ಭಾರೀ ಪ್ರಗತಿ ಸಾಧಿಸಿದೆ. ಆದ್ದರಿಂದ ವಿರೋಧ ಪಕ್ಷಗಳು ಬಹಿಷ್ಕಾರದ ರಾಜಕಾರಣವನ್ನು ಕೈಬಿಟ್ಟು ಸದನಕ್ಕೆ ಬಂದು ರಚನಾತ್ಮಕ ಚರ್ಚೆ ನಡೆಸಬೇಕು ಎಂದು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಅವರು ಕರೆ ನೀಡಿದರು.



ರಾಜ್ಯ ವಿಧಾನಮಂಡಲದ ಮುಂಗಾರು ಅಧಿವೇಶನದ ಮುನ್ನಾದಿನದಂದು ಸಹ್ಯಾದ್ರಿ ಅತಿಥಿಗೃಹದಲ್ಲಿ ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹಾಗೂ ಉಪಮುಖ್ಯಮಂತ್ರಿ ಸುನೇತ್ರಾ ಪವಾರ್ ಅವರ ಉಪಸ್ಥಿತಿಯಲ್ಲಿ ಅವರು ಮಾತನಾಡುತ್ತಿದ್ದರು.

ಅಧಿವೇಶನವು ರಾಜ್ಯದ ಜನರ ಸಮಸ್ಯೆಗಳನ್ನು ಚರ್ಚಿಸಿ ಅವರಿಗೆ ನ್ಯಾಯ ಒದಗಿಸುವುದಕ್ಕಾಗಿ ಇರುತ್ತದೆ, ಆದರೆ ವಿರೋಧ ಪಕ್ಷಗಳು ಸದಾ ಬಹಿಷ್ಕಾರದ ಅಸ್ತ್ರವನ್ನೇ ಬಳಸುತ್ತಿವೆ ಎಂದು ಶಿಂದೆ ಟೀಕಿಸಿದರು.

ಜಾಗತಿಕ ಸಂಘರ್ಷಗಳ ನಡುವೆಯೂ ಕದನ ವಿರಾಮ ಏರ್ಪಡುತ್ತದೆ, ಆದರೆ ಇಲ್ಲಿ ವಿರೋಧ ಪಕ್ಷಗಳ ಬಹಿಷ್ಕಾರ ಮಾತ್ರ ಕೊನೆಗೊಳ್ಳುತ್ತಿಲ್ಲ ಎಂದು ಅವರು ಲೇವಡಿ ಮಾಡಿದರಲ್ಲದೆ, ಸರಕಾರವು ಪ್ರತಿಯೊಂದು ಪ್ರಶ್ನೆಗೂ ಉತ್ತರಿಸಲು ಸಂಪೂರ್ಣ ಸಿದ್ಧವಾಗಿದ್ದು, ವಿಪಕ್ಷಗಳು ಸದನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದರು.

ರೈತರ ಹಿತರಕ್ಷಣೆಗಾಗಿ ಮಹಾಯುತಿ ಸರಕಾರವು ರಾಜ್ಯದ ಇತಿಹಾಸದಲ್ಲೇ ಹಿಂದೆಂದೂ ಕಾಣದಷ್ಟು ದೊಡ್ಡ ಪ್ರಮಾಣದ ನೆರವನ್ನು ನೀಡಿದೆ. ಸುಮಾರು 36 ಸಾವಿರ ಕೋಟಿ ರೂ.ಗಳ ಸಾಲ ಮನ್ನಾ ಮತ್ತು ನಿಯಮಿತವಾಗಿ ಸಾಲ ಮರುಪಾವತಿ ಮಾಡುವ ರೈತರಿಗೆ ಪ್ರೋತ್ಸಾಹ ಧನ ನೀಡುವ ಕೆಲಸವನ್ನು ನಮ್ಮ ಸರಕಾರ ಮಾಡಿದೆ. ಸರಕಾರದ ಬೊಕ್ಕಸದ ಮೇಲೆ ಮೊದಲ ಹಕ್ಕು ರೈತರದ್ದಾಗಿದ್ದು, ನೈಸರ್ಗಿಕ ವಿಕೋಪಗಳಿಂದ ನಷ್ಟ ಅನುಭವಿಸಿದ ಅನ್ನದಾತರನ್ನು ಯಾವುದೇ ಪರಿಸ್ಥಿತಿಯಲ್ಲೂ ಕೈಬಿಡುವುದಿಲ್ಲ ಎಂದು ಅವರು ಭರವಸೆ ನೀಡಿದರು.

ಮಹಾರಾಷ್ಟ್ರದಲ್ಲಿ ವಸತಿ ರಹಿತರಿಗಾಗಿ ಬೃಹತ್ ವಸತಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದ್ದು, ಕೈಗಾರಿಕಾ ಹೂಡಿಕೆಗೆ ಉತ್ತೇಜನ ನೀಡುವ ಮೂಲಕ ಸಾವಿರಾರು ಉದ್ಯೋಗಗಳನ್ನು ಸೃಷ್ಟಿಸಲಾಗುತ್ತಿದೆ. ಕೃತಕ ಬುದ್ಧಿಮತ್ತೆ ಧೋರಣೆ, ಸುಧಾರಿತ ಮೆಟ್ರೋ ಯೋಜನೆಗಳು ಹಾಗೂ ಹೆಚ್ಚುತ್ತಿರುವ ರಸ್ತೆ ಜಾಲದೊಂದಿಗೆ ರಾಜ್ಯವು ದೇಶದಲ್ಲೇ ಮುಂಚೂಣಿಯಲ್ಲಿದೆ. ಇನ್ನು ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ತಂದಿರುವ ಲಾಡ್ಕಿ ಬಹಿನ್ ಯೋಜನೆಯು ನಿರಂತರವಾಗಿ ಮುಂದುವರಿಯಲಿದ್ದು, ಅರ್ಹ ಮಹಿಳೆಯರಿಗೆ ಇದರ ಲಾಭ ಸಿಗಲಿದೆ ಎಂದು ಶಿಂದೆ ಸ್ಪಷ್ಟಪಡಿಸಿದರು. ಕೇಂದ್ರ ಸರಕಾರದ ಸಂಪೂರ್ಣ ಬೆಂಬಲದೊಂದಿಗೆ ಮಹಾಯುತಿಯ ಡಬಲ್ ಇಂಜಿನ್ ಸರಕಾರವು ಮಹಾರಾಷ್ಟ್ರವನ್ನು ವೇಗವಾಗಿ ಮುನ್ನಡೆಸುತ್ತಿದ್ದು, ವಿರೋಧ ಪಕ್ಷಗಳು ಕೇವಲ ಪ್ರಚಾರಕ್ಕಾಗಿ ಪ್ರತಿಭಟನೆ ನಡೆಸದೆ ಸದನದ ಒಳಗೆ ಬಂದು ಜನಪರ ಕೆಲಸಗಳಿಗೆ ಕೈಜೋಡಿಸಬೇಕು ಎಂದು ಅವರು ಮನವಿ ಮಾಡಿದರು.

ವರ್ಷದ ಅತ್ಯುತ್ತಮ ಅಥ್ಲೀಟ್ ಪ್ರಶಸ್ತಿಗೆ ಭಾಜನರಾದ ನೀರಜ್ ಚೋಪ್ರಾ, ಪಾರುಲ್ ಚೌಧರಿ

ಹೊಸದಿಲ್ಲಿ , ಜೂ.21 - ಜೂನ್ 20, ಶನಿವಾರ ನಡೆದ ಉದ್ಘಾಟನಾ ಭಾರತೀಯ ಅಥ್ಲೆಟಿಕ್ಸ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನೀರಜ್ ಚೋಪ್ರಾ ಅವರನ್ನು 2025 ರ ಅತ್ಯುತ್ತಮ ಪುರುಷ ಕ್ರೀಡಾಪಟು, ಪಾರುಲ್ ಚೌಧರಿ ಅವರನ್ನು ವರ್ಷದ ಅತ್ಯುತ್ತಮ ಮಹಿಳಾ ಕ್ರೀಡಾಪಟು ಎಂದು ಹೆಸರಿಸಲಾಯಿತು.





ಭಾರತೀಯ ಅಥ್ಲೆಟಿಕ್ಸ್ ಫೆಡರೇಶನ್ ಪ್ರಾರಂಭಿಸಿದ ಈ ಪ್ರಶಸ್ತಿಗಳನ್ನು ಕ್ರೀಡಾಪಟುಗಳು, ತರಬೇತುದಾರರು, ತಾಂತ್ರಿಕ ಅಧಿಕಾರಿಗಳು, ಮಾರ್ಗದರ್ಶಕರು ಮತ್ತು ರಾಜ್ಯ ಸಂಘಗಳ ಕೊಡುಗೆಗಳನ್ನು ಗುರುತಿಸಲು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಅತ್ಯುತ್ತಮ ಮಹಿಳಾ ಕ್ರೀಡಾಪಟು, ಅತ್ಯುತ್ತಮ ತರಬೇತುದಾರ, ಅತ್ಯುತ್ತಮ ತಾಂತ್ರಿಕ ಅಧಿಕಾರಿ, ಅತ್ಯುತ್ತಮ ರಾಜ್ಯ ಸಂಘ ಮತ್ತು ಜೀವಮಾನ ಸಾಧನೆ ಪ್ರಶಸ್ತಿ ಸೇರಿದಂತೆ 10 ವಿಭಾಗಗಳನ್ನು ಒಳಗೊಂಡಿತ್ತು.

ಶುಕ್ರವಾರ ರಾತ್ರಿ ದೋಹಾ ಡೈಮಂಡ್ ಲೀಗ್‌ನಲ್ಲಿ ಸ್ಪರ್ಧೆಗೆ ಮರಳಿದ ಸ್ವಲ್ಪ ಸಮಯದ ನಂತರ ಈ ಗೌರವ ಬಂದಿತು. ಬೆನ್ನುನೋವಿನಿಂದ ಬಳಲುತ್ತಿದ್ದ ಕಾರಣ ಋತುವಿನ ಮೊದಲ ಈವೆಂಟ್‌ನಲ್ಲಿ ನೀರಜ್ ನಾಲ್ಕನೇ ಸ್ಥಾನ ಪಡೆದರು.

ವರದಿಗಳ ಪ್ರಕಾರ, ಸೆಪ್ಟೆಂಬರ್2025 ರಲ್ಲಿ ಟೋಕಿಯೊದಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಶಿಪ್‌ಗೆ ಮುಂಚಿತವಾಗಿ ಅವರ ತಯಾರಿಯ ಮೇಲೆ ಪರಿಣಾಮ ಬೀರಿದ ಗಾಯವನ್ನು ಅವರು ನಿರ್ವಹಿಸುತ್ತಿದ್ದರು. ಟರ್ಕಿಯಲ್ಲಿ ಪುನರ್ವಸತಿ ಅವಧಿಯ ನಂತರ, ನೀರಜ್ ಮೇ 25 ರಂದು ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ತರಬೇತಿಯನ್ನು ಪುನರಾರಂಭಿಸಿ ದೋಹಾದಲ್ಲಿ ಸ್ಪರ್ಧಾತ್ಮಕ ಚಟುವಟಿಕೆಗೆ ಮರಳಿದರು.

ದೋಹಾ ಹಿನ್ನಡೆಯ ಹೊರತಾಗಿಯೂ, ನೀರಜ್ ಮುಂಬರುವ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕಾಗಿ ಅಥ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾದ ಅರ್ಹತಾ ಮಾನದಂಡವಾದ 82.61 ಮೀಟರ್‌ಅನ್ನು ತಲುಪಿದ್ದಾರೆ. ದೋಹಾದಲ್ಲಿ ಎರಡನೇ ಎಸೆತದೊಂದಿಗೆ ತಮ್ಮ ಅರ್ಹತೆಯನ್ನು ದೃಢಪಡಿಸಿದರು.

ಪ್ರಶಸ್ತಿ ಸ್ವೀಕರಿಸಿದ ಬಳಿಕ ಮಾತನಾಡಿದ ನೀರಜ್, ಈ ಪ್ರಶಸ್ತಿ ನನ್ನ ಹೃದಯಕ್ಕೆ ತುಂಬಾ ಹತ್ತಿರವಾಗಿದೆ. ಹಳೆಯ ಮತ್ತು ಹೊಸ ತಲೆಮಾರಿನ ಕ್ರೀಡಾಪಟುಗಳು ಇಲ್ಲಿದ್ದಾರೆ. ಅವರ ಮುಂದೆ ಪ್ರಶಸ್ತಿಯನ್ನು ಸ್ವೀಕರಿಸಿದ್ದಕ್ಕೆ ನನಗೆ ತುಂಬಾ ಸಂತೋಷವಾಗಿದ್ದೆ ಎಂದು ಹೇಳಿದರು. 3000 ಮೀಟರ್‌ಸ್ಟೀಪಲ್‌ಚೇಸ್‌ನಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಪಾರುಲ್ ಚೌಧರಿ ಅವರನ್ನು ವರ್ಷದ ಅತ್ಯುತ್ತಮ ಮಹಿಳಾ ಕ್ರೀಡಾಪಟು ಎಂದು ಹೆಸರಿಸಲಾಯಿತು. ಭಾರತೀಯ ಒಲಿಂಪಿಕ್ ಅಸೋಸಿಯೇಷನ್ ಅಧ್ಯಕ್ಷೆ ಮತ್ತು ಮಾಜಿ ಓಟಗಾರ್ತಿ ಪಿ ಟಿ ಉಷಾ ಅವರು ಅಥ್ಲೆಟಿಕ್ಸ್‌ಗೆ ನೀಡಿದ ಕೊಡುಗೆಗಾಗಿ ಜೀವಮಾನ ಸಾಧನೆ ಪ್ರಶಸ್ತಿಯನ್ನು ಪಡೆದರು.

ಆಡಳಿತಾರೂಢ ಶಿವಸೇನೆಗೆ ಪಕ್ಷಾಂತರಗೊಂಡಿರುವುದು ನಿಜ: ಬಂಡಾಯ ಸಂಸದ ನಾಗೇಶ್ ಪಾಟೀಲ್ ಅಷ್ಟಿಕರ್

ಛತ್ರಪತಿ ಸಂಭಾಜಿನಗರ, ಜೂ.21 - ಜೂ.18 ರವರೆಗೆ ತಾನು ಮತ್ತು ಇತರ ಸಂಸದರು ಎಲ್ಲಿಯೂ ಹೋಗುವ ಬಗ್ಗೆ ನಿರ್ಧರಿಸಿರಲಿಲ್ಲ.ಆದರೆ ನಮ್ಮ ವಿರುದ್ಧ ಕೆಲವು ಹೇಳಿಕೆಗಳನ್ನು ನೀಡಿದ ಬಳಿಕ ನಮ್ಮ ಮನಸ್ಸನ್ನು ಬದಲಾಯಿಸಿದ್ದಾಗಿ ಶಿವಸೇನೆ (ಯುಬಿಟಿ)ಯ ಬಂಡಾಯ ಸಂಸದ ನಾಗೇಶ್ ಪಾಟೀಲ್ ಅಷ್ಟಿಕರ್ ಅವರು ಹೇಳಿದ್ದಾರೆ. ಪಕ್ಷದ ನಾಯಕ ಸಂಜಯ್ ರಾವುತ್ ಅವರನ್ನು ಉಲ್ಲೇಖಿಸಿ ಅವರು ಈ ಹೇಳಿಕೆ ನೀಡಿದ್ದಾರೆ.

'ಆಪರೇಷನ್ ಟೈಗರ್' ಬಗ್ಗೆ ವದಂತಿಗಳು ಹರಡಲುಆರಂಭಿಸಿದ ಬಳಿಕ ಮೊದಲ ಬಾರಿಗೆ ಮುಂದೆ ಬಂದ ಹಿಂಗೋಲಿ ಸಂಸದ ಅಷ್ಟಿಕರ್, ಉಪ ಮುಖ್ಯಮಂತ್ರಿ ಏಕನಾಥ್ ಶಿಂದೆ ನೇತೃತ್ವದ ಶಿವಸೇನೆಗೆ ಪಕ್ಷಾಂತರಗೊಂಡಿರುವುದಾಗಿ ದೃಢಪಡಿಸಿದರು.

ತಮ್ಮ ಸಾಮಾಜಿಕ ಮಾಧ್ಯಮ ಹ್ಯಾಂಡಲ್‌ನಲ್ಲಿ ಪೋಸ್ಟ್ ಮಾಡಿದ ವೀಡಿಯೊ ಕ್ಲಿಪ್‌ನಲ್ಲಿ ಅಷ್ಟಿಕರ್, ಅವರು ತಮ್ಮ ಸಿದ್ಧಾಂತದಲ್ಲಿ ರಾಜಿ ಮಾಡಿಕೊಂಡಿಲ್ಲ ಮತ್ತು ಒಂದು ಶಿವಸೇನೆಯಿಂದ ಇನ್ನೊಂದಕ್ಕೆ ಹೋಗಿದ್ದೇನೆ ಅಷ್ಟೇ ಎಂದು ಹೇಳಿದ್ದಾರೆ.

ಅಭಿವೃದ್ಧಿ ನಿಧಿಯ ಕೊರತೆ ಮತ್ತು ಪಕ್ಷದ ಕಾರ್ಯಕರ್ತರ ಕೆಲಸವನ್ನು ಪೂರ್ಣಗೊಳಿಸಲು ಅಸಮರ್ಥತೆ ಮುಂತಾದ ವಿರೋಧ ಪಕ್ಷದಲ್ಲಿರುವುದರ ಇತರ ಅನಾನುಕೂಲಗಳನ್ನು ಅವರು ಪಕ್ಷಾಂತರಕ್ಕೆ ಪ್ರಮುಖ ಕಾರಣಗಳಾಗಿ ಉಲ್ಲೇಖಿಸಿದ್ದಾರೆ.

'ನಾನು ಮತ್ತು (ಸೇನಾ-ಯುಬಿಟಿಯ) ಇತರ ಕೆಲವು ಸಂಸದರು ಜೂ.18 ರವರೆಗೆ ಯಾವುದೇ ನಿರ್ಧಾರ ತೆಗೆದುಕೊಂಡಿರಲಿಲ್ಲ. ನಾವು ಎಲ್ಲಿಗೂ ಹೋಗಿರಲಿಲ್ಲ. ಆದಾಗ್ಯೂ, ಗುರುವಾರದಿಂದ ನಮ್ಮ ವಿರುದ್ಧ ಕೆಲವು ಟೀಕೆಗಳನ್ನು ಮಾಡಲಾಗಿದ್ದು, ಅದು ಇಲ್ಲಿ (ಸೇನಾ-ಯುಬಿಟಿ) ಇರುವುದರಲ್ಲಿ ಯಾವುದೇ ಅರ್ಥವಿಲ್ಲ ಎಂದು ನಾವು ನಂಬುವಂತೆ ಮಾಡಿದೆ' ಎಂದು ಅವರು ಹೇಳಿದರು.

ಸೇನಾ (ಯುಬಿಟಿ) ಅಧ್ಯಕ್ಷ ಉದ್ಧವ್ ಠಾಕ್ರೆ ಮತ್ತು ಪಕ್ಷದ ನಾಯಕ ಸಂಜಯ್ ರಾವುತ್, ಪತ್ರಿಕಾಗೋಷ್ಠಿಯಲ್ಲಿ ಭಿನ್ನಮತೀಯ ಸಂಸದರ ವಿರುದ್ಧ ಅವಾಚ್ಯ ಶಬ್ದಗಳನ್ನು ಬಳಸಿದ್ದಕ್ಕೆ ನಾವು ಅಸಮಾಧಾನ ಹೊಂದಿಲ್ಲ ಎಂದು ಅಷ್ಟಿಕರ್ ಸ್ಪಷ್ಟಪಡಿಸಿದರು.

ನಾವು ಅಧಿಕಾರದ ಬದಿಯಲ್ಲಿಲ್ಲದ ಕಾರಣ ಪಕ್ಷದ ಕಾರ್ಯಕರ್ತರ ಕೆಲಸ ಮುಗಿಯುತ್ತಿಲ್ಲ. ಜನರು ನಮ್ಮನ್ನು ಬಹಳಷ್ಟು ನಿರೀಕ್ಷೆಯೊಂದಿಗೆ ಆಯ್ಕೆ ಮಾಡಿದ್ದಾರೆ ಮತ್ತು ಅವರ ಕೆಲಸವನ್ನು ಪೂರ್ಣಗೊಳಿಸುವುದು ನನ್ನ ಕೆಲಸ. ಆದರೆ ನನಗೆ ಯಾವುದೇ ಅಭಿವೃದ್ಧಿ ನಿಧಿಗಳು ಸಿಗುತ್ತಿರಲಿಲ್ಲ. 5 ಕೋಟಿ ರೂ. ಸಂಸದರ ನಿಧಿ ತುಂಬಾ ಸೀಮಿತವಾಗಿದೆ. ಈ ಅಂಶಗಳನ್ನು ಪರಿಗಣಿಸಿ, ನಾನು ಈ ನಿರ್ಧಾರವನ್ನು ತೆಗೆದುಕೊಂಡಿದ್ದೇನೆ ಎಂದು ಅಷ್ಟಿಕರ್ ಹೇಳಿಕೊಂಡರು.

ಕಳೆದ ಎರಡು ವರ್ಷಗಳಲ್ಲಿ ತಮ್ಮ ಅತ್ಯುತ್ತಮ ಪ್ರಯತ್ನಗಳ ಹೊರತಾಗಿಯೂ, ತಮ್ಮ ಲೋಕಸಭಾ ಕ್ಷೇತ್ರಕ್ಕೆ ಹಣವನ್ನು ಪಡೆಯಲು ವಿಫಲರಾಗಿದ್ದಾಗಿ ಅವರು ಆರೋಪಿಸಿದರು. ನಮಗೆ ಹಣದ ಅಗತ್ಯವಿದೆ, ಮತ್ತು ನಾನು ಈ ಹೆಜ್ಜೆ ಇಟ್ಟಿದ್ದೇವೆ. ನಾನು ಜನರಿಗಾಗಿ ಕೆಲಸ ಮಾಡುತ್ತಲೇ ಇರುತ್ತೇನೆ ಮತ್ತು ಜನರು ನನಗೆ ವಹಿಸಿರುವ ಜವಾಬ್ದಾರಿಯನ್ನು ಪೂರ್ಣಗೊಳಿಸುತ್ತೇನೆ ಎಂದು ಅವರು ಹೇಳಿದರು.

ಸೇನಾ (ಯುಬಿಟಿ) ನಾಯಕತ್ವವನ್ನು ಉಲ್ಲೇಖಿಸಿದ ಅವರು, ಕೆಲವು ಜನರು ತಮ್ಮ ಬಗ್ಗೆ ಅಸಮಾಧಾನ ಹೊಂದಿರಬಹುದು, ಆದರೆ ಅವರು ಅಂತಿಮವಾಗಿ ತಮ್ಮ ನಿಲುವನ್ನು ಅರ್ಥಮಾಡಿಕೊಳ್ಳುತ್ತಾರೆ ಎಂದು ಅಷ್ಟಿಕರ್ ತಿಳಿಸಿದರು.

'ನಾನು ಎಲ್ಲಿಗೂ ಹೋಗಿಲ್ಲ. ನಾನು ಶಿವಸೇನೆಯಿಂದ ಶಿವಸೇನೆಗೆ ಸ್ಥಳಾಂತರಗೊಂಡಿದ್ದೇನೆ. ಜನರು ತಮ್ಮ ಕೋಪವನ್ನು ವ್ಯಕ್ತಪಡಿಸಬಹುದು, ಆದರೆ ಅದೇ ಸಮಯದಲ್ಲಿ, ಅವರು ತಮ್ಮ ವಿರುದ್ಧದ ಭಾಷೆಯನ್ನು ಲೆಕ್ಕಿಸಬೇಕು. ನನ್ನೊಂದಿಗೆ ಬರಲು ನಾನು ಯಾರನ್ನೂ ಒತ್ತಾಯಿಸುವುದಿಲ್ಲ. ಆದರೆ ನಾನು ಅವರೊಂದಿಗೆ ನಿಲ್ಲುತ್ತೇನೆ,'' ಎಂದು ಅವರು ಹೇಳಿದರು. ಸಂಜಯ್ ರಾವುತ್ ಅವರು, ಕೋಪಗೊಂಡ ಶಿವಸೇನಾ ಕಾರ್ಯಕರ್ತರು 'ಆಪರೇಷನ್ ತುಡ್ವಾ' ಮೂಲಕ ಬಂಡಾಯ ಸಂಸದರನ್ನು ಥಳಿಸುವುದಾಗಿ ಸೂಚಿಸಿದ್ದರು.

ರಾವುತ್ ಇದರ ಪರಿಣಾಮಗಳ ಬಗ್ಗೆಯೂ ತಿಳಿದಿದ್ದಾರೆ ಎಂದು ಅಷ್ಟಿಕರ್ ಹೇಳಿದರು.

'ಅವರು ತಂದೆಯಂತಹ ವ್ಯಕ್ತಿಯಾಗಿದ್ದರೂ ಮತ್ತು ಛೀಮಾರಿ ಹಾಕಬಲ್ಲವರಾಗಿದ್ದರೂ, ಎಲ್ಲರಿಗೂ ಅದೇ ರೀತಿ ಉತ್ತರಿಸುವ ಸಾಮರ್ಥ್ಯವಿದೆ ಎಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕು. ಅಂತಹ ಘಟನೆಗಳು ಒಮ್ಮೊಮ್ಮೆ ನಡೆಯಬಹುದು. ಅವರು (ರಾವುತ್) ಕೂಡ ಪರಿಣಾಮಗಳನ್ನು ತಿಳಿದಿದ್ದಾರೆ,'' ಎಂದು ಅವರು ವಿವರಿಸಿದರು.

ಟೆಸ್ಟ್‌ನಲ್ಲಿ ದಾಖಲೆ ಬರೆದ ರೂಟ್: ಸಚಿನ್ ಬಳಿಕ ಈ ಮೈಲಿಗಲ್ಲು ತಲುಪಿದ 2ನೇ ಆಟಗಾರ

ಲಂಡನ್, ಜೂ.21 - ನ್ಯೂಜಿಲೆಂಡ್ ವಿರುದ್ಧ ಎರಡನೇ ಟೆಸ್ಟ್ ಪಂದ್ಯದಲ್ಲಿ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನವನ್ನು ತೋರಿದ ಇಂಗ್ಲೆಂಡ್ ತಂಡದ ನಾಯಕ ಜೋ ರೂಟ್ ಅರ್ಧಶತಕವನ್ನು ಗಳಿಸಿದರು. ಆ ಮೂಲಕ ತಮ್ಮ ಟೆಸ್ಟ್ ವೃತ್ತಿ ಜೀವನದಲ್ಲಿ 14,000 ರನ್‌ಗಳನ್ನು ಪೂರ್ಣಗೊಳಿಸಿದ್ದಾರೆ. ಆ ಮೂಲಕ ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್ ಅವರ ದಾಖಲೆಯನ್ನು ಮುರಿದಿದ್ದಾರೆ. ಅಂದ ಹಾಗೆ ಈ ಪಂದ್ಯ ಲಂಡನ್‌ನ ಕೆನಿಂಗ್ಟನ್ ಓವಲ್‌ನಲ್ಲಿ ನಡೆಯುತ್ತಿದ್ದು, ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಜೋ ರೂಟ್ ಈ ಮೈಲುಗಲ್ಲು ತಲುಪಿದ್ದಾರೆ.



ಮೊದಲ ಪಂದ್ಯ ಗೆದ್ದಿರುವ ಇಂಗ್ಲೆಂಡ್ ತಂಡವು ಸರಣಿಯಲ್ಲಿ 2-0 ಮುನ್ನಡೆ ಸಾಧಿಸಬೇಕಾದರೆ, ಈ ಪಂದ್ಯವನ್ನು ಗೆಲ್ಲಬೇಕಿತ್ತು. ಆದರೆ, 462 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡವು ಕೇವಲ 209 ರನ್‌ಗಳಿಗೆ ಆಲ್‌ಔಟ್ ಆಗುವ ಮೂಲಕ 253 ರನ್‌ಗಳ ಬೃಹತ್ ಅಂತರದ ಸೋಲು ಅನುಭವಿಸಿದೆ. 462 ರನ್‌ಗಳ ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡಕ್ಕೆ ಆರಂಭ ಆಘಾತ ಎದುರಾಯಿತು. 13 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದಾಗ ಬ್ಯಾಟಿಂಗ್ ಇಳಿದ ರೂಟ್ ಇದೇ ಪಂದ್ಯದ ಮೂಲಕ ಟೆಸ್ಟ್ ಕ್ರಿಕೆಟ್‌ನಲ್ಲಿ 14,000 ರನ್ ಕಲೆಹಾಕಿದ ಸಾಧನೆ ಮಾಡಿದರು. ಅವರು 77 ರನ್ ಗಳಿಸಿ ಔಟ್ ಆದರು.

ಇಂಗ್ಲೆಂಡ್ ತಂಡದ ಎರಡನೇ ಇನಿಂಗ್ಸ್‌ನಲ್ಲಿ ಜೋ ರೂಟ್ 24 ರನ್ ಗಳಿಸುತ್ತಿದ್ದಂತೆ ಟೆಸ್ಟ್ ಕ್ರಿಕೆಟ್‌ನಲ್ಲಿ 14,000 ರನ್ ಕಲೆಹಾಕಿದ ದಾಖಲೆ ಮಾಡಿದರು. ಆ ಮೂಲಕ ವಿಶ್ವ ಕ್ರಿಕೆಟ್‌ನಲ್ಲಿ ಈ ದಾಖಲೆ ಮಾಡಿದ ಎರಡನೇ ಆಟಗಾರರಾದರು. ಇದಕ್ಕೂ ಮೊದಲು ಸಚಿನ್ ತೆಂಡೂಲ್ಕರ್ ಮಾತ್ರ ಈ ಮೈಲಿಗಲ್ಲು ತಲುಪಿದ್ದಾರೆ. ಸಚಿನ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ 200 ಟೆಸ್ಟ್‌ಗಳಿಂದ 15,921 ರನ್ ಕಲೆಹಾಕಿ ಅಗ್ರಸ್ಥಾನದಲ್ಲಿದ್ದಾರೆ.

ಟೆಸ್ಟ್ ಕ್ರಿಕೆಟ್‌ನಲ್ಲಿ ಸಚಿನ್ ತೆಂಡೂಲ್ಕರ್ ಅವರ ಅತ್ಯಧಿಕ ರನ್ಸ್ ದಾಖಲೆ ಮೇಲೆ ಕಣ್ಣಿಟ್ಟಿರುವ ಜೋ ರೂಟ್ ಈಗಿರುವ ಲಯದಲ್ಲಿ ಇನ್ನೆರಡು ವರ್ಷಗಳ ಕಾಲ ಬ್ಯಾಟಿಂಗ್ ಮಾಡಿದರೆ, ಸಚಿನ್ ದಾಖಲೆ ಮುರಿಯುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂಬುದು ಕ್ರಿಕೆಟ್ ಪಂಡಿತರ ಮಾತು.

ಸಂಜಯ್ ದಿನಾ ಪಾಟೀಲ್ ಪುತ್ರಿ 'ಮಾತೋಶ್ರೀ'ಗೆ ಭೇಟಿ; ಉದ್ಧವ್ ಠಾಕ್ರೆಗೆ ಬೆಂಬಲ ಘೋಷಣೆ

ಮುಂಬಯಿ,ಜೂ.21 - ಶಿವಸೇನೆ (ಯುಬಿಟಿ)ಯ ಬಂಡಾಯ ಸಂಸದರಿಗೆ ದೊಡ್ಡ ಆಘಾತ ಎದುರಾಗಿದೆ. ಬಂಡಾಯ ಸಂಸದ ಸಂಜಯ್ ದಿನಾ ಪಾಟೀಲ್ ಅವರ ಪುತ್ರಿ ರಾಜುಲ್ ಪಾಟೀಲ್ ಇಂದು 'ಮಾತೋಶ್ರೀ'ಗೆ ತೆರಳಿ ಪಕ್ಷದ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರನ್ನು ಭೇಟಿ ಮಾಡಿದ್ದಾರೆ. ಈ ಭೇಟಿಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ರಾಜುಲ್ ಪಾಟೀಲ್ ಅವರು, 'ನಾನು ಉದ್ಧವ್ ಠಾಕ್ರೆ ಜೊತೆಗಿದ್ದೇನೆ, ಈಗ ನನ್ನ ಮತ್ತು ನನ್ನ ತಂದೆಯ ಭವಿಷ್ಯದ ರಾಜಕೀಯ ಮಾರ್ಗ ವಿಭಿನ್ನವಾಗಿರುತ್ತದೆ, ನಾನು ನನ್ನ ಕೆಲಸವನ್ನು ಸಂಪೂರ್ಣ ನಿಷ್ಠೆಯಿಂದ ಮಾಡುತ್ತೇನೆ' ಎಂದು ಹೇಳಿದರು. ರಾಜುಲ್ ಪಾಟೀಲ್ ಠಾಕ್ರೆಸೇನೆಯ ಕಾರ್ಪೊರೇಟರ್. ಈಗ ರಾಜುಲ್ ಪಾಟೀಲ್ ತೆಗೆದುಕೊಂಡ ಈ ನಿಲುವು ಸಂಜಯ್ ದಿನ ಪಾಟೀಲ್‌ಗೆ ದೊಡ್ಡ ಹೊಡೆತ ಎಂದು ಪರಿಗಣಿಸಲಾಗುತ್ತಿದೆ. ಈ ಮಧ್ಯೆ, ಸೋಮವಾರದ ವೇಳೆಗೆ ಇಡೀ ಚಿತ್ರಣ ಸ್ಪಷ್ಟವಾಗುವ ಸಾಧ್ಯತೆಯಿದೆ. ಶಿಂದೆಸೇನೆ ಆಪರೇಷನ್ ಟೈಗರ್ ಬಗ್ಗೆ ಪುರಾವೆಗಳನ್ನು ಸಲ್ಲಿಸುವ ಸಾಧ್ಯತೆಯಿದೆ.ಠಾಕ್ರೆಸೇನೆ ಈ ನಿಟ್ಟಿನಲ್ಲಿ ಬೇಡಿಕೆ ಇಟ್ಟಿತ್ತು. ಆದಾಗ್ಯೂ, ಈ ಸಂಸದರ ಭವಿಷ್ಯವು ಮತ್ತೋರ್ವ ಬಂಡಾಯ ಸಂಸದ ಓಂರಾಜೆ ನಿಂಬಾಳ್ಕರ್ ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.



ಮುಲುಂಡ್ ಬಂಟ್ಸ್‌ನ 18ನೇ ವಾರ್ಷಿಕ ಮಹಾಸಭೆಯು ಮುಲುಂಡ್ ಪೂರ್ವದ ಬಾಸುರಿ ಹೊಟೇಲ್‌ನ ಸಭಾಗೃಹದಲ್ಲಿ ಜರಗಿದ ಸಂದರ್ಭ ಅಂಧೇರಿ ಪರಿಸರದ ಸಮಾಜ ಸೇವಾ ಸಂಸ್ಥೆ ಜವಾಬ್‌ನ ಮಾಜಿ ಅಧ್ಯಕ್ಷ, ತುಂಗಾ ಗ್ರೂಪ್ ಆಫ್ ಹಾಸ್ಪಿಟಲ್ಸ್‌ನ ನಿರ್ದೇಶಕ ಹಾಗೂ ಬಂಟ್ಸ್ ಎಸೋಸಿಯೇಶನ್ ಆಫ್ ಆರ್ಕಿಟೆಕ್ಟ್ ಆ್ಯಂಡ್ ಇಂಜಿನಿಯರ್ಸ್ ಮುಂಬಯಿ ಇದರ ಉಪಾಧ್ಯಕ್ಷ ರಾಜೇಶ್ ಬಿ. ಶೆಟ್ಟಿಯವರನ್ನು ಮುಲುಂಡ್ ಬಂಟ್ಸ್ ಪರವಾಗಿ ಅಭಿನಂದಿಸಿದಾಗ. - ಚಿತ್ರ : ಗುರುದತ್ತ್ ಪೂಂಜ ಮುಂಡ್ಕೂರು.

ಪಾತೂರು ನಗರ ಪಂಚಾಯತ್ ಚುನಾವಣೆಯಲ್ಲಿ ಕಾಂಗ್ರೆಸ್ ದೊಡ್ಡ ಪಕ್ಷ

ಮುಂಬಯಿ / ಅಕೋಲ, ಜೂ. 21- ಮಹಾರಾಷ್ಟ್ರದ ಅಕೋಲ ಜಿಲ್ಲೆಯ ಪಾತೂರು ನಗರ ಪಂಚಾಯತ್ ಚುನಾವಣೆಯಲ್ಲಿ ವಿರೋಧ ಪಕ್ಷ ಕಾಂಗ್ರೆಸ್ ಪಕ್ಷ ದೊಡ್ಡ ಗೆಲುವು ಸಾಧಿಸಿದ್ದು, 21 ಸೀಟುಗಳಲ್ಲಿ ಅಧ್ಯಕ್ಷ ಹುದ್ದೆ ಮತ್ತು 7 ಸೀಟುಗಳನ್ನು ಗೆದ್ದುಕೊಂಡಿದ್ದು ಆಡಳಿತ ಬಿಜೆಪಿ ಮತ್ತು ಶಿವಸೇನೆಯನ್ನು ಹಿಂದಿಕ್ಕಿದೆ. ಪಾತೂರು ನಗರ ಪಂಚಾಯತ್ ಚುನಾವಣೆ ಜೂನ್ 20ರಂದು ನಡೆದಿದ್ದು ರವಿವಾರ ಮತ ಎಣಿಕೆ ನಡೆದಿದೆ.

ಅಧ್ಯಕ್ಷ ಸ್ಥಾನ ಮತ್ತು 7 ಸೀಟುಗಳ ಗೆಲುವಿನೊಂದಿಗೆ ಕಾಂಗ್ರೆಸ್ 8 ಸ್ಥಾನ ಗೆದ್ದುಕೊಂಡರೆ ಬಿಜೆಪಿ 4 ವಾರ್ಡ್‌ಗಳಲ್ಲಿ ಮತ್ತು ಶಿಂದೆ ಶಿವಸೇನೆ ಎರಡು ವಾರ್ಡ್‌ಗಳಲ್ಲಿ ಗೆಲುವು ಸಾಧಿಸಿದೆ. 8 ಸ್ಥಾನಗಳನ್ನು ಮಾನ್ಯತೆ ಇಲ್ಲದ ಇತರ ಪಕ್ಷಗಳ ಅಭ್ಯರ್ಥಿಗಳು ಗೆದ್ದಿದ್ದಾರೆ. ಕಾಂಗ್ರೆಸ್ ಪಕ್ಷ ಅತಿದೊಡ್ಡ ಪಕ್ಷವಾಗಿ ಗೆಲುವು ಸಾಧಿಸಿದ್ದರೂ ಅತಂತ್ರ ಸ್ಥಿತಿಯನ್ನು ನಿರ್ಮಿಸಿದೆ.

ಪಾತೂರು ನಗರ ಪಂಚಾಯತ್ ಅಲ್ಲದೆ ಮಹಾರಾಷ್ಟ್ರದಾದ್ಯಂತ ಹಲವು ಮುನ್ಸಿಪಲ್ ಕೌನ್ಸಿಲ್‌ಗಳು ಮತ್ತು ನಗರ ಪಂಚಾಯತ್‌ಗಳಲ್ಲಿ ಉಪ ಚುನಾವಣೆ ಕೂಡಾ ನಡೆದಿದೆ.

ಉಪ ಚುನಾವಣೆಗಳಲ್ಲಿ ಆಡಳಿತ ಶಿವಸೇನೆ ಮತ್ತು ಬಿಜೆಪಿ ತಲಾ 3 ಸ್ಥಾನಗಳನ್ನು ಗೆದ್ದುಕೊಂಡಿದ್ದರೆ ಕಾಂಗ್ರೆಸ್ ಮತ್ತು ಎನ್‌ಸಿಪಿ (ಎಸ್‌ಪಿ) ತಲಾ 2 ಸೀಟುಗಳನ್ನು ಗೆದ್ದಿವೆ. ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷವೂ ಎರಡು ಸ್ಥಾನ ಗೆದ್ದಿದೆ. ಮಾನ್ಯತೆ ರಹಿತ ರಾಜಕೀಯ ಪಕ್ಷ ಒಂದು ಸ್ಥಾನ ಗೆದ್ದಿದೆ. ಐದು ಸ್ಥಾನಗಳನ್ನು ಪಕ್ಷೇತರರು ಗೆದ್ದಿದ್ದಾರೆ.

ರಾಯಗಢ ಜಿಲ್ಲೆಯ ಪಾಲಿ ಮತ್ತು ಫೊಲಾದ್ಪುರದಲ್ಲಿ ಶಿವಸೇನೆ ಉಪಚುನಾವಣೆಯಲ್ಲಿ ಮೂರು ಸ್ಥಾನ ಗೆದ್ದುಕೊಂಡರೆ ಬಿಜೆಪಿ ಜಲಗಾಂವ್ ಜಿಲ್ಲೆಯ ಇರಂದೋಲ್, ನಾಗಪುರ ಜಿಲ್ಲೆಯಹಿಂಗಾನಿ ಮತ್ತು ಗಡ್ಚಿರೋಲಿ ಪಟ್ಟಣದಲ್ಲಿ ಗೆದ್ದಿದೆ. ಎನ್‌ಸಿಪಿ ಜಾಲ್ನಾ ಜಿಲ್ಲೆಯ ಘನಸಾವಂಗಿ ಮತ್ತು ಗಡ್ಚಿರೋಲಿ ಜಿಲ್ಲೆಯ ಅಹೇರಿಯಲ್ಲಿ ಗೆಲುವು ಸಾಧಿಸಿದ್ದರೆ ಎನ್‌ಸಿಪಿ (ಎಸ್‌ಪಿ) ನಾಸಿಕ್ ಜಿಲ್ಲೆಯ ಪೇಟ್ ಮತ್ತು ದೇವ್ಲೋಲದಲ್ಲಿ ಗೆದ್ದಿದೆ.

ಪಕ್ಷೇತರರು ದೇವ್ಲೋಲ (ನಾಸಿಕ್), ಮನೋರ (ವಾಶಿಮ್) ಜೀವತಿ (ಚಂದ್ರಾಪುರ), ಸಾದಕ್ ಅರ್ಜನಿ (ಗೋಂಡಿಯಾ) ಮತ್ತು ಸಮುದ್ರಪುರ (ವಾರ್ಧಾ) ದಲ್ಲಿ ಗೆದ್ದಿದ್ದಾರೆ. ಲಾತೂರು ಜಿಲ್ಲೆಯ ಅಹ್ಮದಪುರದಲ್ಲಿ ಮಾನ್ಯತೆಯಿಲ್ಲದ ಪಕ್ಷದ ಅಭ್ಯರ್ಥಿ ಗೆದ್ದಿದ್ದಾರೆ. ಮುನ್ಸಿಪಲ್ ಕೌನ್ಸಿಲ್ ಮತ್ತು ನಗರ ಪಂಚಾಯತ್ ಚುನಾವಣೆಯಲ್ಲಿ ಒಟ್ಟಾರೆಯಾಗಿ ಕಾಂಗ್ರೆಸ್ 10 ಸ್ಥಾನಗಳನ್ನು ಗೆದ್ದುಕೊಂಡಿದ್ದರೆ ಅನಧಿಕೃತ ಪಕ್ಷಗಳು 8 ಸ್ಥಾನಗಳನ್ನು ಬಿಜೆಪಿ 6, ಶಿವಸೇನೆ 4 ಮತ್ತು ಎನ್‌ಸಿಪಿ ಹಾಗೂ ಎನ್‌ಸಿಪಿ (ಎಸ್‌ಪಿ) ತಲಾ 2 ಸ್ಥಾನಗಳನ್ನು ಗೆದ್ದುಕೊಂಡಿವೆ ಎಂದು ರಾಜ್ಯ ಚುನಾವಣಾ ಆಯೋಗ ಹೇಳಿದೆ.

ಕರ್ನಾಟಕ ಮಲ್ಲ
ಪುಟಾಣಿ ಮಲ್ಲ
KARNATAKA MALLA, KANNADA DAILY, MUMBAI
22-06-2026
ಸೋಮವಾರ
ಪುಟ: 08
ಇದು ಚಿಣ್ಣರ ಜ್ಞಾನದ ಲೋಕ

ಕುಂಭಕರ್ಣನ 6 ತಿಂಗಳ ನಿದ್ರೆಯ ಹಿಂದೆ ಇರುವ ಪೌರಾಣಿಕ ಕಥೆ.!



ಕುಂಭಕರ್ಣನ ಕಥೆಯನ್ನು ನಾವು ಚಿಕ್ಕ ವಯಸ್ಸಿನವರಿದ್ದಾಗಿನಿಂದಲೂ ಕೇಳಿಕೊಂಡು ಅಥವಾ ಓದಿಕೊಂಡು ಬೆಳೆದಿರುತ್ತೇವೆ. ಕುಂಭಕರ್ಣ ಎಂದರೆ, ಮೊದಲು ನಮಗೆ ನೆನಪಿಗೆ ಬರೋದು ಆತನು 6 ತಿಂಗಳುಗಳ ಕಾಲ ಮಲಗುತ್ತಿದ್ದ.6 ತಿಂಗಳುಗಳ ಕಾಲ ತಿನ್ನುತ್ತಿದ್ದ ಎಂಬುದು. ಕುಂಭಕರ್ಣ ಲಂಕಾಧಿಪತಿ ರಾಕ್ಷಸ ರಾಜ ರಾವಣನ ಸಹೋದರನಾಗಿದ್ದವನು. ಕುಂಭಕರ್ಣನ ದೀರ್ಘ ನಿದ್ರೆಯು ಆತನ ಹವ್ಯಾಸವಾಗಿರಲಿಲ್ಲ. ಬದಲಾಗಿ, ಅದು ಇಂದ್ರನ ತಂತ್ರಗಾರಿಕೆಯ ಫಲವಾಗಿತ್ತು. ಇಂದ್ರನ ಉದ್ದೇಶಪೂರ್ವಕ ತಂತ್ರದ ಪರಿಣಾಮವು ಕುಂಭಕರ್ಣನ ಜೀವನವನ್ನು ಬದಲಾಯಿಸಿತು. ಕುಂಭಕರ್ಣ 6 ತಿಂಗಳುಗಳ ಕಾಲ ದೀರ್ಘ ನಿದ್ರೆಯನ್ನು ಅನುಭವಿಸಲು ಇಂದ್ರ ಹೇಗೆ ಕಾರಣನಾದ.? ಇಂದ್ರ ಮತ್ತು ಕುಂಭಕರ್ಣರ ನಡುವೆ ಅಂತಹ ಬದಲಾವಣೆ ಏನಾಗಿತ್ತು?

ಕುಂಭಕರ್ಣನ ದೀರ್ಘ ತಪಸ್ಸು

ಪೌರಾಣಿಕ ನಂಬಿಕೆ ಹಾಗೂ ಕಥೆಗಳ ಪ್ರಕಾರ, ರಾವಣನಿಗೆ ಇಬ್ಬರು ಸಹೋದರರಿದ್ದರು. ಅವರೆಂದರೆ, ಕುಂಭಕರ್ಣ ಮತ್ತು ವಿಭೀಷಣ. ರಾವಣ, ಕುಂಭಕರ್ಣ ಮತ್ತು ವಿಭೀಷಣರು ಬ್ರಹ್ಮ ದೇವನನ್ನು ಮೆಚ್ಚಿಸುವುದಕ್ಕಾಗಿ ತೀವ್ರವಾದ ತಪಸ್ಸನ್ನು ಮಾಡಲು ಮುಂದಾದರು. ಈ 3 ಜನ ಸಹೋದರರ ತಪಸ್ಸಿಗೆ ಮೆಚ್ಚಿದ ಬ್ರಹ್ಮ ದೇವನು ಅವರ ಮುಂದೆ ಪ್ರತ್ಯಕ್ಷನಾಗುತ್ತಾನೆ. ಬ್ರಹ್ಮ ದೇವನು ಈ 3 ಜನರ ಬಳಿ ತನ್ನನ್ನು ತಪಸ್ಸಿನ ಮೂಲಕ ಒಲಿಸಿಕೊಳ್ಳಲು ಕಾರಣವೇನು ಎಂದು ಕೇಳುತ್ತಾನೆ. ಆಗ, ಇನ್ನುಳಿದ ದೇವರು ಮತ್ತು ದೇವತೆಗಳಿಗೆ ಕುಂಭಕರ್ಣನ ತಪಸ್ಸಿನ ರೂಪವನ್ನು ಕಂಡು ಭಯ ಹುಟ್ಟುತ್ತದೆ. ಕುಂಭಕರ್ಣ ಏನಾದರೂ ಶಕ್ತಿಯುತವಾದುದ್ದನ್ನು ಕೇಳುವ ಮೂಲಕ ದೇವ ಲೋಕವನ್ನು ಆಳಬಹುದೇ ಎನ್ನುವ ಭಯಕ್ಕೆ ಒಳಗಾಗುತ್ತಾರೆ. ಕುಂಭಕರ್ಣನು ಕೇಳುವ ವರ ಬ್ರಹ್ಮಾಂಡದ ಸಮತೋಲನಕ್ಕೆ ತೊಂದರೆಯನ್ನುಂಟು ಮಾಡುವುದೇ ಎಂದು ಆತಂಕಗೊಂಡರು.

ಇಂದ್ರನಿಗೆ ತನ್ನ ಸಿಂಹಾಸನ ಕಳೆದುಕೊಳ್ಳುವ ಭಯ ಹುಟ್ಟಿತು

ಕುಂಭಕರ್ಣನು ದೇವರು ಮತ್ತು ದೇವತೆಗಳಷ್ಟೇ ಶಕ್ತಿಯುತನಾಗಿದ್ದನು ಮತ್ತು ದೇವರುಗಳ ಮೇಲೆ ತನ್ನ ಶಕ್ತಿಯನ್ನು ಬಳಸುವಷ್ಟು ಪರಿಣಾಮಕಾರಿಯಾಗಿದ್ದನು. ಕುಂಭಕರ್ಣನ ಅಗಾಧವಾದ ಶಕ್ತಿಯನ್ನು ಕಂಡು ದೇವರುಗಳು ರಾಜನಾದ, ಸ್ವರ್ಗಾಧಿಪತಿ ಇಂದ್ರನಿಗೆ ತಾನು ಸ್ವರ್ಗವನ್ನು ಕಳೆದುಕೊಳ್ಳುತ್ತೇನೆಯೇ ಎನ್ನುವ ಭಯ ಹೆಚ್ಚಾಯಿತು. ಒಂದು ವೇಳೆ ಕುಂಭಕರ್ಣ ಬ್ರಹ್ಮ ದೇವನ ಬಳಿ ಇಂದ್ರನ ಆಸ್ಥಾನವನ್ನು ಕೇಳಿದರೆ ಇಂದ್ರ ದೇವನು ಸ್ವರ್ಗವನ್ನು ತೊರೆದು ತನ್ನೆಲ್ಲಾ ಸ್ಥಾನವನ್ನು ಕುಂಭಕರ್ಣನಿಗೆ ಧಾರೆಯೆರೆಯುವುದು ಕಡ್ಡಾಯವಾಗಿತ್ತು. ಇದಕ್ಕೆ ಹೆದರಿದ ಇಂದ್ರ ದೇವನು ಸರಸ್ವತಿ ದೇವಿಯ ಬಳಿ ಸಹಾಯವನ್ನು ಕೇಳುವುದಕ್ಕಾಗಿ ಒಂದು ಯೋಜನೆಯನ್ನು ರೂಪಿಸುತ್ತಾನೆ.

ಬ್ರಹ್ಮ ದೇವನು ಕುಂಭಕರ್ಣನಿಗೆ ಏನೆಂದು ವರವನ್ನು ನೀಡುತ್ತಾನೆ.?

ಬ್ರಹ್ಮ ದೇವನು ಎಲ್ಲಾ ಸಹೋದರರ ಬಳಿ ಹೋಗಿ ಅವರ ಬಯಕೆಯನ್ನು ಕೇಳುತ್ತಾ ಕುಂಭಕರ್ಣನ ಬಳಿಗೆ ಬರುತ್ತಾನೆ. ಬ್ರಹ್ಮ ದೇವನು ಕುಂಭಕರ್ಣನ ಬಳಿ ಬಂದು ನೀನು ನನ್ನನ್ನು ಒಲಿಸಿಕೊಳ್ಳಲು ಕಾರಣವೇನು ಎಂದು ಕೇಳುತ್ತಾನೆ. ಅಂತಹ ಸಂದರ್ಭದಲ್ಲಿ ಸರಸ್ವತಿ ದೇವಿಯು ಇಂದ್ರನಿಗೆ ಸಹಾಯವನ್ನು ಮಾಡುವುದಕ್ಕಾಗಿ ಕುಂಭಕರ್ಣನ ನಾಲಿಗೆಯ ಮೇಲೆ ಹೋಗಿ ಕುಳಿತುಕೊಳ್ಳುತ್ತಾಳೆ. ಕುಂಭಕರ್ಣ ಮೂಲತಃ ಇಂದ್ರನ ಆಲೋಚನೆಯಂತೆ ಆತನ ಸಿಂಹಾಸನವನ್ನು ಕೇಳಲು ಬಯಸಿದ್ದನು. ಬ್ರಹ್ಮ ದೇವನ ಬಳಿ ವರವನ್ನು ಕೇಳಲು ಮುಂದಾದಾಗ ಸರಸ್ವತಿ ದೇವಿಯು ಕುಂಭಕರ್ಣನ ನಾಲಿಗೆಯನ್ನು ತಿರುಚುತ್ತಾಳೆ. ಕುಂಭಕರ್ಣನ ಬಾಯಲ್ಲಿ ಇಂದ್ರಾಸನ ಎಂದು ಬರುವ ಬದಲು ನಿದ್ರಾಸನ ಎನ್ನುವ ಪದ ಬರುತ್ತದೆ. ಕುಂಭಕರ್ಣ ನಿದ್ರಾಸನ ಎಂದು ಹೇಳುತ್ತಿದ್ದಂತೆ ಬ್ರಹ್ಮನು ಹಾಗೇ ಆಗಲಿ ಎಂದು ವರವನ್ನು ನೀಡಿದನು. ತಾನು ಬೇಡಿದ ವರ ತಪ್ಪೆಂದು ಕುಂಭಕರ್ಣನ ಅರಿವಿಗೆ ಬಂದಾಗ ಅವನು ದುಃಖಿತನಾದನು. ಈ ಕಠಿಣ ವರವನ್ನು ಮರಳಿ ಪಡೆಯುವಂತೆ ರಾವಣನು ಬ್ರಹ್ಮ ದೇವನ ಬಳಿ ಪ್ರಾರ್ಥಿಸಿದನು. ಇದಕ್ಕೆ ಬ್ರಹ್ಮ ದೇವನು ಒಮ್ಮೆ ನೀಡಿದ ವರವನ್ನು ಮರಳಿ ಹಿಂಪಡೆಯಲು ಸಾಧ್ಯವಿಲ್ಲ. ಆದರೆ, ವರದ ಪರಿಣಾಮವನ್ನು ಕಡಿಮೆ ಮಾಡಬಹುದು ಎಂದು ಹೇಳುತ್ತಾನೆ. ಬ್ರಹ್ಮ ದೇವನು ವರವನ್ನು ತಿರುಚಿ, ಕುಂಭಕರ್ಣನು 6 ತಿಂಗಳುಗಳ ಕಾಲ ಮಾತ್ರ ಮಲಗಿರುವಂತೆ ವರವನ್ನು ನೀಡಿದನು.

ರಾಮಾಯಣದಲ್ಲಿ ಕುಂಭಕರ್ಣನ ಪಾತ್ರ

ರಾಮಾಯಣ ಅವಧಿಯಲ್ಲಿ ರಾವಣ ಮತ್ತು ರಾಮನ ನಡುವೆ ಘೋರ ಯುದ್ಧ ನಡೆಯುತ್ತದೆ. ರಾವಣನಿಗೆ ರಾಮನೊಂದಿಗೆ ಹೋರಾಡಲು ತನ್ನ ಸಹೋದರ ಕುಂಭಕರ್ಣನ ಸಹಾಯ ಬೇಕಾಗುತ್ತದೆ. ಈ ಕಾರಣಕ್ಕಾಗಿ ಅವನು ಅಂದರೆ, ರಾವಣನು ಕುಂಭಕರ್ಣನನ್ನು ನಿದ್ರೆಯಿಂದ ಎಬ್ಬಿಸಲು ಸಾಕಷ್ಟು ಪ್ರಯತ್ನಿಸುತ್ತಾನೆ. ಎಚ್ಚರವಾದ ನಂತರ, ಕುಂಭಕರ್ಣನು ರಾಮನೊಂದಿಗೆ ಯುದ್ಧವನ್ನು ಮಾಡಲು ಹಿಂದೇಟು ಹಾಕುವುದಿಲ್ಲ ಅಥವಾ ರಾಮನನ್ನು ನೋಡಿ ಓಡಿ ಹೋಗುವುದಿಲ್ಲ. ಬದಲಾಗಿ, ರಾಮನೆದುರು ನಿಂತು ಯುದ್ಧವನ್ನು ಮಾಡಲು ಮುಂದಾಗುತ್ತಾನೆ. ರಾಮನೊಂದಿಗೆ ಹೋರಾಡಿ ಕುಂಭಕರ್ಣನು ವೀರ ಮರಣವನ್ನು ಹೊಂದುತ್ತಾನೆ. ಕುಂಭಕರ್ಣನು ಧರ್ಮವನ್ನು ಆಳವಾಗಿ ಅರ್ಥಮಾಡಿಕೊಂಡಿದ್ದನು ಆದರೆ, ರಾವಣ ತನ್ನ ಸಹೋದರ ಎನ್ನುವ ಕಾರಣಕ್ಕಾಗಿ ಅವನು ರಾವಣನ ಕೃತ್ಯಗಳನ್ನು ಬೆಂಬಲಸಿದನು.

ಕುಂಭಕರ್ಣ ಎಚ್ಚರವಾಗಿದ್ದಿದ್ದರೆ ಏನಾಗುತ್ತಿತ್ತು?

ಕುಂಭಕರ್ಣನು ಎಷ್ಟು ಶಕ್ತಿಶಾಲಿ ಹಾಗೂ ವಿನಾಶಕಾರಿಯಾಗಿದ್ದನೆಂದರೆ, ಒಂದು ವೇಳೆ ಅವನು ವರ್ಷದ ಪ್ರತೀ ದಿನವೂ ಎಚ್ಚರವಾಗಿದ್ದರೆ ಇಡೀ ವಿಶ್ವವನ್ನೇ ನಾಶ ಮಾಡುವ ಸಾಮರ್ಥ್ಯವನ್ನು ಹೊಂದಿದ್ದನು. ಅವನು ಸಂಪೂರ್ಣ ಬ್ರಹ್ಮಾಂಡವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುತ್ತಿದ್ದನು. ಅವನು ಒಂದೇ ಬಾರಿ ಸಾವಿರಾರು ಜೀವಿಗಳನ್ನು ಸೇವಿಸುವ ಮೂಲಕ ಬ್ರಹ್ಮಾಂಡದಲ್ಲಿ ಒಂದೇ ಒಂದು ಜೀವಿಯನ್ನು ಬದುಕಲು ಬಿಡುತ್ತಿರಲಿಲ್ಲ. ಆದ್ದರಿಂದ ಇಂದ್ರನ ಈ ತಂತ್ರವನ್ನು ವಿಶ್ವವನ್ನು ರಕ್ಷಿಸಲು ತೆಗೆದುಕೊಂಡ ಪ್ರಮುಖ ಹೆಜ್ಜೆ ಎಂದು ಪರಿಗಣಿಸಲಾಗಿದೆ.

ವಿಶ್ವದ ಟಾಪ್ ಸಂತೋಷಕರ ದೇಶಗಳು

ವಿಶ್ವದ ಅನೇಕ ದೇಶಗಳು ಪ್ರಸ್ತುತ ಯುದ್ಧಗಳಲ್ಲಿ ಮುಳುಗಿದೆ. ಈ ಮೂಲಕ ಅಲ್ಲಿನ ಜನರು ಆರ್ಥಿಕ ತೊಂದರೆಗಳನ್ನು ಅನುಭವಿಸುವುದು ಮಾತ್ರವಲ್ಲದೆ, ಸಂತೋಷವನ್ನು ಸಹ ಕಳೆದುಕೊಂಡಿದ್ದಾರೆ. ಆದರೆ ಇತ್ತೀಚಿನ ವರದಿಗಳ ಪ್ರಕಾರ, 2026 ರಲ್ಲಿ ಸಂತೋಷಕರವಾಗಿ ಜೀವಿಸುವ ದೇಶಗಳನ್ನು ಪಟ್ಟಿ ಮಾಡಲಾಗಿದೆ. ಅದನ್ನು ವಿಶ್ವ ಸಂತೋಷ ವರದಿ ಎಂದೇ ಹೇಳಲಾಗುತ್ತದೆ.

ಮೊದಲ ಸ್ಥಾನದಲ್ಲಿ ಫಿನ್ಲ್ಯಾಂಡ್ ಮತ್ತೊಮ್ಮೆ ವಿಶ್ವದ ಅತ್ಯಂತ ಸಂತೋಷದಾಯಕ ರಾಷ್ಟ್ರವಾಗಿ ಸ್ಥಾನ ಪಡೆದಿದೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಯೋಗಕ್ಷೇಮ ಸಂಶೋಧನಾ ಕೇಂದ್ರವು ಆಯಾ ದೇಶಗಳ ಸಂತೋಷದ ಬಗ್ಗೆ ರೇಟಿಂಗ್ ಬಿಡುಗಡೆ ಮಾಡಿದೆ. ಅದರ ಪ್ರಕಾರ ಟಾಪ್ 10 ಸಂತೋಷಕರ ದೇಶಗಳು ಹಾಗೂ ಭಾರತದ ಸ್ಥಾನದ ಬಗ್ಗೆ ಇಲ್ಲಿದೆ ಸಂಪೂರ್ಣ ಮಾಹಿತಿ

ಫಿನ್ಲ್ಯಾಂಡ್



ಫಿನ್ಲ್ಯಾಂಡ್ ವಿಶ್ವದ ಅತ್ಯಂತ ಸಂತೋಷದಾಯಕ ದೇಶಗಳಲ್ಲಿ ಒಂದಾಗಿ ಮತ್ತೊಮ್ಮೆ ಹೆಸರು ಮಾಡಿದೆ. ಈ ದೇಶವು ತನ್ನ ಸಾಮಾಜಿಕ ಬೆಂಬಲ ಮತ್ತು ಜೀವನದ ಗುಣಮಟ್ಟದ ಆಧಾರದ ಮೇಲೆ ನಂಬರ್‌ಒನ್ ಸ್ಥಾನದಲ್ಲಿದೆ. ಫಿನ್ಲ್ಯಾಂಡ್ ಜೊತೆಗೆ, ಐಸ್ಲ್ಯಾಂಡ್, ಡೆನ್ಮಾರ್ಕ್, ಸ್ವೀಡನ್ ಮತ್ತು ನಾರ್ವೆಯಂತಹ ದೇಶಗಳು ಕೂಡ ಟಾಪ್ 10 ರಲ್ಲಿ ಗುರುತಿಸಿಕೊಂಡಿದೆ. ಟಾಪ್ 10 ರಲ್ಲಿರುವ ಈ ರಾಷ್ಟ್ರಗಳು ತನ್ನ ಬಲವಾದ ಸಾರ್ವಜನಿಕ ಸಂಸ್ಥೆಗಳು, ಕಡಿಮೆ ಭ್ರಷ್ಟಾಚಾರ ಮತ್ತು ಉನ್ನತ ಜೀವನ ಮಟ್ಟಗಳಿಂದ ಹೆಚ್ಚು ಜನಪ್ರಿಯವಾಗಿದೆ.

ಇನ್ನು, 2023 ರಲ್ಲಿ 23 ನೇ ಸ್ಥಾನ ಪಡೆದ ನಂತರ ಕೋಸ್ಟಾರಿಕಾ ಗಮನಾರ್ಹ ಜಿಗಿತವನ್ನು ಸಾಧಿಸಿದೆ. ಹೌದು, 2023 ರಲ್ಲಿ 23 ನೇ ಸಂತೋಷಕರ ದೇಶವಾಗಿ ಸ್ಥಾನ ಪಡೆದಿತ್ತು, ಆದರೆ 2026ರಲ್ಲಿ ಅದು 4 ನೇ ಸ್ಥಾನ ಅಲಂಕರಿಸಿದೆ. ಇಷ್ಟು ಕಡಿಮೆ ವರ್ಷದಲ್ಲಿ ಸಮುದಾಯ, ಪರಿಸರ ಮತ್ತು ಸಂತೋಷದ ಅಂಶಗಳನ್ನು ತ್ವರಿತ ಹೆಚ್ಚಳದ ಬಗ್ಗೆ ಗಮನ ಹರಿಸಿದೆ. ಇನ್ನು ಇಸ್ರೇಲ್ ದೇಶವು 8 ನೇ ಸ್ಥಾನದಲ್ಲಿದೆ. ಭೌಗೋಳಿಕ ರಾಜಕೀಯ ಸಮಸ್ಯೆಗಳ ಹೊರತಾಗಿಯೂ, ಜೀವನದ ಗುಣಮಟ್ಟದ ಮೌಲ್ಯಮಾಪನದಲ್ಲಿ ಉತ್ತಮ ಸಾಧನೆ ಮಾಡಿದೆ.

ಭಾರತ ಯಾವ ಸ್ಥಾನದಲ್ಲಿದೆ ಗೊತ್ತಾ?

ಇನ್ನು, ನಮ್ಮ ಭಾರತ ಟಾಪ್ 10 ಸ್ಥಾನದಲ್ಲಿಯೇ ಎಂದು ನೀವು ಅಂದುಕೊಳ್ಳಬಹುದು. ಆದರೆ ಇಲ್ಲ, ವಿಶ್ವದ ಸಂತೋಷಕರವಾದ ದೇಶಗಳಲ್ಲಿ ಭಾರತವು 116 ನೇ ಸ್ಥಾನದಲ್ಲಿದೆ. ಇದು ವಿಶ್ವದ ಹಲವಾರು ದೇಶಗಳಿಗಿಂತ ಬಹಳ ಕಡಿಮೆಯಾಗಿದೆ. ಪಾಕಿಸ್ತಾನವು ಭಾರತಕ್ಕಿಂತ 104 ನೇ ಸ್ಥಾನದಲ್ಲಿದೆ. ಶ್ರೀಲಂಕಾ 99 ನೇ ಸ್ಥಾನದಲ್ಲಿದೆ. ಆದಾಗ್ಯೂ, ಬಾಂಗ್ಲಾದೇಶ, ನೇಪಾಳ ಮತ್ತು ಅಫ್ಘಾನಿಸ್ತಾನಗಳು ಕ್ರಮವಾಗಿ 127, 134 ಮತ್ತು 147 ಸ್ಥಾನಗಳಲ್ಲಿ ಭಾರತಕ್ಕಿಂತ ಕೆಳಗಿವೆ.

ವರದಿಯ ಪ್ರಕಾರ, ಯುಎಸ್ಎ, ಕೆನಡಾ, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ದೇಶಗಳಲ್ಲಿ 25 ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿಗಳಲ್ಲಿ ಜೀವನ ತೃಪ್ತಿಯ ಮಟ್ಟ ಗಮನಾರ್ಹ ಇಳಿಕೆ ಕಂಡುಬಂದಿದೆ ಎನ್ನಲಾಗಿದೆ.



ರಸಪ್ರಶ್ನೆಗಳು

1. ಗಗನ್ಯಾನ್ ಕಾರ್ಯಕ್ರಮದಡಿಯಲ್ಲಿ ಮಿಷನ್ ಮಿತ್ರವನ್ನು ಯಾವ ಸ್ಥಳದಲ್ಲಿ ನಡೆಸಲಾಗಿದೆ?
ಎ) ಲೇಹ್, ಬಿ) ವಿಶಾಖಪಟ್ಟಣಂ
ಸಿ) ಚೆನ್ನೈ, ಡಿ) ಬೆಂಗಳೂರು
ಉತ್ತರ: ಎ) ಲೇಹ್

ಟಿಪ್ಪಣಿ: ಗಗನ್ಯಾನ್ ಕಾರ್ಯಾಚರಣೆಯ ಭಾಗವಾಗಿ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು ಏಪ್ರಿಲ್ 2 ರಿಂದ ಏಪ್ರಿಲ್ 9,2026 ರವರೆಗೆ ಲೇಹ್‌ನಲ್ಲಿ ಮಿಷನ್ ಮಿತ್ರ (ಇಂಟರ್‌ಆಪರೇಬಲ್ ಗುಣಲಕ್ಷಣಗಳು ಮತ್ತು ಪ್ರತಿಕ್ರಿಯೆ ಮೌಲ್ಯಮಾಪನದ ಮ್ಯಾಪಿಂಗ್) ಅನ್ನು ನಡೆಸಿದೆ. ಮಿಷನ್ ಮಿತ್ರ ಇಸ್ರೋ ಮತ್ತು ಇನ್ಸ್ಟಿಟ್ಯೂಟ್ ಆಫ್ ಏರೋಸ್ಪೇಸ್ ಮೆಡಿಸಿನ್ ಜಂಟಿಯಾಗಿ ಅಭಿವೃದ್ಧಿಪಡಿಸಿದ ಮೊದಲ ರೀತಿಯ ತಂಡದ ನಡವಳಿಕೆಯ ಅಧ್ಯಯನವಾಗಿದ್ದು, ಮಾನವ ಬಾಹ್ಯಾಕಾಶ ಹಾರಾಟದಲ್ಲಿ ಸಿಬ್ಬಂದಿ ಸುರಕ್ಷತೆ ಮತ್ತು ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವ ಗುರಿಯನ್ನು ಹೊಂದಿದೆ. ಈ ಅಧ್ಯಯನವು ತಂಡದ ಸಂವಹನ, ಒತ್ತಡಕ್ಕೆ ಹೊಂದಿಕೊಳ್ಳುವಿಕೆ, ಮಾನಸಿಕ ಸ್ಥಿತಿಸ್ಥಾಪಕತ್ವ ಮತ್ತು ಪರಸ್ಪರ ಬೆಂಬಲದ ಮೇಲೆ ಕೇಂದ್ರೀಕರಿಸುತ್ತದೆ, ಇದು ಮಿಷನ್ ಯಶಸ್ಸಿಗೆ ನಿರ್ಣಾಯಕವಾಗಿದೆ. ಲೇಹ್ ಎತ್ತರದ ಪರಿಸರ(ಸುಮಾರು 3,500 ಮೀಟರ್), ಹೈಪೋಕ್ಸಿಯಾ, ಕಡಿಮೆ ತಾಪಮಾನ ಮತ್ತು ಪ್ರತ್ಯೇಕತೆಯ ಬಾಹ್ಯಾಕಾಶ ಹಾರಾಟ ಕಾರ್ಯಾಚರಣೆಗಳಿಗೆ ನೈಸರ್ಗಿಕ ಅನಲಾಗ್ ಆಗಿ ಕಾರ್ಯನಿರ್ವಹಿಸುತ್ತದೆ.

2. ಅಂತರರಾಷ್ಟ್ರೀಯ ಗಣಿ ಜಾಗೃತಿ ದಿನವನ್ನು ಪ್ರತಿ ವರ್ಷ ಯಾವ ದಿನದಂದು ಆಚರಿಸಲಾಗುತ್ತದೆ?
ಎ)ಏಪ್ರಿಲ್ 3 ಬಿ)ಏಪ್ರಿಲ್ 4
ಸಿ)ಏಪ್ರಿಲ್ 5 ಡಿ)ಏಪ್ರಿಲ್ 6
ಉತ್ತರ: ಬಿ) ಏಪ್ರಿಲ್ 4

ಟಿಪ್ಪಣಿ: ಭೂಗಣಿ ಸ್ಫೋಟಗಳ ಅಪಾಯಗಳ ಬಗ್ಗೆ ಜಾಗೃತಿ ಮೂಡಿಸಲು ಮತ್ತು ನೆಲಬಾಂಬ್ ನಿರ್ಮೂಲನ ಪ್ರಯತ್ನಗಳನ್ನು ಉತ್ತೇಜಿಸಲು ಪ್ರತಿ ವರ್ಷ ಏಪ್ರಿಲ್ 4 ರಂದು ಅಂತರರಾಷ್ಟ್ರೀಯ ಗಣಿ ಜಾಗೃತಿ ದಿನವನ್ನು ಆಚರಿಸಲಾಗಿದೆ. 2026ರ ಥೀಮ್ 'ಶಾಂತಿಯಲ್ಲಿ ಹೂಡಿಕೆ ಮಾಡಿ; ಗಣಿ ಕ್ರಿಯೆಯಲ್ಲಿ ಹೂಡಿಕೆ ಮಾಡಿ'. ಈ ಥೀಮ್ ಗಣಿ ತೆರವು ವೇಗಗೊಳಿಸಲು, ಬಲಿಪಶುಗಳನ್ನು ಬೆಂಬಲಿಸಲು ಮತ್ತು ಸಂಘರ್ಷ ಪೀಡಿತ ಪ್ರದೇಶಗಳಲ್ಲಿ ಸ್ಥಿರತೆಯನ್ನು ಭದ್ರಪಡಿಸಲು ಹಣಕಾಸಿನ ನಿರ್ಣಾಯಕ ಅಗತ್ಯವನ್ನು ಎತ್ತಿ ತೋರಿಸುತ್ತದೆ. 2006ರಲ್ಲಿ ಮೊದಲು ಆಚರಿಸಲಾದ ಈ ದಿನವು ಗಣಿ ತೆರವು, ಬಲಿಪಶು ಬೆಂಬಲ ಮತ್ತು ನೆಲಬಾಂಬ್ ಮುಕ್ತ ಜಗತ್ತನ್ನು ರಚಿಸಲು ಹೊಸ ತಂತ್ರಜ್ಞಾನಗಳ ಬಳಕೆಯಲ್ಲಿ ಜಾಗತಿಕ ಪ್ರಯತ್ನಗಳನ್ನು ಒತ್ತಿಹೇಳುತ್ತದೆ.

3. ಇತ್ತೀಚೆಗೆ ಸುದ್ದಿಯಲ್ಲಿ ಕಾಣಿಸಿಕೊಂಡ ಮುಸಿ ನದಿ ಯಾವ ನದಿಯ ಉಪನದಿಯಾಗಿದೆ?
ಎ) ಗೋದಾವರಿ ಬಿ) ಕೃಷ್ಣ
ಸಿ) ಕಾವೇರಿ ಡಿ) ನರ್ಮದಾ
ಉತ್ತರ: ಬಿ)ಕೃಷ್ಣ

ಟಿಪ್ಪಣಿ: ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಮುಸಿ ನದಿಯ ಪುನರುಜ್ಜೀವನ ಯೋಜನೆಯ ವಿರುದ್ಧದ ಅರ್ಜಿಯನ್ನು ವಜಾಗೊಳಿಸಿತು, ಪ್ರಮುಖ ಕಾನೂನು ಅಡಚಣೆಯನ್ನು ತೆರವುಗೊಳಿಸಿತು. ಈ ಯೋಜನೆಯು ಕಲುಷಿತಗೊಂಡ ಮುಸಿ ನದಿಯನ್ನು ಪುನರುಜ್ಜೀವನಗೊಳಿಸುವ ಮತ್ತು ಅದನ್ನು ಪರಿಸರ, ಚಲನಶೀಲತೆ, ಪರಂಪರೆ ಮತ್ತು ಆರ್ಥಿಕ ಕಾರಿಡಾರ್ ಆಗಿ ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದೆ. ಮುಸಿ ನದಿ (ಮುಚುಕುಂದ ಎಂದೂ ಕರೆಯುತ್ತಾರೆ) ಕೃಷ್ಣಾ ನದಿಯ ಎಡದಂಡೆಯ ಉಪನದಿಯಾಗಿದೆ. ಇದು ವಿಕಾರಾಬಾದ್ ಬಳಿಯ ಅನಂತಗಿರಿ ಬೆಟ್ಟಗಳಿಂದ ಹುಟ್ಟುತ್ತದೆ ಮತ್ತು ಮೂಸಾ ಮತ್ತು ಎಸ್ಸಿ ಹೊಳೆಗಳ ಸಂಗಮದಿಂದ ರೂಪುಗೊಳ್ಳುತ್ತದೆ.

4. ಭಾರತದಲ್ಲಿ ಇತ್ತೀಚೆಗೆ ಅನುಮೋದಿಸಲಾದ ಕ್ಡೆಂಗಾ ಲಸಿಕೆಯನ್ನು ಯಾವ ರೋಗವನ್ನು ತಡೆಗಟ್ಟಲು ಬಳಸಲಾಗುತ್ತದೆ?
ಎ) ಡೆಂಗ್ಯೂ ಬಿ) ಜಿಕಾ
ಸಿ) ಮಲೇರಿಯಾ ಡಿ) ಟೈಫಾಯಿಡ್
ಉತ್ತರ:ಎ)ಡೆಂಗ್ಯೂ

ಟಿಪ್ಪಣಿ: ಭಾರತದ ಔಷಧ ನಿಯಂತ್ರಕ ಜನರಲ್ (DCGI)4-60 ವರ್ಷ ವಯಸ್ಸಿನ ವ್ಯಕ್ತಿಗಳಿಗೆ ಕ್ಯೂಡೆಂಗಾವನ್ನು ಅನುಮೋದಿಸಿದ್ದಾರೆ, ಇದು ಭಾರತದ ಮೊದಲ ಡೆಂಗ್ಯೂ ಲಸಿಕೆಯಾಗಿದೆ. ಕ್ಯೂಡೆಂಗಾ ಎಂಬುದು ಜಪಾನ್‌ನ ಟಕೆಡಾ ಫಾರ್ಮಾಸ್ಯುಟಿಕಲ್ ಅಭಿವೃದ್ಧಿಪಡಿಸಿದ ಲೈವ್-ಅಟೆನ್ಯೂಯೇಟೆಡ್, ಟೆಟ್ರಾವೇಲೆಂಟ್ ಲಸಿಕೆಯಾಗಿದೆ. ಇದು ಎಲ್ಲಾ ನಾಲ್ಕು ಡೆಂಗ್ಯೂ ವೈರಸ್ ಸೆರೋಟೈಪ್‌ಗಳನ್ನು (DENV-1 ರಿಂದ DENV-4) ಗುರಿಯಾಗಿಸುತ್ತದೆ, DENV-2 ವಿರುದ್ಧ ಪ್ರಬಲ ಪರಿಣಾಮಕಾರಿತ್ವವನ್ನು ಹೊಂದಿದೆ ಮತ್ತು DENV-3 ಮತ್ತು DENV-4 ವಿರುದ್ಧ ತುಲನಾತ್ಮಕವಾಗಿ ಕಡಿಮೆಯಾಗಿದೆ. ಇದಕ್ಕೆ ಪೂರ್ವ-ವ್ಯಾಕ್ಸಿನೇಷನ್ ಸ್ಕ್ರೀನಿಂಗ್ ಅಗತ್ಯವಿಲ್ಲ ಮತ್ತು ಎರಡು ಡೋಸ್‌ಗಳಲ್ಲಿ ನೀಡಲಾಗುತ್ತದೆ, ಮೂರು ತಿಂಗಳ ಅಂತರದಲ್ಲಿ. ಲಸಿಕೆ ತೀವ್ರವಾದ ಡೆಂಗ್ಯೂ ವಿರುದ್ಧ ಬಲವಾದ ರಕ್ಷಣೆ ನೀಡುತ್ತದೆ ಮತ್ತು ಆಸ್ಪತ್ರೆಗೆ ದಾಖಲಾಗುವ ದರವನ್ನು ಕಡಿಮೆ ಮಾಡುತ್ತದೆ.

5. ಕ್ಷಯರೋಗ ಬ್ಯಾಕ್ಟೀರಿಯಾದಲ್ಲಿ (ಮೈಕೋಬ್ಯಾಕ್ಟೀರಿಯಂ ಕ್ಷಯ) ಹೊಸ ಜೀನ್ ನಿಯಂತ್ರಣ ಕಾರ್ಯವಿಧಾನವನ್ನು ಯಾವ ಸಂಸ್ಥೆಯ ವಿಜ್ಞಾನಿಗಳು ಕಂಡುಹಿಡಿದರು?
ಎ) ಐಐಟಿ ದೆಹಲಿ ಬಿ) ಎಐಐಎಂಎಸ್ ದೆಹಲಿ
ಸಿ) ಬೋಸ್ ಸಂಸ್ಥೆ ಡಿ) ಐಐಎಸ್ಸಿ ಬೆಂಗಳೂರು
ಉತ್ತರ: ಸಿ)ಬೋಸ್ ಸಂಸ್ಥೆ

ಟಿಪ್ಪಣಿ: ಬೋಸ್ ಸಂಸ್ಥೆಯ ವಿಜ್ಞಾನಿಗಳು ಕ್ಷಯ ರೋಗ ಬ್ಯಾಕ್ಟೀರಿಯಾದಲ್ಲಿ (ಮೈಕೋಬ್ಯಾಕ್ಟೀರಿಯಂ ಕ್ಷಯ) ಹೊಸ ಜೀನ್ ನಿಯಂತ್ರಣ ಕಾರ್ಯವಿಧಾನವನ್ನು ಕಂಡುಹಿಡಿದರು. ಪ್ರತಿಲೇಖನವು ಪ್ರೋಟೀನ್ ಸಂಶ್ಲೇಷಣೆಗಾಗಿ ಆರ್‌ಎನ್‌ಎ ಪಾಲಿಮರೇಸ್ (ಆರ್‌ಎನ್‌ಎಪಿ) ಮೂಲಕ ಡಿಎನ್‌ಎಯನ್ನು ಆರ್‌ಎನ್‌ಎಗೆ ನಕಲಿಸುವ ಪ್ರಕ್ರಿಯೆಯಾಗಿದೆ. ಹಿಂದೆ, ಬ್ಯಾಕ್ಟೀರಿಯಾಗಳು ಸಿಗ್ಮಾ ಚಕ್ರವನ್ನು ಅನುಸರಿಸುತ್ತವೆ ಎಂದು ನಂಬಲಾಗಿತ್ತು, ಅಲ್ಲಿ ಸಿಗ್ಮಾ ಅಂಶವು ಪ್ರತಿಲೇಖನವನ್ನು ಪ್ರಾರಂಭಿಸಲು ಆರ್‌ಎನ್‌ಎಪಿಯನ್ನು ಬಂಧಿಸುತ್ತದೆ ಮತ್ತು ನಂತರ ಬೇರ್ಪಡುತ್ತದೆ. ಟಿಬಿ ಬ್ಯಾಕ್ಟೀರಿಯಾದಲ್ಲಿ, ಸಿಗ್ಮಾ ಅಂಶ ಪ್ರತಿಲೇಖನದ ಉದ್ದಕ್ಕೂ ಆರ್‌ಎನ್‌ಎಪಿಗೆ ನಿರಂತರವಾಗಿ ಲಗತ್ತಿಸಲಾಗಿದೆ ಎಂದು ಅಧ್ಯಯನವು ಕಂಡುಹಿಡಿದಿದೆ. ಈ ನಿರಂತರ ಬಂಧನವು ಬದುಕುಳಿಯುವ ಜೀನ್ ಗಳನ್ನು ಸಕ್ರಿಯಗೊಳಿಸಲು ಸಹಾಯ ಮಾಡುತ್ತದೆ, ಬ್ಯಾಕ್ಟೀರಿಯಾವು ಮಾನವ ದೇಹದೊಳಗಿನ ಪ್ರತಿ ಕೂಲ ಪರಿಸ್ಥಿತಿಗಳಲ್ಲಿ ಉಳಿಯಲು ಅನುವು ಮಾಡಿ ಕೊಡುತ್ತದೆ.

6. ಭಾರತೀಯ ಸಾಫ್ಟ್‌ಶೆಲ್ ಆಮೆ ಯಾವ ಪ್ರದೇಶಕ್ಕೆ ಸ್ಥಳೀಯವಾದ ಸಿಹಿನೀರಿನ ಆಮೆ ಜಾತಿಯಾಗಿದೆ?
ಎ)ದಕ್ಷಿಣ ಏಷ್ಯಾ ಬಿ)ದಕ್ಷಿಣ ಆಫ್ರಿಕಾ



ಸಿ)ಆಸ್ಟ್ರೇಲಿಯಾ ಡಿ)ಯುರೋಪ್
ಉತ್ತರ: ಎ)ದಕ್ಷಿಣ ಏಷ್ಯಾ

ಟಿಪ್ಪಣಿ: ಗ್ರೇಟರ್ ನೋಯ್ಡಾದ ಜಾರ್ಚಾದಲ್ಲಿ ಅಕ್ರಮ ವನ್ಯಜೀವಿ ವ್ಯಾಪಾರದಿಂದ 16 ಭಾರತೀಯ ಸಾಫ್ಟ್‌ಶೆಲ್ ಆಮೆಗಳನ್ನು ಪೊಲೀಸರು ರಕ್ಷಿಸಿದ್ದಾರೆ, ಇದು ನಡೆಯುತ್ತಿರುವ ಕಳ್ಳಸಾಗಣೆ ಕಾಳಜಿಗಳನ್ನು ಎತ್ತಿ ತೋರಿಸುತ್ತದೆ. ಭಾರತೀಯ ಸಾಫ್ಟ್‌ಶೆಲ್ ಆಮೆ ದಕ್ಷಿಣ ಏಷ್ಯಾಕ್ಕೆ ಸ್ಥಳೀಯವಾಗಿರುವ ಸಿಹಿ ನೀರಿನ ಆಮೆ ಪ್ರಭೇದವಾಗಿದೆ. ಅವು ನದಿಗಳು, ಕಾಲುವೆಗಳು, ಕೊಳಗಳು ಮತ್ತು ಸಿಹಿ ನೀರಿನ ವ್ಯವಸ್ಥೆಗಳಲ್ಲಿ ಕಂಡುಬರುತ್ತವೆ. ಅವು ಸಿಂಧೂ, ಗಂಗಾ ಮತ್ತು ಮಹಾನದಿಯಂತಹ ಕಂಡು ಬರುತ್ತವೆ. ಅವು ಬಹು ಭಾರತೀಯ ರಾಜ್ಯಗಳಲ್ಲಿ (ಉದಾ:ಅಸ್ಸಾಂ, ಬಿಹಾರ, ಉತ್ತರ ಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳ) ಮತ್ತು ಅಫ್ಘಾನಿಸ್ತಾನ, ಬಾಂಗ್ಲಾದೇಶ, ನೇಪಾಳ ಮತ್ತು ಪಾಕಿಸ್ತಾನದಲ್ಲಿಯೂ ಕಂಡುಬರುತ್ತವೆ.

ವಿಶ್ವದ ವಿಲಕ್ಷಣ ಪ್ರಾಣಿ

1. ಮನಾಟೀ: ಸಮುದ್ರದಲ್ಲಿ ಹೆಚ್ಚು ಸಮಯ ಕಳೆಯುವುದು ಮನಸ್ಸಿಗೆ ಏನನ್ನಾದರೂ ಮಾಡಬೇಕು, ಏಕೆಂದರೆ ಇತಿಹಾಸದುದ್ದಕ್ಕೂ ನಾವಿಕರು



ದೊಡ್ಡ, ನಿಧಾನವಾಗಿ ಚಲಿಸುವ, ಜಲಚರ ಸಸ್ತನಿಗಳನ್ನು 'ಸಮುದ್ರದ ಮಹಿಳೆಯರು' ಅಥವಾ ಮತ್ಸ್ಯಕನ್ಯೆಯರು ಎಂದು ತಪ್ಪಾಗಿ ಭಾವಿಸಿದ್ದಾರೆ. ಸಮುದ್ರ ಹಸುಗಳು ಎಂದೂ ಕರೆಯಲ್ಪಡುವ ಈ ಸಸ್ಯಾಹಾರಿ ಹಲ್ಕಿಂಗ್ ಜೀವಿಗಳು ಮುಖ್ಯವಾಗಿ ಸಮುದ್ರ ಹುಲ್ಲನ್ನು ತಿನ್ನುತ್ತವೆ. ಅವು ಚಪ್ಪಟೆಯಾದ, ಪ್ಯಾಡಲ್-ಆಕಾರದ ಬಾಲವನ್ನು ಹೊಂದಿರುತ್ತವೆ ಮತ್ತು ಪ್ರತಿ ಕೆಲವು ನಿಮಿಷಗಳಿಗೊಮ್ಮೆ ಗಾಳಿಗಾಗಿ ಮೇಲಕ್ಕೆ ಬರುತ್ತವೆ.

ಎಲ್ಲಿ ನೋಡಬೇಕು? ಫ್ಲೋರಿಡಾದ ಕ್ರಿಸ್ಟಲ್ ನದಿ ಪ್ರಸಿದ್ಧ ಹಾಟ್‌ಸ್ಪಾಟ್ ಆಗಿದ್ದು, ಮನಾಟೀ-ಸ್ಪಾಟಿಂಗ್ ಪ್ರವಾಸಗಳು ಮತ್ತು ಅವುಗಳೊಂದಿಗೆ ಸ್ನಾರ್ಕೆಲ್ ಮಾಡುವ ಅವಕಾಶವಿದೆ. ಬೆಲೀಜ್ ಮನಾಟೀಗಳೊಂದಿಗೆ ಸಮಯ ಕಳೆಯಲು ಉತ್ತಮ ಅವಕಾಶಗಳನ್ನು ಹೊಂದಿದೆ ಎಂದು ತಿಳಿದು ಬಂದಿದೆ, ಇವು ಕೋಸ್ಟಾ ರಿಕಾ, ಮೆಕ್ಸಿಕೊ ಮತ್ತು ಜಮೈಕಾದಲ್ಲಿಯೂ ಕಂಡುಬರುತ್ತವೆ. ಮನಾಟೀಗಳನ್ನು ತಮ್ಮ ಸೋದರಸಂಬಂಧಿಗಳಾದ ಡುಗಾಂಗ್‌ಗಳೊಂದಿಗೆ ಗೊಂದಲಗೊಳಿಸಬಾರದು, ಇದು ಆಸ್ಟ್ರೇಲಿಯಾದ ಗ್ರೇಟ್ ಬ್ಯಾರಿಯರ್ ರೀಫ್, ಥೈಲ್ಯಾಂಡ್ ಮತ್ತು ಇತರೆಡೆಗಳಲ್ಲಿ ಕಂಡುಬರುವ ಮತ್ತೊಂದು ಸಮುದ್ರ ಹಸುವಿನ ಜಾತಿಯಾಗಿದೆ.

2. ಟಾರ್ಸಿಯರ್: ಟಾರ್ಸಿಯರ್ ಒಂದು ಪ್ರಾಣಿಯಾಗಿದ್ದು, ಅದು 'ತಮ್ಮ ಹೊಟ್ಟೆಗಿಂತ ದೊಡ್ಡ ಕಣ್ಣುಗಳು' ಎಂಬ ಪದಗುಚ್ಛವನ್ನು ಅಕ್ಷರಶಃ ಸವಾಲಾಗಿ ತೆಗೆದುಕೊಳ್ಳುತ್ತಿದೆ. ಚಿಕ್ಕ, ಜಿಗಿಯುವ ಪ್ರೈಮೇಟ್‌ಗಳು ಬೃಹತ್ ಕಣ್ಣುಗಳು, ಉದ್ದವಾದ, ತೆಳುವಾದ ಅನ್ಯಲೋಕದ ಬೆರಳುಗಳು ಮತ್ತು ದಿ ಎಕ್ಸಾರ್ಸಿಸ್ಟ್‌ನ ರಿಮೇಕ್‌ನಲ್ಲಿ ಒಂದು ಪಾತ್ರಕ್ಕಾಗಿ ಆಡಿಷನ್ ಮಾಡುತ್ತಿರುವಂತೆ ತಿರುಗುವ ತಲೆಗಳನ್ನು ಹೊಂದಿವೆ.



ದುಃಖಕರವೆಂದರೆ, ಅವುಗಳ ಮುದ್ದಾದತನವು ವರ್ಷಗಳಲ್ಲಿ ಸಾಕುಪ್ರಾಣಿಗಳಾಗಿ ಅಥವಾ ಪ್ರವಾಸಿ ಫೋಟೋಗಳಿಗೆ ಪೋಸ್ ನೀಡಲು ಒತ್ತಾಯಿಸಲ್ಪಟ್ಟ ಪರಿಕರಗಳಾಗಿ ಜನಪ್ರಿಯಗೊಳಿಸಿದೆ, ಇದು ಅವುಗಳಿಗೆ ತೊಂದರೆ ಉಂಟುಮಾಡಿದೆ.

ಎಲ್ಲಿ ನೋಡಬೇಕು? ಇಂಟರ್‌ನ್ಯಾಷನಲ್ ಯೂನಿಯನ್ ಫಾರ್‌ಕನ್ಸರ್ವೇಶನ್ ಆಫ್ ನೇಚರ್ (ಐಯುಸಿಎನ್) ಫಿಲಿಪ್ಪೈನ್ಸ್, ಮಲೇಷ್ಯಾ ಮತ್ತು ಇಂಡೋನೇಷ್ಯಾ ಸೇರಿದಂತೆ ಆಗ್ನೇಯ ಏಷ್ಯಾದಾದ್ಯಂತ ಒಂದು ಡಜನ್‌ಗಿಂತಲೂ ಹೆಚ್ಚು ಜಾತಿಯ ಟಾರ್ಸಿಯರ್‌ಗಳನ್ನು ಪಟ್ಟಿ ಮಾಡಿದೆ, ಅವುಗಳಲ್ಲಿ ಹಲವು ಅಳಿವಿನಂಚಿನಲ್ಲಿರುವ ಅಥವಾ ತೀವ್ರವಾಗಿ ಅಳಿವಿನಂಚಿನಲ್ಲಿರುವವು. ಫಿಲಿಪ್ಪೈನ್ಸ್‌ನ ಬೋಹೋಲ್ ಟಾರ್ಸಿಯರ್‌ಗಳನ್ನು ನೋಡಲು ಉತ್ತಮ ಸ್ಥಳವಾಗಿದೆ; ಟಾರ್ಸಿಯರ್ ಸಂರಕ್ಷಣಾ ಪ್ರದೇಶದಂತಹ ಸ್ಥಳೀಯ ಅಭಯಾರಣ್ಯಗಳಲ್ಲಿ ಒಂದನ್ನು ಪ್ರಯತ್ನಿಸಿ.

3. ಕಾಕಾಪೋ: ನ್ಯೂಜಿಲೆಂಡ್‌ನ ಪಕ್ಷಿಗಳು ನೆಲವನ್ನು ಪ್ರೀತಿಸಬೇಕು. ಗೂಬೆ ಗಿಳಿ ಎಂದೂ ಕರೆಯಲ್ಪಡುವ ದುಂಡಗಿನ ಮುಖದ ಕಾಕಾಪೋ, ಸ್ಥಳೀಯ ಹಾರಲಾರದ ಪಕ್ಷಿಗಳ ಮತ್ತೊಂದು ಜಾತಿಯಾಗಿದ್ದು, ಭೂಮಿಯ ಮೇಲಿನ ಏಕೈಕ ಹಾರಲಾರದ ಗಿಳಿಯಾಗಿದೆ. ಇದರ ರೆಕ್ಕೆಗಳು ಸಮತೋಲನಕ್ಕೆ ಸಹಾಯ ಮಾಡುತ್ತವೆ ಮತ್ತು ಎತ್ತರದ ಮರಗಳಿಂದ ಕಾಡಿನ ನೆಲಕ್ಕೆ ಹಾರುವಾಗ 'ಪ್ಯಾರಾಚೂಟ್'



ಮಾಡಲು ಸಹಾಯ ಮಾಡುತ್ತವೆ. ಪಕ್ಷಿಗಳು ಬೆದರಿಕೆಗೆ ಒಳಗಾದಾಗ ಮುದುಡಿಕೊಳ್ಳುತ್ತವೆ, ಕಾಡಿನ ಹಸಿರಿನಲ್ಲಿ ಬೆರೆಯುತ್ತವೆ ಮತ್ತು ಪರಭಕ್ಷಕಗಳಿಂದ ತಪ್ಪಿಸಿಕೊಳ್ಳುತ್ತವೆ ಎಂದು ತಿಳಿದುಬಂದಿದೆ. ಮಾವೊರಿ ಮತ್ತು ಯುರೋಪಿಯನ್ ವಸಾಹತುಗಾರರು ಪಕ್ಷಿಗಳನ್ನು ಸಾಕುಪ್ರಾಣಿಗಳಾಗಿ ಇಟ್ಟುಕೊಳ್ಳುತ್ತಿದ್ದರು. ಆವಾಸಸ್ಥಾನ ನಷ್ಟ ಮತ್ತು ಪರಭಕ್ಷಕ ಆಕ್ರಮಣಕಾರಿ ಜಾತಿಗಳಿಂದಾಗಿ ಅವುಗಳನ್ನು ಈಗ ತೀವ್ರವಾಗಿ ಅಳಿವಿನಂಚಿನಲ್ಲಿರುವವು ಎಂದು ಪಟ್ಟಿ ಮಾಡಲಾಗಿದೆ.

ಎಲ್ಲಿ ನೋಡಬೇಕು? ಉಳಿದಿರುವ ಕಾಕಾಪೋಗಳ ಸಣ್ಣ ಸಂಖ್ಯೆಯು ಕೆಲವು ಪರಭಕ್ಷಕ-ಮುಕ್ತ, ಅಭಯಾರಣ್ಯ ದ್ವೀಪಗಳಲ್ಲಿ, ನಿಕಟ ಮೇಲ್ವಿಚಾರಣೆಯಲ್ಲಿ, ಹೆಚ್ಚಾಗಿ ಹೌರಾಕಿ ಕೊಲ್ಲಿಯ ಸ್ಟೀವರ್ಟ್ ದ್ವೀಪ, ಫಿಯಾರ್ಡ್‌ಲ್ಯಾಂಡ್ ಮತ್ತು ಲಿಟಲ್ ಬ್ಯಾರಿಯರ್ ದ್ವೀಪದ ಬಳಿ ಅಸ್ತಿತ್ವದಲ್ಲಿದೆ. ಸಂರಕ್ಷಿತ ಆವಾಸಸ್ಥಾನಗಳ ಮೇಲಿನ ನಿರ್ಬಂಧಗಳಿಂದಾಗಿ ಸಾರ್ವಜನಿಕರು ಪ್ರಸ್ತುತ ಈ ಜಾತಿಯನ್ನು ಕಾಡಿನಲ್ಲಿ ವೀಕ್ಷಿಸಲು ಸಾಧ್ಯವಾಗುತ್ತಿಲ್ಲ.

ಗಾದೆ ಮಾತುಗಳು

1. ಆಳಾಗಿ ದುಡಿ, ಅರಸಾಗಿ ಉಣ್ಣು

ಗಾದೆಗಳು ಗ್ರಾಮೀಣ ಜನರ ಅನುಭವದ ದಾರಿದೀಪಗಳು, ಯಾರು ಆಳು ಮಾಡುವ ಕೆಲಸವನ್ನು ಬಲ್ಲನೋ ಆತನು ಅರಸಾಗಿ ಯಶಸ್ವಿಯಾಗಿ ದುಡಿಯಬಲ್ಲನು ಮತ್ತು ಉತ್ತಮ ಫಲ ಅನುಭವಿಸಬಲ್ಲನು ಎಂಬುದು ಈ ಗಾದೆಯ ಮಾತಿನ ಅರ್ಥವೆನಿಸಿದೆ.

'ಶ್ರಮ ಏವ ಜಯತೆ' ಎಂಬ ಹೇಳಿಕೆಯಂತೆ ರೈತನಾದವನು ವರ್ಷದ ಪ್ರಾರಂಭದಿಂದಲೇ ನಿರಂತರವಾಗಿ ವ್ಯವಸಾಯದ ಕೆಲಸವನ್ನು ಆಳಿನಂತೆ ದುಡಿಯುತ್ತಾ ಬಂದು, ಕಾಲಕಾಲಕ್ಕೆ ಬೆಳೆಯ ನಡುವಿನ ಕಳೆಯನ್ನು ತೆಗೆದು, ಉತ್ತಮ ಗೊಬ್ಬರವನ್ನು ನೀಡುತ್ತಾ, ಅವಶ್ಯಕತೆ ಇದ್ದಲ್ಲಿ ಕ್ರಿಮಿನಾಶಕಗಳನ್ನು ಸಿಂಪಡಿಸುತ್ತಾ ವರ್ಷವಿಡೀ ದುಡಿಯುತ್ತಾ ಬಂದರೆ ಆತನಿಗೆ ವರ್ಷದ ಕೊನೆ ಯಲ್ಲಿ ಉತ್ತಮ ಫಸಲು ಕೈಗೆಟುಕುವುದು. ಆಗ ಆತನು ಧಾನ್ಯವನ್ನು ಮುಂದಿನ ವರ್ಷವಿಡೀ ತನ್ನ ಕುಟುಂಬದ ನಿರ್ವಹಣೆಗೆ ಬಳಸಬಲ್ಲ. ತಾನೂ ಸುಖವಾಗಿ ಉಣಬಲ್ಲ ಮತ್ತು ತನ್ನವರಿಗೂ ಸುಖ ವಾಗಿ ಉಣಿಸಿ ನೀಡಬಲ್ಲ ಹಾಗೂ ಸಂತೋಷದ ಜೀವನ ನಡೆಸಬಲ್ಲ.

2. ಬೆಳೆಯುವ ಸಿರಿ ಮೊಳಕೆಯಲ್ಲಿ

ಮಹಾತ್ಮರ ಜೀವನ ಚರಿತ್ರೆಯನ್ನು ಓದಿದಾಗ, ಅವರ ಬಾಲ್ಯದ ಘಟನೆಗಳು ರೋಮಾಂಚಕರವಾಗಿರುತ್ತವೆ ಗಾಂಧೀಜಿ ಒಂದು ಸುಳ್ಳು ಹೇಳಿದರು. ತನ್ನ ತಂದೆಯ ಬಳಿ ಹೋಗಿ ತಪ್ಪಾಯ್ತು ಎಂದು ತಪ್ಪೊಪ್ಪಿಗೆ ಪತ್ರ ಬರೆದುಕೊಟ್ಟರು. ಮುಂದೆ ಎಂದಿಗೂ ಅವರು ಸುಳ್ಳು ಹೇಳಲಿಲ್ಲ, ಸತ್ಯಕ್ಕಾಗಿಯೇ ಹೋರಾಡಿದರು. ಚಿಕ್ಕಂದಿನಿಂದಲೇ ಅವರಲ್ಲಿ ಸತ್ಯಕ್ಕಾಗಿ ಹೋರಾ ಡುವ ಬುದ್ಧಿ ಇತ್ತು, ಅವರು ದೊಡ್ಡವರಾದಂತೆ ಅದು ಬೆಳೆಯಿತು. ಆ ಪ್ರಸಂಗದಲ್ಲಿ ಹೊಳೆಯುವ ಗಾದೆ. ಬೆಳೆಯುವ ಪೈರು ಮೊಳಕೆಯಲ್ಲೇ ಕಾಣುತ್ತದೆ. ಹೌದು, ಮೊಳಕೆಯಲ್ಲಿಯೇ ಕೊಳೆತ ಪೈರು ದೊಡ್ಡದಾಗಿ ಬೆಳೆಯಲಾರದು. ಚಿಕ್ಕಂದಿನಲ್ಲಿ ಪುಷ್ಟವಾಗಿ ಬೆಳೆದ ಮೊಳಕೆ, ಚೆನ್ನಾಗಿಯೇ ಬೆಳೆದು ಒಳ್ಳೆಯ ಬೆಳೆಯನ್ನು ಕೊಡುತ್ತದೆ. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?' ಈ ಮಾತು ಮಕ್ಕಳಿಗೆ ಒಳ್ಳೆಯ ಅಭ್ಯಾಸ, ಹವ್ಯಾಸಗಳನ್ನು ಚಿಕ್ಕಂದಿನಿಂದಲೇ ಹೇಳಿಕೊಡಬೇಕೆಂಬ ಪ್ರಾಯೋಗಿಕ ಸಲಹೆಯನ್ನು ನೀಡುತ್ತದೆ.

ಮೊದಲು ಚೆನ್ನಾಗಿದ್ದರೆ, ಕೊನೆಯೂ ಚೆನ್ನಾಗಿರುತ್ತದೆ ಎಂಬ ಅರ್ಥ ಬರುವ ಸಂದರ್ಭಗಳಲ್ಲಿ ಮಾತ್ರ ಈ ಗಾದೆಯನ್ನು ಬಳಸಬಹುದು. ಇದೇ ಅರ್ಥಕ್ಕೆ ವಿರುದ್ಧವಾಗಿ ಅರ್ಥಕೊಡುವ ಗಾದೆಯಿದೆ. 'ಅಗಸ ಮೊದಲಲ್ಲಿ ಗೋಣಿ ಯನ್ನು ಎತ್ತೆತ್ತಿ ಒಗೆದ' ಮೊದಮೊದಲಲ್ಲಿ ಹೆಚ್ಚಿನ ಉತ್ಸಾಹ ದಿಂದ ಚೆನ್ನಾಗಿ ಕೆಲಸ ಮಾಡುತ್ತಾರೆ, ಬರಬರುತ್ತಾ ಕೆಲಸದಲ್ಲಿ ಆಸಕ್ತಿ ಕಡಿಮೆಯಾಗುತ್ತದೆ. 'ರಾಯರ ಕುದುರೆ ಕತ್ತೆಯಾಯ್ತು' ಮಂತಾದ ಮಾತುಗಳು ಮೂಲದ ಗಾದೆಯ ತಾತ್ಪರ್ಯಕ್ಕೆ ವಿರುದ್ಧವಾಗಿದೆ. ಮೊದಲು ಚೆನ್ನಾಗಿದ್ದ ಮಾತ್ರಕ್ಕೆ ಅದು ಕೊನೆಯವರೆಗೂ ಚೆನ್ನಾಗಿರುತ್ತದೆ ಎಂದು ಹೇಳಲು ಆಗದು.

3. ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು.

ಸ್ವಂತ ಕಣ್ಣುಗಳಿಂದ ನೋಡಿದರೂ ಅದು ನಿಜವೋ ಭ್ರಾಂತಿಯೋ ಎಂದು ಮತ್ತೊಮ್ಮೆ ಪರಿಶೀಲಿಸಬೇಕು. ಹಾಗೆ ಪರೀಕ್ಷಿಸದೇ ಕಂಡುದನ್ನು ಒಮ್ಮೆಗೇ ನಂಬಬಾರದು ಎಂದು ಈ ಗಾದೆ ಎಚ್ಚರಿಸುತ್ತದೆ.

ಯಾವುದೇ ಯೋಚನೆಯಲ್ಲೋ, ಮಾತನಾಡುತ್ತಲೋ ನಡೆಯುತ್ತಿರುವಾಗ ಹಾದಿಯಲ್ಲಿ ಬಿದ್ದಿರುವ ಹಗ್ಗ ವನ್ನು ಕಂಡು ಹಾವೆಂದು ಹೆದರುವುದಿದೆ. ಅದನ್ನು ಪರೀಕ್ಷಿಸಿದಾಗಲೇ ಅದು ಹಗ್ಗವೆಂದು ತಿಳಿದು ಹೆದರಿಕೆ ಹೋಗುತ್ತದೆ. ಮರಳುಗಾಡಿನಲ್ಲಿ ದಾರಿ ಸಾಗುವಾಗ, ಬಾಯಾರಿಕೆಯಾಗಿ ನೀರನ್ನು ಬಯಸಿದಾಗ, ದೂರದಲ್ಲೆಲ್ಲೋ ನೀರಿನ ನೆಲೆ ಕಂಡಂತಾಗಿ, ಮುಂದೆ ಮುಂದೆ ಹೋದಂತೆಲ್ಲಾ ಅದೂ ಇನ್ನಷ್ಟು ಮುಂದಿರುವಂತೆ ತೋರುವ ಭ್ರಮೆಗೆ ಒಳಗಾಗುವುದಿದೆ. ಹೀಗೆ ನೋಡಿದ್ದು ಸುಳ್ಳಾಗುವಂತೆ ಹೇಳಿದ್ದು, ಕೇಳಿದ್ದು ಸುಳ್ಳಾಗಬಹುದು. ಅದುದರಿಂದ ನೋಡಿದುದನ್ನು ಬೇರೆಯವರು ಹೇಳಿದುದನ್ನು ಬೇರೆಯವರಿಂದ ಕೇಳಿದುದನ್ನು ಪರಿಶೀಲಿಸದೇ, ಪರೀಕ್ಷಿಸದೇ ಒಮ್ಮೆಲೇ ನಂಬಬಾರದು. ಕೆಲವು ಸಂದರ್ಭಗಳಲ್ಲಿ ಕೇಳಿದ ಸುದ್ದಿಯೂ ಸುಳ್ಳಾಗಿರುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ. ಎಲ್ಲೋ ಹುಟ್ಟಿದ ಯಾವುದೋ ಸುದ್ದಿ ಅಂತೆ-ಕಂತೆಗಳು ಸೇರಿ ಇನ್ನೇನೂ ಆಗಿರುತ್ತದೆ. ಇಲಿ ಹೋಯಿತು ಎನ್ನುವುದು ಹುಲಿಯೇ ಹೋಯಿತು ಎನ್ನುವಂತೆ ದೊಡ್ಡ ಸುದ್ದಿಯಾಗಿ ಹಬ್ಬುತ್ತದೆ.

ಹಿತ್ತಾಳೆಯ ಗಟ್ಟಿಗಳನ್ನು ತೋರಿಸಿ. ಚಿನ್ನವೆಂದು ಹೇಳಿ ಮೋಸಗೊಳಿಸುವವರಿದ್ದಾರೆ. ನಕಲಿ ನೋಟುಗಳಂತೂ ನಿಜವಾದ ನೋಟುಗಳ ತಲೆಯ ಮೇಲೆ ಹೊಡೆಯುವಂತೆ ಚಲಾವಣೆಯಾಗುತ್ತಿವೆ. ಬೆಲೆಬಾಳುವ, ಮಾರುಕಟ್ಟೆಯಲ್ಲಿ ಜನಪ್ರಿಯವಾದ ಯಾವುದೇ ವಸ್ತುವನ್ನಾದರೂ ನೋಡಲು ಅದರಂತೆಯೇ ಕಾಣಿಸುವ ಹಾಗೆ ನಕಲಿವಸ್ತುಗಳನ್ನು ತಯಾರಿಸಿ ಗ್ರಾಹಕರನ್ನು ಮೋಸಪಡಿಸುವ ನಿಪುಣರು ನಮ್ಮಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ಮಾತಿನಲ್ಲಿ ಮೋಸ ಮಾಡುವ ಹೊಸಹೊಸ ತಂತ್ರಗಳನ್ನು ವಂಚಕರು ಇತ್ತೀಚೆಗೆ ಅನ್ವೇಷಿಸುತ್ತಿದ್ದಾರೆ. ಪೊಲೀಸರ ವೇಷದಲ್ಲಿ ಬಂದು ದೇವಾಲಯಕ್ಕೋ, ಅಂಗಡಿಗೋ ಹೋಗಿ ಬರುತ್ತಿರುವ ಮಹಿಳೆಯರಿಗೆ, ಅವರು ಹೋಗುವ ದಾರಿಯಲ್ಲಿ ಕೊಲೆಯಾಗಿದೆಯೆಂದು ಹೆದರಿಕೆ ಹುಟ್ಟಿಸುವುದು, ಅವರು ತೊಟ್ಟ ಆಭರಣಗಳನ್ನು ಕಳಚುವಂತೆ ಮಾಡಿ, ಪೊಟ್ಟಣ ಕಟ್ಟಿ, ಅವರ ಕೈಚೀಲಕ್ಕೆ ಹಾಕಿದಂತೆ ತೋರಿಸಿ, ಉಪಕಾರ ಮಾಡಿದಂತೆ ನಟಿಸುವುದು ನಗರದಲ್ಲಿ ಆಗಾಗ ನಡೆಯುತ್ತಲೇ ಇದೆ. ಮನೆಗೆ ಹೋದ ಮಹಿಳೆ ಪೊಟ್ಟಣ ತೆರೆದಾಗ ಅದರಲ್ಲಿ ಆಭರಣಗಳ ಬದಲು ಕಲ್ಲುಚೂರುಗಳಿರುವುದನ್ನು ಕಂಡು ದುಃಖಿ, ಗಾಬರಿಗೊಳಗಾಗಿ ಪೊಲೀಸರಿಗೆ ದೂರು ಕೊಡುತ್ತಿರುವ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲೇ ಇರುತ್ತದೆ. ಹಾಗಿದ್ದರೂ ಮಹಿಳೆಯರು ಮೋಸಹೋಗುತ್ತಲೇ ಇದ್ದಾರೆ. ಕೇಳಿದುದನ್ನು ಹೇಳಿದುದನ್ನು ನೋಡಿದುದನ್ನು ಪ್ರಮಾಣಿಸದಿರುವುದರಿಂದಲೇ ಹೀಗಾಗುತ್ತಿರುತ್ತದೆ.

4. ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ.

ಪ್ರಪಂಚದ ಪ್ರೇಮವನ್ನೇ ಗೆದ್ದಿರುವವಳು ತಾಯಿ; ಪ್ರೇಮ ಜಗತ್ತಿನ ಸಾಕಾರ ಮೂರ್ತಿ ತಾಯಿಯಿಲ್ಲದ ಮಗುವಿಗೆ ತಬ್ಬಲಿ ಎನ್ನುವ ಪದ ಹೊಂದುವಂತೆ ತಂದೆಯಿಲ್ಲದ ಮಗುವಿಗೆ ಹೊಂದುವುದಿಲ್ಲ, ಬೇರೆ ಎಷ್ಟೇ ನೆಂಟರಿದ್ದರೂ, ಆಸ್ತಿಪಾಸ್ತಿ ಹಣವಿದ್ದರೂ ಮಗುವಿಗೆ ತಾಯಿಯಿದ್ದಂತೆ ಸಮಾಧಾನವಿರುವುದಿಲ್ಲ, ಬೇರೆ ಯಾವ ಸಂಬಂಧಿಕರನ್ನಾದರೂ ಎಷ್ಟು ಜನರನ್ನಾದರೂ ಪಡೆಯಬಹುದು. ಆದರೆ ತಾಯಿಯನ್ನು ಮಾತ್ರ ಒಂದು ಜನ್ಮದಲ್ಲಿ ಒಂದೇ ಸಲ ನಾವು ಪಡೆಯುವುದು ಸಾಧ್ಯ.

ಉಪ್ಪು ಇಲ್ಲದ ಅಡುಗೆ ಬೇರೆ ಯಾವ ವ್ಯಂಜನದಿಂದಲೂ ರುಚಿಸುವುದಿಲ್ಲ. ಬೇರೆ ವ್ಯಂಜನ ಪದಾರ್ಥಗಳ ಸಹಾಯವಿಲ್ಲದೆ ಕೇವಲ ಉಪ್ಪೊಂದಿದ್ದರೆ ಎಷ್ಟು ದಿನ ಬೇಕಾದರೂ ಆ ಅಡುಗೆಯಲ್ಲಿ ಜೀವನ ತಳ್ಳಬಹುದು. ಅಂತೆಯೇ ತಾಯಿಯೊಬ್ಬಳಿದ್ದರೆ ಇಡೀ ಜಗತ್ತನ್ನೇ ವಿರೋಧಿಸಿ ನಿಲ್ಲಬಹುದು. ಆ ಬಂಧುವಿಗಿಂತ ಬೇರೆ ಬಂಧು ನಮಗೆ ದೊರೆಯಲಾರದು. ತಾಯಿಯನ್ನು ಉಪ್ಪು ಅಲ್ಲದೆ, ನೀರಿಗೆ ಅಥವಾ ಗಾಳಿಗೆ ಮಾತ್ರ ಹೋಲಿಸಬಹುದು. ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ಗಾದೆಯೆಂದರೆ ತಾಯಿಗಿಂತ ಮಿಗಿಲಾದ ದೇವರಿಲ್ಲ. ಪ್ರಪಂಚದಲ್ಲಿ ಕೆಟ್ಟ ಮಗ ಇರಬಹುದು, ಆದರೆ ಕೆಟ್ಟ ತಾಯಿ ಮಾತ್ರ ಇರುವುದೇ ಇಲ್ಲ ಎಂದು ಶಂಕರಾಚಾರ್ಯರು ಹೇಳಿದ್ದಾರೆ.

5. ಉತ್ಸಾಹವೇ ಯೌವನ, ಚಿಂತೆಯೇ ಮುಪ್ಪು.

ಇದೊಂದು ಅನುಭವದ ನುಡಿ. ಯೌವನ ಮತ್ತು ಮುಪ್ಪುಗಳೆರಡೂ ನಮ್ಮ ಜೀವನದಲ್ಲಿ ಹಾದುಹೋಗುವ ಮುಖ್ಯ ಘಟ್ಟಗಳು, ಯೌವನ ಎಲ್ಲರಿಗೂ ಪ್ರಿಯವಾದುದು, ಮುಪ್ಪು ಯಾರಿಗೂ ಬೇಡವಾದುದು. ನಾವು ಚಿಕ್ಕವರೆಂದು ಗುರುತಿಸಿಕೊಳ್ಳಲು ಒದ್ದಾಡುತ್ತಿರುತ್ತೇವೆಯೇ ಹೊರತು, ವಯೋವೃದ್ಧರೆಂದು ತೋರಿಸಿಕೊಳ್ಳಲು ಬಯಸುವುದಿಲ್ಲ. ಇದು ರಾಷ್ಟ್ರ ಸೌಂದರ್ಯದ ಮಾತಾಯಿತು. ಆದರೆ ಕ್ರಿಯಾಶೀಲತೆಗೆ ಸಂಬಂಧಿಸಿದಂತೆ ಹೇಳುವುದಾದರೆ ಎಲ್ಲಿಯ ತನಕ ನಾವು ಜೀವನೋತ್ಸಾಹದಿಂದ ಬದುಕುತ್ತಿರುತ್ತೇವೆಯೋ ಅಲ್ಲಿಯವರೆಗೆ ನಾವು ಯೌವನಿಗರೆ, ಅದು ನಮ್ಮ ನಡತೆಯಲ್ಲಿ, ಚಟುವಟಿಕೆಯಲ್ಲಿ ಕ್ರಿಯೆಯಲ್ಲಿ ಎದ್ದು ಕಾಣುತ್ತಿರುತ್ತದೆ. ಗಾಂಧೀಜಿ ಮುದುಕರಾದರೂ ತಾವು ಯುವಕರೆಂದೇ ಕರೆದುಕೊಳ್ಳಲು ಕಾರಣ ಅವರಿಗಿದ್ದ 'ಯುವ ಮನಸ್ಸು'. ಇದು ಉತ್ಸಾಹಕ್ಕೆ ವಯಸ್ಸಿನ ಎಲ್ಲೆ-ಅಂತರಗಳಿಲ್ಲವೆಂಬುದನ್ನು ಸೂಚಿಸುತ್ತದೆ. ಚಿಂತೆಯು ಮನುಷ್ಯನನ್ನು ಮುಪ್ಪಿಗೆ ದೂಡುತ್ತದೆ. ಯೌವನಿಗರಾಗಿದ್ದು ಚಿಂತೆಯಲ್ಲಿ ಮುಳುಗಿದವರಿಗೆ ಮುಪ್ಪು ಬಾಧಿಸುತ್ತದೆ. ಬದುಕಿರುವಷ್ಟು ಕಾಲ ಸಂತೋಷದಿಂದ, ಜೀವನೋತ್ಸಾಹದಿಂದ ಬದುಕುವುದೇ ಮುಖ್ಯವೆಂಬುದನ್ನು ಜಾನಪದರು 'ಉತ್ಸಾಹವೇ ಯೌವನ, ಚಿಂತೆಯೇ ಮುಪ್ಪು' ಎಂಬುದರ ಮೂಲಕ ವಿವರಿಸಿದ್ದಾರೆ.

ಒಗಟುಗಳು

- ಬಿಳಿ ಸಾಮ್ರಾಜ್ಯದಲ್ಲಿ ಕಪ್ಪು ಪ್ರಜೆಗಳು.-ಸೀತ ಫಲ
- ಅಣ್ಣ ಅತ್ತರೆ ತಮ್ಮನೂ ಅಳುತ್ತಾನೆ.-ಕಣ್ಣು
- ಮನೆ ಮೇಲೆ ಮಲ್ಲಿಗೆ ಹೂವು.-ಮಂಜು
- ಹಾರಿದರೆ ಹನುಮಂತ ಕೂಗಿದರೆ ಶಂಖ.-ಕಪ್ಪೆ
- ನೋಡಿದರೆ ಕಲ್ಲು ನೀರು ಹಾಕಿದರೆ ಮಣ್ಣು.-ಸುಣ್ಣ
- ಸುದ್ದಿ ಸೂರಪ್ಪ ದೇಶವೆಲ್ಲಾ ಸುತ್ತಾಡ್ತಾನೆ.-ಪೋಸ್ಟ್ ಕಾರ್ಡ್
- ಬಿಳಿ ಕುದುರೆಗೆ ಹಸಿರು ಬಾಲ.-ಮೂಲಂಗಿ
- ಚಿಕ್ಕ ಬೆಟ್ಟದಲ್ಲಿ ಪುಟ್ಟ ಚಂದ್ರ.-ಕುಂಕುಮ
- ಬರೋದ ಕಂಡು ಕೈ ಒಡ್ತಾರೆ.-ಬಸ್
- ಹತ್ತಾರು ಮಕ್ಕಳ ತಂದೆ ಅದಕ್ಕೆ ತಲೆಯ ಮೇಲೆ ಜುಟ್ಟು-ಹುಂಜ
- ಹಸಿರು ಮುಖಕ್ಕೆ ವಿಪರೀತ ಕೋಪ , ಕೋಪ ಮಾಡಿಕೊಳ್ಳದೆ ನಾನ್ಯಾರೆಂದು ಹೇಳಿ?-ಮೆಣಸಿನಕಾಯಿ
- ಅಜ್ಜಿ ಗುದ್ದಿದರೆ ಮನೆಯೆಲ್ಲ ಮಕ್ಕಳು ಈಗ ಹೇಳಿ ನಾನ್ಯಾರು-ಬೆಳ್ಳುಳ್ಳಿ
- ಹಗಲಲ್ಲಿ ಮಾಯಾ ರಾತ್ರಿಯಲ್ಲಿ ಪ್ರತ್ಯಕ್ಷ ?ನಾನ್ಯಾರು ಹೇಳಿ?-ನಕ್ಷತ್ರ
- ಹಗ್ಗ ಹಾಸಿದೆ ಕೋಣ ಮಲಗಿದೆ-ಕುಂಬಳಕಾಯಿ, ಬಳ್ಳಿ
- ನನ್ನ ಕಂಡರೆ ಎಲ್ಲರು ಓದೀತಾರೆ -ಚೆಂಡು
- ಹಳ್ಳಿ ಗಡಿಯಾರ, ಒಳ್ಳೆ ಆಹಾರ-ಕೋಳಿ
- ನೀರು ಇರುತ್ತೆ ನದಿ ಅಲ್ಲ, ಬಾಗಿಲು ಇರುತ್ತೆ ಮನೆ ಅಲ್ಲ-ಕಣ್ಣು.
- ಬಲಗೈಯಲ್ಲಿ ಗೀತೆ ಎಡಗೈಯಲ್ಲಿ ರಾಟೆ ಹಿಡಿದಿದ್ದೆ ನಾನು ಯಾರು-ಗಾಂಧೀಜಿ
- ಬಾಯಲ್ಲಿ ಹಲ್ಲಿಲ್ಲ, ಮೈಯಲ್ಲಿ ಶಕ್ತಿ ಇಲ್ಲ, ತಲೆಯಲ್ಲಿ ಕೂದಲಿಲ್ಲ, ಆದ್ರೂ ಎಲ್ರುನ್ನು ಕಾಡತಿನಿ ನಾನ್ಯಾರು.-ಸೊಳ್ಳೆ
- ಅಕ್ಷರಗಳಿದ್ದರೂ ಪುಸ್ತಕವಲ್ಲ, ಸಿಂಹವಿದ್ದರೂ ಅರಣ್ಯವಲ್ಲ, ದುಂಡಾಗಿದ್ದರೂ ಚಕ್ರವಲ್ಲ, ನಾನ್ಯಾರು. -ನಾಣ್ಯ
- ಗಂಟೆ ಹೊಡೆಯುತ್ತಾನೆ ಪೂಜಾರಿ ಅಲ್ಲ, PAPER ಹರಿಯುತ್ತಾನೆ ಆದರೆ ಹುಚ್ಚನೂ ಅಲ್ಲ, ಹಣ ಕೇಳುತ್ತಾನೆ ಭಿಕ್ಷುಕ ಅಲ್ಲ - ಕಂಡಕ್ಟರ್
- ಹಿಡಿದರೆ ಹಿಡಿಯಷ್ಟು ಬಿಟ್ಟರೆ ಮನೆತುಂಬ-ದೀಪದ ಬೆಳಕು
- ಒಂದು ಕಾಲಿನ ಪಕ್ಷಿಗೆ ಒಂಭತ್ತು ರೆಕ್ಕೆ, ಒಂದೇ ಕಾಲಲಿ ನಿಂತು ನೂರಾರು ಮೊಟ್ಟೆ ಇಡುತ್ತದೆ-ಜೋಳದ ದಂಟು
- ಎತ್ತ ಹೋದರು ಕುತ್ತಿಗೆಗೆ ಕೈ ಹಾಕುತ್ತಾರೆ! ನಾನ್ಯಾರು?-ಸಾಲಿಗ್ರಾಮ
- ಕರಿ ಹುಡುಗನಿಗೆ ಬಿಳಿ ಟೋಪಿ - ಹೆಂಡದ ಮಡಿಕೆ
- ಬಿಳಿ ಆಕಾಶದಲ್ಲಿ ಕಪ್ಪು ನಕ್ಷತ್ರಗಳು, ಇದನ್ನು ನೋಡಲು ಜನ ಕಾದಿಹರು-ನಾಣ್ಯ
- ಗೋಡೆ ಗುದ್ದಪ್ಪ ನೀನಿದ್ದಲ್ಲಿ ನಿದ್ದೆ ಇಲ್ಲಪ್ಪ.-ತಿಗಣೆ
- ಕುದುರೆ ಬಾಲದಿಂದ ನೀರು ಕುಡಿಯುತ್ತದೆ-ಹೇನು











ಅಂಧೇರಿ ಪೂರ್ವದ ಬ್ಯಾಪ್ಟಿಸ್ಟ್‌ವಾಡಿ ಶ್ರೀ ಕ್ಷೇತ್ರ ದತ್ತ ಜಗದಂಬಾ ದೇವಸ್ಥಾನದಲ್ಲಿ ನೂತನ ಬ್ರಹ್ಮ ಕಲಶೋತ್ಸವವು ಬಹು ವಿಜೃಂಭಣೆಯಿಂದ ಜರಗಿತು. ಈ ಸಂದರ್ಭದಲ್ಲಿ ಜೂ.19 ರ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಗೌರವ ಅತಿಥಿಗಳಾಗಿ ಉಪಸ್ಥಿತರಿದ್ದ ವೆಲ್ಕಮ್ ಪ್ಯಾಕೇಜಿಂಗ್, ಮುಂಬಯಿ ಇದರ ಆಡಳಿತ ನಿರ್ದೇಶಕರಾದ ರವೀಂದ್ರನಾಥ್ ಎಂ. ಭಂಡಾರಿವರು ದೇವಾಲಯದ ಆಡಳಿತ ಮಂಡಳಿಯ ಪದಾಧಿಕಾರಿಗಳ ಹಸ್ತದಿಂದ ಗೌರವಿಸಲ್ಪಟ್ಟಾಗ (ಚಿತ್ರ - 1), ಎಲ್ .ಡಿ. ಎಸ್ . ಇನ್ನೋವೇಟಿಜ್‌ನ ಆಡಳಿತ ನಿರ್ದೇಶಕ ಅಮರ್‌ನಾಥ್ ಶೆಟ್ಟಿಯವರು ಗೌರವಿಸಲ್ಪಟ್ಟಾಗ (ಚಿತ್ರ- 2), ಭಾರತ್ ಬ್ಯಾಂಕ್ ನಿರ್ದೇಶಕರಾದ ಸುರೇಶ್ ಸುವರ್ಣ ರವರು ಗೌರವಿಸಲ್ಪಟ್ಟಾಗ (ಚಿತ್ರ - 3) ,ಗಣೇಶ್ ಸ್ಟೋರ್, ಪಂಪ್ ಹೌಸ್ ಉಮೇಶ್ ಕೋಟ್ಯಾನ್ ರವರು ಗೌರವಿಸಲ್ಪಟ್ಟಾಗ (ಚಿತ್ರ - 4), ಬಿಂದ್ರಾ ಕಾಂಪ್ಲೆಕ್ಸ್ ನ ಸುನೀತಾ ಕಾಮತ್‌ರವರು ಗೌರವಿಸಲ್ಪಟ್ಟಾಗ (ಚಿತ್ರ- 5) , ಜೀರ್ಣೋದ್ಧಾರ ಸಮಿತಿಯ ಗೌರವ ಕಾರ್ಯದರ್ಶಿ ದಿನದಾಸ ಬಿ. ಸನಿಲ್ ರವರು ಚಿನ್ನದ ಉಂಗುರದ ನೆನಪಿನ ಕಾಣಿಕೆಯೊಂದಿಗೆ ವಿಶೇಷ ಗೌರವವನ್ನು ಸ್ವೀಕರಿಸಿದಾಗ (ಚಿತ್ರ -6), ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷರಾಗಿ ಮತ್ತು ಮಾರ್ಗದರ್ಶಕರಾಗಿ ಮಹತ್ತರ ಸೇವೆಯನ್ನು ಸಲ್ಲಿಸಿದ ಡಾ.ಸುರೇಂದ್ರ ಕುಮಾರ್‌ಹೆಗ್ಡೆ ದಂಪತಿ ಸಮೇತ ಗೌರವಿಸಲ್ಪಟ್ಟಾಗ (ಚಿತ್ರ - 7), ಎಲ್ಲಾ ಕಾರ್ಯಗಳಲ್ಲಿ ಕೈಜೋಡಿಸಿ ಕಾರ್ಯಕ್ರಮದ ಯಶಸ್ವಿಯ ಹಿನ್ನೆಲೆಯಲ್ಲಿ ಮಹತರ ಯೋಗದಾನ ನೀಡಿದ ದೇವಾಲಯ ಆಡಳಿತ ಸಮಿತಿಯ ಗೌರವ ಕಾರ್ಯದರ್ಶಿ ಯಶವಂತ್ ಸಿ. ಅಮೀನ್ ಗೌರವಿಸಲ್ಪಟ್ಟಾಗ (ಚಿತ್ರ - 8) ,ಕೋಶಾಧಿಕಾರಿ ಮೋಹನ್ ದಾಸ್ ಶ್ರೀಯಾನ್ ರವರು ಗೌರವಿಸಲ್ಪಟ್ಟಾಗ (ಚಿತ್ರ - 9), ಈ ಸಂದರ್ಭದಲ್ಲಿ ಮುಖ್ಯ ಅತಿಥಿ ಸೂರ್ಯಕಾಂತ್ ಜಯ ಸುವರ್ಣ , ಬ್ರಹ್ಮ ಶ್ರೀ ಶಂಕರ್‌ನಾರಾಯಣ ತಂತ್ರಿ , ಹಾಗೂ ದೇವಾಲಯದ ಆಡಳಿತ ಮಂಡಳಿಯ ಅಧ್ಯಕ್ಷ ದಯಾನಂದ ಸಿ. ಅಂಚನ್ ಹಾಗೂ ದೇವಾಲಯದ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು. (ಚಿತ್ರ - ಶ್ರೀಧರ್ ಉಚ್ಚಿಲ್)

ಶ್ರೀ ಶನಿಮಹಾತ್ಮಾ ತ್ರಿ ಭುವನೇಶ್ವರಿ ಸೇವಾ ಸಮಿತಿ ಬೋರ ಬಜಾರ್ ಸ್ಟ್ರೀಟ್, ಫೋರ್ಟ್; ವಿಜೃಂಭಣೆಯಿಂದ ಮೂರ್ತಿ ಪ್ರತಿಷ್ಠಾಪನಾ ದಿನಾಚರಣೆ ಮತ್ತು ಚೈತನ್ಯ ಕಲಶಾಭಿಷೇಕ ಸಂಪನ್ನ






ಮುಂಬಯಿ, ಜೂ.21- ಫೋರ್ಟ್ 79/81, ಬೋರ ಬಜಾರ್‌ಸ್ಟ್ರೀಟ್, ಫೋರ್ಟ್ ಶ್ರೀ ಶನಿ ಮಹಾತ್ಮಾ ತ್ರಿಭುವನೇಶ್ವರಿ ಸೇವಾ ಸಮಿತಿಯಲ್ಲಿ ಜೂ.16 ರಂದು ಮಂಗಳವಾರ ಮೂರ್ತಿ ಪ್ರತಿಷ್ಠಾಪನಾ ದಿನಾಚರಣೆ ಮತ್ತು ಚೈತನ್ಯ ಕಳಶಾಭಿಷೇಕ ನಡೆಯಿತು. ಧಾರ್ಮಿಕ ವಿಧಿ ವಿಧಾನಗಳನ್ನು ಪುರೋಹಿತರಾದ ಹರೀಶ್ ಶಾಂತಿ ಕಾರ್ಕಳ ಇವರ ಪೌರೋಹಿತ್ಯದಲ್ಲಿ ಹಾಗೂ ಅಧ್ಯಕ್ಷರಾದ ಬಿ. ಕೂಸಪ್ಪ ಅವರ ಮುಂದಾಳತ್ವದಲ್ಲಿ ಜರಗಿತು.

ಬೆಳಿಗ್ಗೆ ಗಣ ಹೋಮ,ತದನಂತರ ನವಗ್ರಹ ಹೋಮ, ಕಲಶ ಪೂಜೆ,ಮೂರ್ತಿ ಶುದ್ಧೀಕರಣ, ಚೈತನ್ಯ ಕಲಶಾಭಿಷೇಕ, ಭಜನೆ, ಮಹಾ ಪೂಜೆ, ಅನ್ನ ಸಂತರ್ಪಣೆ, ಪ್ರಸಾದ ವಿತರಣೆ ನಡೆಯಿತು.

ಸಾಯಂಕಾಲ ದುರ್ಗಾ ನಮಸ್ಕಾರ ಅಲಂಕಾರ ಪೂಜೆ, ದೇವಿ ಪಾತ್ರಿ ಕೃಷ್ಣ ಪೂಜಾರಿ ಅವರಿಂದ ದೇವಿ ಆವೇಶ,ಬಳಿಕ ಪ್ರಸಾದ ವಿತರಣೆ, ಅನ್ನ ಸಂತರ್ಪಣೆ ನಡೆಯಿತು. ಧಾರ್ಮಿಕ ವಿಧಿ ವಿಧಾನಗಳಲ್ಲಿ ಅರ್ಚಕರಾದ ಹರೀಶ್ ಶಾಂತಿ ಹೆಜಮಾಡಿ, ಮಹಾವಿರ್‌ವೈದಿಕ್, ಸುದರ್ಶನ್‌ಆಚಾರ್ಯ,ಸಂತೋಷ್ ಶಾಂತಿ ಸಹಕರಿಸಿದರು. ಅಪಾರ ಸಂಖ್ಯೆಯಲ್ಲಿ ಭಕ್ತರು ಪೂಜಾ ಕಾರ್ಯಕ್ರಮದಲ್ಲಿ ಹಾಗೂ ಅನ್ನ ಸಂತರ್ಪಣೆಯಲ್ಲಿ ಪಾಲ್ಗೊಂಡರು. ಕಾರ್ಯಕ್ರಮದ ಯಶಸ್ವಿಗೆ ಶ್ರೀ ಶನಿಮಹಾತ್ಮಾ ತ್ರಿಭುವನೇಶ್ವರಿ ಸೇವಾ ಸಮಿತಿಯ ಅಧ್ಯಕ್ಷರಾದ ಬಪ್ಪನಾಡು ಕೂಸಪ್ಪ, ಉಪಾಧ್ಯಕ್ಷರಾದ ದಯಾಕರ್‌ಎಚ್ ಕೋಟ್ಯಾನ್, ಕಾರ್ಯದರ್ಶಿ ಸತೀಶ್ ಶೆಟ್ಟಿ, ಜೊತೆ ಕಾರ್ಯದರ್ಶಿ ಅನುಸೂಯ ಎಸ್. ಕೆಲ್ಲಪುತ್ತಿಗೆ,ಗೌ. ಕೋಶಾಧಿಕಾರಿ ಚಂದ್ರಕಾಂತ್ ವಿ. ಅಮೀನ್,ಜೊತೆ ಕೋಶಾಧಿಕಾರಿಗಳಾದ ಜಯಂತಿ ಕಡಂದಲೆ,ಅಚ್ಚುತ ಕರ್ಕೇರ ಹಾಗೂ ಸದಸ್ಯರಾದ ಧರ್ಮಪಾಲ್ ಪೂಜಾರಿ , ಆನಂದ್ ವಿ.ಪೂಜಾರಿ , ಆನಂದ್ ಕೆ ಪೂಜಾರಿ, ಪುರುಷೋತ್ತಮ್ ಕುಂದರ್, ರಂಗ ಪುತ್ರನ್ , ಹೇಮಲತಾ ಕರ್ಕೇರ, ಗಣೇಶ್ ಮೂಲ್ಯ ಹಾಗೂ ಸೂರಜ್,ಗುರು ದಾಸ್ ದೇವಾಡಿಗ , ಸಚಿನ್ , ಪರಿಮಲ್ ಪಂಡಿತ್,ನಿತೇಶ್ ದೇವಾಡಿಗ , ದೇವಿ ಪಾತ್ರಿ ಕೃಷ್ಣ ಪೂಜಾರಿ ಇವರೆಲ್ಲ ಸಹಕರಿಸಿದರು.

ತುಳು ಕೂಟ ಪುಣೆ : 27ನೇ ವಾರ್ಷಿಕೋತ್ಸವ ಪೂರ್ವಭಾವಿ ಸಭೆ

ತುಳು ಭಾಷೆ ಸಂಸ್ಕೃತಿ ಬೆಳೆಸುವಲ್ಲಿ ನಮ್ಮ ಕಾರ್ಯ ನಿರಂತರವಾಗಿರಲಿ - ದಿನೇಶ್ ಶೆಟ್ಟಿ ಕಳತ್ತೂರು



(ಚಿತ್ರ, ವರದಿ : ಹರೀಶ್ ಮೂಡುಬಿದ್ರಿ)

ಪುಣೆ, ಜೂ. 21- ತುಳು ಕೂಟ ಪುಣೆಯ 27ನೇ ವಾರ್ಷಿಕೋತ್ಸವ ಸಮಾರಂಭವು ಆ. 15ರ ಶನಿವಾರದಂದು ಬಂಟರ ಭವನ ಬಾಣೇರ್ ಪುಣೆ ಇಲ್ಲಿ ವಿವಿಧ ಸಾಂಸ್ಕೃತಿಕ ಸಭಾ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ವಾರ್ಷಿಕೋತ್ಸವಕ್ಕೆ ಪೂರಕವಾಗಿ ಪೂರ್ವಭಾವಿ ಸಭೆಯು ಜೂನ್ 14ರ ಆದಿತ್ಯವಾರದಂದು ವಾರ್ಜೆಯಲ್ಲಿರುವ ತುಳು ಕೂಟದ ಕಚೇರಿಯಲ್ಲಿ ತುಳು ಕೂಟದ ಅಧ್ಯಕ್ಷ ದಿನೇಶ್ ಶೆಟ್ಟಿ ಕಳತ್ತೂರು ಅಧ್ಯಕ್ಷತೆಯಲ್ಲಿ ಜರಗಿತು.



ಪಂಚ ದ್ರಾವಿಡ ಭಾಷೆಗಳಲ್ಲಿ ಒಂದಾಗಿರುವ ತುಳು ಭಾಷೆಯ ಸಮಗ್ರ ಅಭಿವೃದ್ಧಿಗೆ ವಿಶೇಷ ಕಾಳಜಿ ವಹಿಸುವ ದೃಷ್ಟಿಯಿಂದ ರಾಜ್ಯ ಸರಕಾರ ಕಾರ್ಕಳದಲ್ಲಿ ತುಳು ನಿಗಮ ಸ್ಥಾಪನೆ ಮತ್ತು ತುಳು ಭವನ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡುವಂತೆ ವಿಶೇಷ ಮನವಿಯನ್ನು ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಯವರಿಗೆ ನಮ್ಮ ಪುಣೆ ತುಳುಕೂಟದ ಟ್ರಸ್ಟಿ ಸಮಾಜ ಸೇವಕ ರಾಜಕೀಯ ಮುಖಂಡ ಉದಯ ಕುಮಾರ್ ಶೆಟ್ಟಿ ಮುನಿಯಾಲು ಮತ್ತು ನಮ್ಮ ಟ್ರಸ್ಟಿ ಖ್ಯಾತ ನ್ಯಾಯವಾದಿ ಉಮೇಶ್ ಶೆಟ್ಟಿ ಕಳತ್ತೂರು ನೀಡಿರುವುದು ಅಭಿನಂದನೀಯ. ಈ ಮನವಿ ಸಲ್ಲಿಕೆಯಂತೆ ಭವನ ನಿರ್ಮಾಣವಾದರೆ ತುಳು ಭಾಷೆ, ಕಲೆ, ಸಂಸ್ಕೃತಿ ಬೆಳವಣಿಗೆಗೆ ಸಹಕಾರಿಯಾಗಲಿದೆ. ಪುಣೆ ತುಳುಕೂಟ ಸಂಪೂರ್ಣ ಪ್ರೋತ್ಸಾಹ ನೀಡುವ ಮೂಲಕ ಮುನಿಯಾಲು ಉದಯ್ ಶೆಟ್ಟಿ ಮತ್ತು ಉಮೇಶ್ ಶೆಟ್ಟಿ ಕಳತ್ತೂರು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತದೆ ಎಂದು ಸಭೆಯಲ್ಲಿ ಪುಣೆ ತುಳುಕೂಟದ ಅಧ್ಯಕ್ಷ ದಿನೇಶ್ ಶೆಟ್ಟಿ ಕಳತ್ತೂರು ತಿಳಿಸಿದ್ದಾರೆ.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ದಿನೇಶ್ ಶೆಟ್ಟಿ, ತುಳು ಕೂಟ ಪುಣೆ 27ನೇ ವರ್ಷದ ಸಂಭ್ರಮದಲ್ಲಿದ್ದು, ವಾರ್ಷಿಕೋತ್ಸವ ಸಮಾರಂಭದಲ್ಲಿ ತುಳುನಾಡ ಸೇವೆಗೈದ ತುಳು ಬಾಂಧವ ಸಾಧಕರಲ್ಲಿ ಒಬ್ಬರನ್ನು ಆರಿಸಿ ಕಳೆದ ವರ್ಷದಿಂದ ನೀಡುತ್ತಾ ಬರುತ್ತಿರುವ 'ತೌಳವ ಛತ್ರಪತಿ' ಬಿರುದು ಪ್ರಶಸ್ತಿ ನೀಡಿ ಸನ್ಮಾನ ನಡೆಯಲಿದೆ ಹಾಗೂ ಸಾಧಕರಿಗೆ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳೇ ಪುರಸ್ಕಾರ ನಡೆಯಲಿದೆ. ಕಳೆದ 27 ವರ್ಷಗಳಿಂದ ಹಲವಾರು ಸಮಾಜಮುಖಿ ಸೇವಾ ಕಾರ್ಯಗಳ ಜೊತೆಯಲ್ಲಿ ಧಾರ್ಮಿಕ, ಶೈಕ್ಷಣಿಕ, ಕಲಾ ಸೇವೆಗಳನ್ನು ಮಾಡುತ್ತಾ ಬರುತಿದೆ. ನಮ್ಮ ತುಳುನಾಡಿನ ಭಾಷೆ ಕಲೆ ಸಂಸ್ಕೃತಿಗೆ ಪೂರಕ ವೇದಿಕೆಗಳನ್ನು ಕಲ್ಪಿಸಿ ತುಳುವರಿಂದಲೇ ನಡೆಯುವ ಕಾರ್ಯಕ್ರಮಗಳಿಗೆ ಅರ್ಥವಿರುತ್ತದೆ. ನಮ್ಮ ಸಂಸ್ಕೃತಿಯನ್ನು ಪ್ರೀತಿಸಿ ಬೆಳೆಸುವ ಕಾರ್ಯ ತುಳುವರೆಲ್ಲರಿಂದಲೂ ಆಗಬೇಕು. ಪುಣೆ ತುಳು ಬಾಂಧವರು ನಿರಂತರ ಸಹಕಾರ ನೀಡುತ್ತಾ ಬಂದಿದ್ದಾರೆ. ಪುಣೆ ತುಳುಕೂಟದ ಉತ್ಸವ ಪುಣೆಯ ಸರ್ವ ತುಳು ಬಾಂಧವರ ಸಹಕಾರ ದಾನಿಗಳ ಉದಾರ ಸೇವೆಗಳಿಂದ ನಡೆಯುತ್ತಾ ಬರುತಿದೆ. ಈ ಬಾರಿಯ 27ನೇ ವಾರ್ಷಿಕೋತ್ಸವ ಸಂಭ್ರಮವು ಯಶಸ್ವಿಯಾಗಲು ತಮ್ಮೆಲ್ಲರ ಸಹಕಾರ ಮುಖ್ಯ. ಸಂಘದ ಪದಾಧಿಕಾರಿಗಳು, ಮಹಿಳಾ ವಿಭಾಗ, ಯುವ ವಿಭಾಗ ಸೇರಿದಂತೆ ಸರ್ವ ತುಳು ಬಾಂಧವರ ಸಂಪೂರ್ಣ ಸಹಕಾರ ನಮ್ಮೊಂದಿಗಿರಲಿ ಎಂದು ಆಶಿಸುತ್ತೇನೆ ಎಂದರು.

ಸಾಂಸ್ಕೃತಿಕ ಕಾರ್ಯಕ್ರಮವಾಗಿ ತುಳು ಬಾಂಧವರಿಂದ, ಸಂಘದ ಸದಸ್ಯರಿಂದ ಯುವ ವಿಭಾಗದವರಿಂದ ನೃತ್ಯ ವೈವಿಧ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ.

ಗೌರವ ಪುರಸ್ಕಾರ ಪಡೆಯಲಿರುವ ಪುಣೆಯ ತುಳು ಬಾಂಧವರ 10 ಮತ್ತು 12ನೇ ತರಗತಿಯ ಶೇ. 85 ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಜುಲೈ 30ರ ಒಳಗೆ ತುಳುಕೂಟದ ಸಂಬಂಧಪಟ್ಟ ಸಮಿತಿ ಸದಸ್ಯರಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು ಹಾಗೂ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಆಟೋಟ ಸ್ಪರ್ಧೆ ಅಥವಾ ಬೇರೆ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರು ಸಮಿತಿ ಸದಸ್ಯರಲ್ಲಿ ಹೆಸರನ್ನು ನೀಡಬೇಕಾಗಿ ವಿನಂತಿಸಲಾಗಿದೆ. ಹೆಸರನ್ನು ನೋಂದಾಯಿಸಲು ಶಿಕ್ಷಣ ಸಮಿತಿಯ ಮಹಿಳಾ ಕಾರ್ಯಾಧ್ಯಕ್ಷೆ ಸರಸ್ವತಿ ಕುಲಾಲ್ (89990 86203) ಅಥವಾ ತಾರಾನಾಥ್ ಶೆಟ್ಟಿ ಮಡಂತ್ಯಾರು (93072 94199) ಅವರನ್ನು ಸಂಪರ್ಕಿಸಬಹುದು.

ಸಭೆಯಲ್ಲಿ ತುಳುಕೂಟದ ಪ್ರಮುಖರಾದ ಗೌರವಾಧ್ಯಕ್ಷ ಮೋಹನ್ ಶೆಟ್ಟಿ ಎಣ್ಣೆಹೊಳೆ, ಉಪಾಧ್ಯಕ್ಷರಾದ ಮಾಧವ ಶೆಟ್ಟಿ, ಉದಯ್ ಶೆಟ್ಟಿ ಕಳತ್ತೂರು, ಶೇಖರ್ ಪೂಜಾರಿ, ಟ್ರಸ್ಟಿ ಸದಾಶಿವ ಸಾಲ್ಯಾನ್, ಪ್ರ. ಕಾರ್ಯದರ್ಶಿ ರಾಜರಾಮ್ ಶೆಟ್ಟಿ, ಪ್ರಮುಖರಾದ ಆನಂದ್ ಶೆಟ್ಟಿ, ಯಶವಂತ್ ಶೆಟ್ಟಿ ಉಳಾಯಿ ಬೆಟ್ಟು, ಮಹಾಬಲೇಶ್ವರ್ ದೇವಾಡಿಗ, ಜಗದೀಪ್ ಶೆಟ್ಟಿ, ತಾರಾನಾಥ್ ಶೆಟ್ಟಿ ಮಡಂತ್ಯಾರು, ವಿಠ್ಠಲ್ ಮೂಲ್ಯ, ಹಿತೇಶ್ ಶೆಟ್ಟಿ, ಯುವ ವಿಭಾಗದ ಕಾರ್ಯಾಧ್ಯಕ್ಷ ಆಕಾಶ ಶೆಟ್ಟಿ ಮತ್ತು ಪದಾಧಿಕಾರಿಗಳು, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಪ್ರಿಯಾ ಎಚ್. ದೇವಾಡಿಗ, ಉಪಾಧ್ಯಕ್ಷೆ ಶಶಿಕಲಾ ಶೆಟ್ಟಿ, ಪ್ರಮುಖರಾದ ಶಶಿಕಾಂತಿ ದೇವಾಡಿಗ, ಸರಿತಾ ಶೆಟ್ಟಿ, ರಂಜಿತಾ ಆರ್. ಶೆಟ್ಟಿ, ಶ್ವೇತಾ ಎಚ್. ಮೂಡುಬಿದ್ರಿ, ಸರಸ್ವತಿ ಸಿ. ಕುಲಾಲ್, ಗೀತಾ ಎಂ. ದೇವಾಡಿಗ, ಶ್ವೇತಾ ಹೆಗ್ಡೆ, ಆಶಾ ಆರ್. ಪೂಜಾರಿ ಮತ್ತು ಪದಾಧಿಕಾರಿಗಳು ಹಾಗೂ ಹೆಚ್ಚಿನ ಸಂಖ್ಯೆಯ ತುಳು ಬಾಂಧವರು ಉಪಸ್ಥಿತರಿದ್ದರು. ರಾಜಾರಾಮ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಕರ್ನಾಟಕ ಸಂಘ ಅಂಧೇರಿ, ನೂತನ ಅಧ್ಯಕ್ಷರಾಗಿ ಜಗಜೀವನ್ ಪೂಜಾರಿ ಆಯ್ಕೆ

ಮುಂಬಯಿ, ಜೂ.21 - ಕರ್ನಾಟಕ ಸಂಘ ಅಂಧೇರಿ (ರಿ.) ಯ ನೂತನ ಕಾರ್ಯಕಾರಿ ಸಮಿತಿಯನ್ನು ಇತ್ತೀಚೆಗೆ ಆಯ್ಕೆ ಮಾಡಲಾಗಿದೆ . ಸಂಸ್ಥೆಯ ಸಂಸ್ಥಾಪಕರಾದ ಕೃಷ್ಣ ಬಿ.ಶೆಟ್ಟಿ ಇವರ ಸಮಕ್ಷಮದಲ್ಲಿ ಚುನಾವಣಾ ಅಧಿಕಾರಿಯಾಗಿ ದಿನೇಶ್ (ಆರ್.ಕೆ) ಶೇರುಗಾರ್ ನೇತೃತ್ವ ವಹಿಸಿಕೊಂಡು ನೂತನ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಗೌರವಅಧ್ಯಕ್ಷರಾಗಿ ಪಿ.ಧನಂಜಯ ಶೆಟ್ಟಿ,ಅಧ್ಯಕರಾಗಿ ಜಗಜೀವನ್ ಪೂಜಾರಿ, ಗೌ. ಕಾರ್ಯದರ್ಶಿ ಉದಯ್ ಕೆರ್ಗಾಲ್, ಕೋಶಾಧಿಕಾರಿ ಪರ್ಮಿಂದರ್‌ಸಿಂಗ್ ಸೋಖಿ , ಉಪಾಧ್ಯಕ್ಷರಾಗಿ ಸೀತಾರಾಮ್ ಪೂಜಾರಿ, ಜೊತೆ ಕಾರ್ಯದರ್ಶಿ ಅಶೋಕ್ ಶೆಟ್ಟಿ ತೋಡಾರ್, ಜೊತೆ ಕೋಶಾಧಿಕಾರಿ ಕರುಣಾಕರ್‌ಪಾವೂರು , ಕರ್ನಾಟಕ ಸಂಘ ಅಂಧೇರಿಯ ಮಹಿಳಾ ವಿಭಾಗದ ಅಧ್ಯಕ್ಷೆಯಾಗಿ ಸುರೇಖಾ ಶಿವರಾಮ್ ಶೆಟ್ಟಿ, ಕಾರ್ಯದರ್ಶಿ ಪ್ರತಿಮಾ ಸುರೇಂದ್ರ ಹೆಗ್ಡೆ, ಉಪಾಧ್ಯಕ್ಷೆ ಯಶೋದಾ ದಯಾನಂದ ಶೆಟ್ಟಿ ಆಯ್ಕೆಯಾದರು.

ಕರ್ನಾಟಕ ಸಂಘ ಅಂಧೇರಿಯ ನಿರ್ಗಮಿತ ಅಧ್ಯಕ್ಷರಾದ ಭಾಸ್ಕರ್ ಸುವರ್ಣ ಸಸಿಹಿತ್ಲು ತನ್ನ ಕಾಲಾವಧಿಯಲ್ಲಿ ತನಗೆ ಸಹಕರಿಸಿದ ಎಲ್ಲಾ ಸದಸ್ಯರಿಗೆ ಕೃತಜ್ಞತೆ ವ್ಯಕ್ತಪಡಿಸಿದರು. ಎಲ್ಲಾ ಸದಸ್ಯರು ನೂತನ ಅಧ್ಯಕ್ಷರಿಗೆ ಮತ್ತು ಕಾರ್ಯಕಾರಿ ಸಮಿತಿಗೆ ಅಭಿನಂದಿಸಿ ಶುಭ ಹಾರೈಸಿದರು.


ಜಗಜೀವನ್ ಪೂಜಾರಿ ಅಧ್ಯಕ್ಷರು


ಪಿ.ಧನಂಜಯ ಶೆಟ್ಟಿ ಗೌರವಾಧ್ಯಕ್ಷರು


ಸೀತಾರಾಮ ಪೂಜಾರಿ ಉಪಾಧ್ಯಕ್ಷರು


ಉದಯ್ ಕೆರ್ಗಾಲ್ ಗೌ.ಕಾರ್ಯದರ್ಶಿ


ಪರಮಿಂದರ್‌ಸಿಂಗ್ ಸೋಖಿ ಗೌ. ಕೋಶಾಧಿಕಾರಿ


ಅಶೋಕ್ ಶೆಟ್ಟಿ ಜೊತೆ ಕಾರ್ಯದರ್ಶಿ


ಕರುಣಾಕರ್ ಪಾವೂರು ಜೊತೆ ಕೋಶಾಧಿಕಾರಿ


ಸುರೇಖಾ ಎಸ್ ಶೆಟ್ಟಿ ಮಹಿಳಾ ವಿಭಾಗದ ಅಧ್ಯಕ್ಷೆ


ಯಶೋದಾ ಡಿ. ಶೆಟ್ಟಿ ಉಪಾಧ್ಯಕ್ಷೆ


ಪ್ರತಿಮಾ ಎಸ್ .ಹೆಗ್ಡೆ. ಕಾರ್ಯದರ್ಶಿ

ಥಾಣೆ : ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಮಾಸಿಕ ಸಂಕ್ರಮಣ ಪೂಜೆ ಸಂಪನ್ನ




ಥಾಣೆ, ಜೂ.21- ಥಾಣೆ ಪಶ್ಚಿಮದ ವೀರ ಸಾವರ್ಕರ್ ನಗರದಲ್ಲಿರುವ ಶ್ರೀ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜೂನ್ 15ರಂದು ಮಾಸಿಕ ಸಂಕ್ರಮಣ ಪೂಜೆ ನೆರವೇರಿತು.

ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಮುಖ್ಯಸ್ಥ ಜ್ಯೋತಿಷಿ ಶಿವಪ್ರಸಾದ್ ಪೂಜಾರಿ ಪುತ್ತೂರು ಇವರ ಮುಂದಾಳುತ್ವದಲ್ಲಿ ಮತ್ತು ಜಗದೀಶ್ ಎಸ್ ತಂತ್ರಿಯವರ ಮಾರ್ಗದರ್ಶನದೊಂದಿಗೆ ಮಾಸಿಕ ಸಂಕ್ರಮಣ ಪೂಜೆಯು ನೆರವೇರಿತು.

ಪೂಜೆಯ ನಿಮಿತ್ತ ಬೆಳಿಗ್ಗೆ ಗಣ ಹೋಮ ನಂತರ ಹರಿಣಾಕ್ಷಿ ಕೋಟ್ಯಾನ್ ಬಳಗದವರಿಂದ ವಾಲಗ ಸೇವೆ ನಡೆದು ಮಧ್ಯಾಹ್ನ ಪಂಚಕಜ್ಜಾಯ ಸೇವೆಯೊಂದಿಗೆ ಮಂಗಳಾರತಿ ನಡೆದು ಮಧ್ಯಾಹ್ನ ಮಹಾಪ್ರಸಾದ ರೂಪದಲ್ಲಿ ಅನ್ನದಾನ ನಡೆಯಿತು .

ಸಾಯಂಕಾಲ ಕ್ಷೇತ್ರದ ಸದಸ್ಯರಿಂದ ಭಜನಾ ಸೇವೆಯು ನಡೆದು ಮಹಾ ಮಂಗಳಾರತಿ ಬೆಳಗಲಾಯಿತು.

ಈ ಸುಸಂದರ್ಭದಲ್ಲಿ ಊರಿಂದ ಬಂದ ಹಿರೇಬಂಡಾಡಿ ಗ್ರಾಮ ಪಂಚಾಯತಿನ ಮಾಜಿ ಸದಸ್ಯರೂ ಹಾಗೂ ಪುತ್ತೂರು ಶಾಸಕರ ನಿಕಟವರ್ತಿ ಗೀತಾ ದಾಸರಮೂಲೆ ಇವರನ್ನು ಕ್ಷೇತ್ರದ ವತಿಯಿಂದ ಶಾಲು ಹೊದಿಸಿ ಫಲಪುಷ್ಪ ನೀಡಿ ಗೌರವಿಸಲಾಯಿತು .

ಈ ಸುಸಂದರ್ಭದಲ್ಲಿ ಅನೇಕ ಭಕ್ತಾದಿಗಳು ಪಾಲ್ಗೊಂಡು ಶ್ರೀ ಚಾಮುಂಡೇಶ್ವರಿ ಅಮ್ಮನವರ ಕೃಪೆಗೆ ಪಾತ್ರರಾದರು. ಕೊನೆಗೆ ಕ್ಷೇತ್ರದ ರೂವಾರಿ ಶ್ರೀ ಶಿವಪ್ರಸಾದ್ ಪೂಜಾರಿ ಪುತ್ತೂರು ಸಹಕರಿಸಿದ ಎಲ್ಲರಿಗೂ ಶ್ರೀ ಚಾಮುಂಡೇಶ್ವರಿ ದೇವಿಯ ಅನುಗ್ರಹ ಸದಾ ಇರಲಿ ಎಂದು ಹರಸಿದರು.

ವಿದ್ಯಾಪ್ರಸಾರಕ ಮಂಡಳದ ವತಿಯಿಂದ ಶ್ರೀರಾಮ ಎನ್. ಎಚ್. ಕುಲಕರ್ಣಿಯವರಿಗೆ ಶೋಕ ಸಭೆ

ದೇವ ಮಾನವರಾಗಿದ್ದ ವ್ಯಕ್ತಿಗಳ ಮೌಲ್ಯ ಮತ್ತು ಮಹತ್ವ ಅಜರಾಮರವಾಗಿರುತ್ತದೆ - ರಮೇಶ್ ಚಿನಿವಾರ





ಮುಂಬಯಿ, ಜೂ. 21- ಸಂಸ್ಕೃತಿಯ ಸರದಾರ, ಶೈಕ್ಷಣಿಕ ಕ್ರಾಂತಿಯ ಹರಿಕಾರ ಶ್ರೀರಾಮ ಕುಲಕರ್ಣಿ ಆದರ್ಶ ಗುಣಗಳ ಪ್ರತಿಮಾರೂಪವಾಗಿದ್ದರು. ಜ್ಞಾನ ಭಂಡಾರ, ಹಣ, ಅಧಿಕಾರ, ಅಂತಸ್ತು, ಸಂಪತ್ತು ಇದ್ದರೂ ಸಹ ನಿರ್ಗವಿ, ನಿರಹಂಕಾರಿ. ಮನೋವೈಶಾಲ್ಯತೆಯಿಂದ, ಹೃದಯಸ್ಪರ್ಶಿಯ ಮಾತುಗಳಿಂದ, ಸೌಮ್ಯ ಸ್ವಭಾವದ, ಸಮಾಜ ಸೇವಾ ಕೌಶಲ್ಯತೆಯ ದೂರದೃಷ್ಟಿಯೂ ಅವರ ವ್ಯಕ್ತಿತ್ವ ವಿಕಾಸವನ್ನು ಶಿಖರೆತ್ತರಕ್ಕೆ ಬೆಳೆಸಲು ಪ್ರೇರಕವಾಯಿತು. ಅವರಿಂದ ವಿದ್ಯಾ ಪ್ರಸಾರಕ ಮಂಡಳದ ವಿದ್ಯಾರ್ಥಿಗಳ ವಿಕಾಸವು ತಾಂತ್ರಿಕ ಸಾಧನಗಳ ಮೂಲಕ ಪರಿವರ್ತನೆಯಾಗಿರುವುದು ನಮ್ಮೆಲ್ಲರ ಸೌಭಾಗ್ಯವೇ ಸರಿ. ಅವರ ಕಾರ್ಯವೈಖರಿ ಅಮೋಘ ಹಾಗೂ ಅತ್ಯದ್ಭುತ ಹಾಗೂ ಅಜರಾಮರ ಎಂದು ಜೂನ್ 19ರ ಶುಕ್ರವಾರದಂದು ಹಮ್ಮಿಕೊಂಡಿದ್ದ ಶಾಲಾ ಸಭಾಗೃಹದಲ್ಲಿ ವಿದ್ಯಾ ಪ್ರಸಾರಕ ಮಂಡಳದ ಅಧ್ಯಕ್ಷ ರಮೇಶ ಚಿನಿವಾರ ಶ್ರೀರಾಮರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುತ್ತಾ ಮಾತನಾಡಿದರು.

ಸಂಸ್ಥೆಯ ಉಪಾಧ್ಯಕ್ಷ ಶ್ರೀಕೃಷ್ಣ ದೇಶಪಾಂಡೆ ಮಾತನಾಡಿ, ಸರಳ ಸಜ್ಜನಿಕೆಯ ಸುಸಂಸ್ಕೃತೆಯನ್ನು ನೋಡಿ ನಾವು ಕಲಿಯಬೇಕಾದದ್ದು ಸಾಕಷ್ಟಿದೆ. ಅವರೊಬ್ಬ ಮಂಡಳದ ಸಂಪತ್ತಾಗಿದ್ದರು. ಅವರನ್ನು ಕಳೆದುಕೊಂಡು ಮಂಡಳವು ದೊಡ್ಡ ನಷ್ಟವನ್ನು ಅನುಭಿಸುತ್ತಿದೆ. ಅವರ ಶ್ರೀರಕ್ಷೆ ಸದಾ ನಮ್ಮೆಲ್ಲರ ಮೇಲಿರಲಿ ಎಂದು ದೇವರು ಅವರ ಆತ್ಮಕ್ಕೆ ಸದ್ಗತಿಯನ್ನು ನೀಡಲಿ ಎಂದು ಪ್ರಾರ್ಥಿಸಿದರು.



ಮಂಡಳದ ಪ್ರಧಾನ ಗೌರವ ಕಾರ್ಯದರ್ಶಿ ಆನಂದ ಕಟಗೇರಿ ಮಾತನಾಡಿ, ಆಧುನಿಕ ಶಿಕ್ಷಣದ ಸಲಕರಣೆಗಳಾದ ಸ್ಮಾರ್ಟ್‌ಬೋರ್ಡ್, ಸಂಗಣಕ ಯಂತ್ರಗಳನ್ನು ಎಲ್ಲಾ ವರ್ಗ ಕೋಣೆಗಳಲ್ಲಿ ಅಳವಡಿಸಿ ಬೋಧನಾ ಕ್ರೇತ್ರಗಳಲ್ಲಿ ಕ್ರಾಂತಿಯನ್ನು ನಿರ್ಮಿಸಿದ್ದಲ್ಲದೇ, ಹೊಸ ಶಾಲಾ ಬಸ್ಸುಗಳನ್ನು ತರುವಲ್ಲಿ ಅವರ ಶ್ರೇಯಸ್ಸು ಅಪಾರವೆಂದು ಹೇಳಿದರು. ವಿದ್ಯಾ ಪ್ರಸಾರಕ ಮಂಡಳವೆಂದರೆ ಸ್ವಂತ ಮನೆಯೆಂದುಕೊಂಡು ಸುಸಜ್ಜಿತವಾದ ಕಾರ್ಯಭಾರವನ್ನು ಮಂಡಳದ ಉಪಾಧ್ಯಕ್ಷರಾಗಿ ನಿಭಾಯಿಸಿರುವುದು ನಮ್ಮೆಲ್ಲರಿಗೆ ವರದಾನ ಮತ್ತು ಮಾರ್ಗದರ್ಶನವಾಗಿದೆ ಎಂದು ತಿಳಿಸಿದರು.

ಮತ್ತೊರ್ವ ಮಂಡಳದ ಕಾರ್ಯದರ್ಶಿ ದತ್ತಾತ್ರೇಯ ಮೂಲ್ಯ ಮಾತನಾಡಿ, ಶ್ರೀರಾಮ ಕುಲಕರ್ಣಿ ಮಂಡಳಕ್ಕೆ ಕಲ್ಪವೃಕ್ಷವಾಗಿದ್ದರು. ಮಹಾನ್ ಮೇಧಾವಿ, ಅತ್ಯದ್ಭುತ ಚಿಂತನಾಶೀಲ, ಕ್ರಿಯಾಶೀಲ ವ್ಯಕ್ತಿಯನ್ನು ಕಳೆದುಕೊಂಡಿರುವುದು ನಮ್ಮ ದುರ್ದೈವದ ಸಂಗತಿಯಾಗಿದೆ. ಅವರಲ್ಲಿದ್ದ ಉದಾರ ಮನೋಭಾವನೆ, ದೂರದೃಷ್ಟಿಯ ಚಿಂತನೆ ಮಂಡಳಕ್ಕೆ ವರದಾನವಾಗಿದೆ. ಅವರ ಆತ್ಮಕ್ಕೆ ದೇವರು ಚಿರಶಾಂತಿಯನ್ನು ಕೊಡಲಿ ಎಂದು ಕೇಳಿಕೊಂಡರು.

ಮಂಡಳದ ಪದಾಧಿಕಾರಿಗಳಾದ ನಿರುಪಾ ಜೋರಾಪೂರ ಮಾತನಾಡಿ, ಅವರ ಸಾವು ನಮಗೆ ಆಶ್ಚರ್ಯದ ಜೊತೆಗೆ ಚಿಂತಾಕ್ರಾಂತರನ್ನಾಗಿ ಮಾಡಿದೆ. ವಿದ್ಯಾ ದೇಗುಲದ ಸರ್ವತೋಮುಖ ಅಭಿವೃದ್ಧಿಯಾಗಲು ಬೇಕಾದ ತಾಂತ್ರಿಕ ಕೌಶಲ್ಯಗಳು, ಸೌಲಭ್ಯಗಳನ್ನು ಒದಗಿಸಲು ಅಂತಾರಾಷ್ಟ್ರೀಯ ಮಟ್ಟದಲ್ಲಿಯ ಸಂಪರ್ಕದ ಕಾರ್ಯವು ಅನನ್ಯವಾಗಿತ್ತು. ವಿದ್ಯಾರ್ಥಿಗಳೆಂದರೆ ಅವರಿಗೆ ಪಂಚಪ್ರಾಣ. ಅವರ ಅಭಿವೃದ್ಧಿಗಾಗಿ ಅಹರ್ನಿಶಿಯ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದವರು. ಅವರ ಅಗಲಿಕೆಯು ನಮ್ಮನ್ನು ವ್ಯಥೆಗೆ ತಳ್ಳಿದೆ. ಅವರ ಕುಟುಂಬಕ್ಕೆ ಹಾಗೂ ಸದಸ್ಯರಿಗೆ ತಡೆದುಕೊಳ್ಳುವ ಶಕ್ತಿಯನ್ನು ದೇವರು ಕೊಡಲಿ ಎಂದು ಪ್ರಾರ್ಥಿಸಿದರು.

ಮಂಡಳದ ಸದಸ್ಯ ಅಜಿತ ದೇಶಪಾಂಡೆ ಅನಿಸಿಕೆಯನ್ನು ವ್ಯಕ್ತಪಡಿಸುತ್ತಾ, ತಂದೆಯಂತೆ ಮಗ ಎನ್ನುವುದನ್ನು ಶ್ರೀರಾಮ ಕುಲಕರ್ಣಿ ತೋರಿಸಿಕೊಟ್ಟವರು. ಶಿಕ್ಷಣದ ಮೇಲೆ ಅಪಾರವಾದ ಪ್ರೀತಿ ವಾತ್ಸಲ್ಯ ಸಹಾಯ ಸಹಕಾರ ಅಮೃತದ ಮನಸ್ಸುಗಳು ಎನ್. ಬಿ. ಎಚ್. ಕುಲಕರ್ಣಿಯವರಿಂದ ಹರಿದು ಬಂದಿದೆ. 'ವಸುದೈವ ಕುಟುಂಬಕ್ಕಂ' ಎನ್ನುವ ಆದರ್ಶ ಭಾವನೆಯು ಅವರಲ್ಲಿತ್ತು. ಅವರ ಮಾರ್ಗದರ್ಶನ ನಮಗೆ ಮಾದರಿಯಾಗಿದೆ ಎಂದರು.

ಮಂಡಳದ ಅಜೀವ ಸದಸ್ಯ ಕರುಣಾಕರ ಶೆಟ್ಟಿ ಮಾತನಾಡಿ, ಮಾತೃ ಭಾಷೆಯ, ಶಿಕ್ಷಣದ, ಜನ ಸೇವೆಯ ಹಾಗೂ ಸಮಾಜ ಸೇವೆಯ ಕಾರ್ಯವೆಂದರೆ ಅಪಾರ ಪ್ರೀತಿ ಗೌರವವನ್ನು ಹೊಂದಿದವರು. ಎನ್. ಬಿ. ಎಚ್ ಹಾಗೂ ಶ್ರೀರಾಮ ಕುಲಕರ್ಣಿ ಕುಟುಂಬದವರು. ಅವರಲ್ಲಿ ಭಲ ಆಸಕ್ತಿ, ಅಭಿರುಚಿಯಿಂದಲೇ ಇಂದು ವಿದ್ಯಾಪ್ರಸಾರಕ ಮಂಡಳವು ಮನೆ-ಮನೆಗಳಲ್ಲಿ, ಮನ-ಮನಗಳಲ್ಲಿ ಗಗನದೆತ್ತರದ ಸ್ಥಾನವನ್ನು ಪಡೆದಿದೆ. ಅವರು ಮತ್ತೆ ಹುಟ್ಟಿ ಬರಲಿ ಎಂದು ಈ ಸಂಸ್ಥೆಯು ಹರಸುತ್ತದೆ ಎಂದು ನುಡಿದರು.

ಅಜಿತ್ ಉಮ್ರಾಣಿ ಅನಿಸಿಕೆಯನ್ನು ಬಿತ್ತರಿಸುತ್ತಾ, ಹೃದಯ ಶ್ರೀಮಂತಿಕೆಯ, ವಿಶಾಲ ಮನಸ್ಸಿನ, ಉದಾರ ಸೇವೆಯ ಮನುಷ್ಯತ್ವ ಮತ್ತು ಮಾನವೀಯತೆಗೆ ಯಾರೂ ಸರಿಸಾಟಿಯಾಗಲು ಸಾಧ್ಯವಿಲ್ಲ. ಅವರಲ್ಲಿದ್ದ ಗುಣ ಮೌಲ್ಯಗಳು ನಮ್ಮ ವಿದ್ಯಾ ದೇಗುಲದ ಅಧ್ಯಯನದಲ್ಲಿ ತೊಡಗಿರುವ ಮಕ್ಕಳಲ್ಲಿ ಬರಲಿ ಎಂದು ಹೇಳಿದರು.

ಪ್ರಾಂಶುಪಾಲರು, ಮುಖ್ಯೋಪಾಧ್ಯಾಯಿನಿಯವರು, ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿಗಳು ಸಾಮಾಜಿಕ ಬಾಂಧವರು ಅವರವರ ಅನಿಸಿಕೆಗಳನ್ನು ವ್ಯಕ್ತಪಡಿಸಿ ಪ್ರಾರ್ಥಿಸಿದರು.

ನ್ಯೂಜಿಲೆಂಡ್ ಮಣಿಸಿ ಮಹಿಳಾ ಹಾಕಿ ನೇಷನ್ಸ್ ಕಪ್ ಮುಡಿಗೇರಿಸಿಕೊಂಡ ಭಾರತ



ಆಕ್ಲೆಂಡ್, ಜೂ.21 - ಭಾರತೀಯ ಮಹಿಳಾ ಹಾಕಿ ತಂಡ 2026ರ ಎಫ್‌ಐಎಚ್ ಹಾಕಿ ನೇಷನ್ಸ್ ಕಪ್ ಪ್ರಶಸ್ತಿಯನ್ನು ಗೆದ್ದುಕೊಂಡಿದೆ. ಫೈನಲ್‌ನಲ್ಲಿ ಭಾರತ ತಂಡ, ಆತಿಥೇಯ ನ್ಯೂಜಿಲೆಂಡ್ ವಿರುದ್ಧ 2-0 ಅಂತರದ ಅದ್ಭುತ ಜಯ ಸಾಧಿಸಿತು. ಆಕ್ಲೆಂಡ್‌ನಲ್ಲಿ ಆಡುವಾಗ, ಭಾರತೀಯ ಆಟಗಾರ್ತಿಯರು ಆರಂಭದಿಂದಲೇ ಆಕ್ರಮಣಕಾರಿ ಆಟದ ಶೈಲಿಯನ್ನು ಪ್ರದರ್ಶಿಸಿದರು, ಎದುರಾಳಿಗೆ ಮತ್ತೆ ಗೆಲುವು ಸಾಧಿಸಲು ಯಾವುದೇ ಅವಕಾಶ ನೀಡಲಿಲ್ಲ. ನ್ಯೂಜಿಲೆಂಡ್ ತಂಡ, ಭಾರತದ ಸವಾಲನ್ನು ಪರಿಣಾಮಕಾರಿಯಾಗಿ ಎದುರಿಸಲು ಸಾಧ್ಯವಾಗಲಿಲ್ಲ.

ಪಂದ್ಯದ ಆರಂಭಿಕ ನಿಮಿಷಗಳಲ್ಲಿ ಟೀಮ್ ಇಂಡಿಯಾದ ಗೆಲುವಿನ ಅಡಿಪಾಯ ಹಾಕಲಾಯಿತು. ನಾಲ್ಕನೇ ನಿಮಿಷದಲ್ಲಿ ನವನೀತ್ ಕೌರ್ ಅದ್ಭುತ ಗೋಲು ಗಳಿಸಿ ಭಾರತಕ್ಕೆ 1-0 ಮುನ್ನಡೆ ನೀಡಿದರು. ಈ ಆರಂಭಿಕ ಮುನ್ನಡೆ ಭಾರತೀಯ ಆಟಗಾರ್ತಿಯರ ಆತ್ಮವಿಶ್ವಾಸವನ್ನು ಹೆಚ್ಚಿಸಿತು ಮತ್ತು ತಂಡವು ನ್ಯೂಜಿಲೆಂಡ್ ರಕ್ಷಣೆಯ ಮೇಲೆ ನಿರಂತರ ಒತ್ತಡವನ್ನು ಕಾಯ್ದುಕೊಂಡಿತು. ಆತಿಥೇಯ ತಂಡವು ಸಮಬಲ ಸಾಧಿಸಲು ಪ್ರಯತ್ನಿಸಿದರೂ, ಭಾರತವು ಪ್ರತಿಯೊಂದು ದಾಳಿಯನ್ನು ವಿಫಲಗೊಳಿಸಿತು.

ಮೊದಲ ಕ್ವಾರ್ಟರ್‌ನಲ್ಲಿ ಮುನ್ನಡೆ ಸಾಧಿಸಿದ ನಂತರ, ಎರಡನೇ ಕ್ವಾರ್ಟರ್‌ನಲ್ಲಿಯೂ ಭಾರತ ತನ್ನ ಪ್ರಾಬಲ್ಯವನ್ನು ಕಾಯ್ದುಕೊಂಡಿತು. 15ನೇ ನಿಮಿಷದಲ್ಲಿ ಸುನೆಲಿಟಾ ಟೊಪ್ಪೊ ಅದ್ಭುತ ಫೀಲ್ಡ್ ಗೋಲ್ ಗಳಿಸಿ ಭಾರತದ ಮುನ್ನಡೆಯನ್ನು 2-0ಕ್ಕೆ ವಿಸ್ತರಿಸಿದರು. ಈ ಗೋಲು ನ್ಯೂಜಿಲೆಂಡ್ ತಂಡದ ಮೇಲಿನ ಒತ್ತಡವನ್ನು ಮತ್ತಷ್ಟು ಹೆಚ್ಚಿಸಿತು. ಅತ್ಯುತ್ತಮ ಸಮನ್ವಯವನ್ನು ಪ್ರದರ್ಶಿಸಿದ ಭಾರತದ ಮಿಡ್‌ಫೀಲ್ಡ್ ಮತ್ತು ರಕ್ಷಣಾ ವಿಭಾಗವು ಎದುರಾಳಿ ತಂಡಕ್ಕೆ ಯಾವುದೇ ಗೋಲು ಗಳಿಸುವ ಅವಕಾಶಗಳನ್ನು ನೀಡಲಿಲ್ಲ.

ಭಾರತ ಒಂದೇ ಒಂದು ಪಂದ್ಯವನ್ನು ಸೋಲದೆ 2026ರ ಎಫ್‌ಐಎಚ್ ನೇಷನ್ಸ್ ಕಪ್‌ನ ಚಾಂಪಿಯನ್ ಆಗಿ ಹೊರಹೊಮ್ಮಿತು. ಆರಂಭದಲ್ಲಿ ಟೀಮ್ ಇಂಡಿಯಾ ಯುಎಸ್‌ಎ, ಜಪಾನ್ ಮತ್ತು ಉರುಗ್ವೆ ವಿರುದ್ಧ ತಲಾ ಒಂದು ಗೋಲು ಅಂತರದಿಂದ ಗೆಲುವು ಸಾಧಿಸುವ ಮೂಲಕ ತಮ್ಮ ಗುಂಪಿನಲ್ಲಿ ಅಗ್ರಸ್ಥಾನದಲ್ಲಿತ್ತು. ನಂತರ ಅವರು ಸೆಮಿಫೈನಲ್‌ನಲ್ಲಿ ಚಿಲಿಯನ್ನು 6-0 ಅಂತರದಿಂದ ಸೋಲಿಸುವ ಮೂಲಕ ಫೈನಲ್‌ನಲ್ಲಿ ತಮ್ಮ ಸ್ಥಾನವನ್ನು ಕಾಯ್ದಿರಿಸಿದರು. ಗಮನಾರ್ಹವಾಗಿ, ಇದು ನೇಷನ್ಸ್ ಕಪ್‌ನಲ್ಲಿ ಭಾರತದ ಎರಡನೇ ಪ್ರಶಸ್ತಿ ವಿಜಯವಾಗಿದೆ; ಅವರು ಈ ಹಿಂದೆ 2022 ರಲ್ಲಿ ಉದ್ಘಾಟನಾ ಆವೃತ್ತಿಯನ್ನು ಗೆದ್ದಿದ್ದರು.

ಇಂಗ್ಲೆಂಡ್ ವಿರುದ್ಧದ ಏಕದಿನ ಸರಣಿಗೆ ಭಾರತ ತಂಡ ಪ್ರಕಟ; ಮರಳಿದ ವಿರಾಟ್ ಕೊಹ್ಲಿ

ಹೊಸದಿಲ್ಲಿ, ಜೂ.21 - ಮುಂಬರುವ ಇಂಗ್ಲೆಂಡ್ ಪ್ರವಾಸದ ಏಕದಿನ ಸರಣಿಗೆ ಭಾರತ ಕ್ರಿಕೆಟ್ ತಂಡವನ್ನು ಪ್ರಕಟಿಸಲಾಗಿದ್ದು ಅಫ್ಘಾನ್ ಸರಣಿಯಿಂದ ದೂರ ಉಳಿದಿದ್ದ ವಿರಾಟ್ ಕೊಹ್ಲಿ ಮತ್ತು ಜಸ್ ಪ್ರೀತ್ ಬುಮ್ರಾ ತಂಡಕ್ಕೆ ಮರಳಿದ್ದಾರೆ.

ಇಂಗ್ಲೆಂಡ್ ವಿರುದ್ಧ ನಡೆಯಲಿರುವ ಮೂರು ಪಂದ್ಯಗಳ ಏಕದಿನ ಸರಣಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಭಾನುವಾರ ಭಾರತ ತಂಡವನ್ನು ಪ್ರಕಟಿಸಿದೆ. ಹಿರಿಯ ಆಟಗಾರರಾದ ವಿರಾಟ್ ಕೊಹ್ಲಿ ಮತ್ತು ಜಸ್ಪ್ರಿತ್ ಬುಮ್ರಾ ತಂಡಕ್ಕೆ ಮರಳಿರುವುದು ತಂಡದ ಬಲ ಹೆಚ್ಚಿಸುವಂತೆ ಮಾಡಿದೆ.



ಗಾಯದ ಸಮಸ್ಯೆಯಿಂದಾಗಿ ಅಫ್ಘಾನಿಸ್ತಾನ ವಿರುದ್ಧದ ಇತ್ತೀಚಿನ ಏಕದಿನ ಸರಣಿಯಿಂದ ಹೊರಗುಳಿದಿದ್ದ ಕೊಹ್ಲಿ, ಸಂಪೂರ್ಣ ಫಿಟ್ ಆಗಿರುವ ಹಿನ್ನೆಲೆಯಲ್ಲಿ ತಂಡಕ್ಕೆ ಮರು ಆಯ್ಕೆಯಾಗಿದ್ದಾರೆ.

ಮತ್ತೊಂದೆಡೆ, 2023ರ ಏಕದಿನ ವಿಶ್ವ ಕಪ್ ಫೈನಲ್ ಬಳಿಕ ಮೊದಲ ಬಾರಿಗೆ ಬುಮ್ರಾ ಏಕದಿನ ತಂಡದಲ್ಲಿ ಸ್ಥಾನ ಪಡೆದಿದ್ದು, ಇಂಗ್ಲೆಂಡ್‌ನ ಪರಿಸ್ಥಿತಿಯಲ್ಲಿ ಭಾರತದ ವೇಗದ ದಾಳಿಗೆ ಮತ್ತಷ್ಟು ಬಲ ತುಂಬುವ ನಿರೀಕ್ಷೆಯಿದೆ.

ಆಯ್ಕೆ ಸಮಿತಿಯು ಅಫ್ಘಾನಿಸ್ತಾನ ವಿರುದ್ಧ ಆಡಿದ್ದ ತಂಡದ ಬಹುತೇಕ ಆಟಗಾರರನ್ನು ಉಳಿಸಿಕೊಂಡಿದ್ದು, ಕೆಲವು ಮಹತ್ವದ ಬದಲಾವಣೆಗಳೂ ಗಮನ ಸೆಳೆದಿವೆ. ಅಫ್ಘಾನಿಸ್ತಾನ ವಿರುದ್ಧ ಶತಕ ಬಾರಿಸಿದ್ದ ಯುವ ಆರಂಭಿಕ ಬ್ಯಾಟರ್‌ಯಶಸ್ವಿ ಜೈಸ್ವಾಲ್ ಅವರಿಗೆ ಈ ಬಾರಿ ಅವಕಾಶ ಸಿಕ್ಕಿಲ್ಲ ಎನ್ನಲಾಗಿದೆ. ಅನುಭವಿ ಬ್ಯಾಟರ್‌ಗಳ ಸಂಯೋಜನೆಗೆ ಆದ್ಯತೆ ನೀಡುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಕೊಹ್ಲಿಯ ವಾಪಸಾತಿಯಿಂದ ಭಾರತದ ಬ್ಯಾಟಿಂಗ್ ವಿಭಾಗಕ್ಕೆ ಮತ್ತಷ್ಟು ಸ್ಥಿರತೆ ದೊರೆಯಲಿದ್ದು, ಬುಮ್ರಾ ಅವರ ಮರಳುವಿಕೆ ತಂಡದ ಬೌಲಿಂಗ್ ದಾಳಿಗೆ ಹೆಚ್ಚುವರಿ ಬಲ ನೀಡಲಿದೆ. ಮುಂದಿನ ದಿನಗಳಲ್ಲಿ ನಡೆಯಲಿರುವ ಪ್ರಮುಖ ಐಸಿಸಿ ಟೂರ್ನಿಗಳನ್ನು ಗಮನದಲ್ಲಿಟ್ಟುಕೊಂಡು ಈ ಸರಣಿಯನ್ನು ಭಾರತ ಮಹತ್ವದ ಸಿದ್ಧತಾ ಹಂತವಾಗಿ ಪರಿಗಣಿಸಿದೆ.

ಅಂದಹಾಗೆ ಭಾರತ ತಂಡ ಜುಲೈ 14ರಿಂದ 19ರವರೆಗೆ ನಡೆಯಲಿರುವ ಮೂರು ಪಂದ್ಯಗಳ ಏಕದಿನ ಸರಣಿಗಾಗಿ ಇಂಗ್ಲೆಂಡ್ ಪ್ರವಾಸ ಕೈಗೊಳ್ಳಲಿದ್ದು, ಈ ಸರಣಿಯು ತಂಡದ ಸಂಯೋಜನೆ ಹಾಗೂ ಬೆಂಚ್ ಬಲವನ್ನು ಪರೀಕ್ಷಿಸಲು ಉತ್ತಮ ಅವಕಾಶವಾಗಲಿದೆ.

ಬ್ರಾರ್‌ಗೆ ಮತ್ತೊಂದು ಅವಕಾಶ

ಇನ್ನು ಅಫ್ಘಾನಿಸ್ತಾನ ಸರಣಿಯಲ್ಲಿ ಪದಾರ್ಪಣೆ ಮಾಡಿದ್ದ ಗುರ್ನೂರ್‌ಬ್ರಾರ್ ಅಮೋಘ ಪ್ರದರ್ಶನ ನೀಡಿದ್ದರು. ಇದೇ ಪ್ರದರ್ಶನ ಅವರಿಗೆ ಮತ್ತೊಂದು ಪ್ರಮುಖ ಅವಕಾಶ ದೊರೆಯುವಂತೆ ಮಾಡಿದ್ದು, ಇಂಗ್ಲೆಂಡ್ ಪ್ರವಾಸಕ್ಕೂ ಬ್ರಾರ್‌ಆಯ್ಕೆಯಾಗಿದ್ದಾರೆ. ಉಳಿದಂತೆ ಅನುಭವಿ ಆಟಗಾರ ಶ್ರೇಯಸ್ ಅಯ್ಯರ್, ಹರ್ಷಿತ್ ರಾಣಾ ಮತ್ತು ವಾಷಿಂಗ್ಟನ್ ಸುಂದರ್‌ಮತ್ತು ಕುಲದೀಪ್ ಯಾದವ್ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಇಂಗ್ಲೆಂಡ್ ವಿರುದ್ಧ ಭಾರತದ ಏಕದಿನ ಸರಣಿಯ ವೇಳಾಪಟ್ಟಿ:

ಜುಲೈ 14, ಮೊದಲ ಏಕದಿನ, ಬರ್ಮಿಂಗ್‌ಹ್ಯಾಮ್ , ಮಧ್ಯಾಹ್ನ 3:30.

ಜುಲೈ 16, ಎರಡನೇ ಏಕದಿನ, ಕಾರ್ಡಿಫ್, ಸಂಜೆ 5:30.

ಜುಲೈ 19, ಮೂರನೇ ಏಕದಿನ, ಲಂಡನ್, ಸಂಜೆ 3:30.

ಇಂಗ್ಲೆಂಡ್ ಪ್ರವಾಸಕ್ಕೆ ಭಾರತ ತಂಡ ಇಂತಿದೆ: ಶುಭ್‌ಮನ್ ಗಿಲ್ (ನಾಯಕ), ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್(ಉಪ ನಾಯಕ), ಕೆಎಲ್ ರಾಹುಲ್ (ವಿಕೆಟ್ ಕೀಪರ್), ಇಶಾನ್ ಕಿಶನ್ (ವಿಕೆಟ್ ಕೀಪರ್), ವಾಷಿಂಗ್ಟನ್ ಸುಂದರ್, ಅಕ್ಸರ್‌ಪಟೇಲ್, ನಿತೀಶ್ ಕುಮಾರ್‌ರೆಡ್ಡಿ, ಕುಲದೀಪ್ ಯಾದವ್, ಜಸ್ ಪ್ರೀತ್ ಬುಮ್ರಾ, ಪ್ರಸಿದ್ಧ್ ಕೃಷ್ಣ, ಹರ್ಷಿತ್ ರಾಣಾ, ಅರ್ಶ್ ದೀಪ್ ಸಿಂಗ್ ಮತ್ತು ಗುರ್ನೂರ್‌ಬ್ರಾರ್.

ಎರಡನೇ ಟೆಸ್ಟ್: ಇಂಗ್ಲೆಂಡ್ ವಿರುದ್ಧ ನ್ಯೂಜಿಲೆಂಡ್‌ಗೆ 253 ರನ್‌ಗಳ ಜಯ; ಸರಣಿ ಸಮಬಲ



ಲಂಡನ್, ಜೂ.21 - ಲಂಡನ್‌ನ ಕೆನ್ನಿಂಗ್ಟನ್ ಓವಲ್‌ನಲ್ಲಿ ನಡೆದ ಮೂರು ಪಂದ್ಯಗಳ ಸರಣಿಯ ಎರಡನೇ ಟೆಸ್ಟ್‌ನಲ್ಲಿ ನ್ಯೂಜಿಲೆಂಡ್ 253 ರನ್‌ಗಳಿಂದ ಗೆದ್ದು ಸರಣಿಯನ್ನು 1-1ರಿಂದ ಸಮಬಲಗೊಳಿಸಿತು. ಕಿವೀಸ್ ತಂಡವು ಇಂಗ್ಲಿಷ್ ತಂಡಕ್ಕೆ 463 ರನ್‌ಗಳ ಬೃಹತ್ ಗುರಿಯನ್ನು ನೀಡಿತ್ತು. ಭಾನುವಾರ ಅಂತಿಮ ದಿನದಂದು 182/5 ರೊಂದಿಗೆ ಬ್ಯಾಟಿಂಗ್‌ಗೆ ಇಳಿದ ಇಂಗ್ಲೆಂಡ್ ಗೆಲ್ಲಲು 281 ರನ್‌ಗಳ ಅಗತ್ಯವಿತ್ತು. ಆದಾಗ್ಯೂ, ಮೊದಲ ಸೆಷನ್‌ನಲ್ಲಿಯೇ 38 ರನ್‌ಗಳಿಗೆ ಎಲ್ಲಾ ಐದು ವಿಕೆಟ್‌ಗಳನ್ನು ಕಳೆದುಕೊಂಡಿತು. ಈಗ ಸರಣಿಯ ಮೂರನೇ ಮತ್ತು ನಿರ್ಣಾಯಕ ಪಂದ್ಯವು ಜೂನ್ 25 ರಿಂದ ಟ್ರೆಂಟ್ ಬ್ರಿಡ್ಜ್‌ನಲ್ಲಿ ನಡೆಯಲಿದೆ.

ಟಾಸ್ ಸೋತು ಬ್ಯಾಟಿಂಗ್ ಆಯ್ದುಕೊಂಡ ನ್ಯೂಜಿಲೆಂಡ್ ತಂಡವು ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 391 ರನ್‌ಗಳಿಗೆ ಆಲೌಟ್ ಆಯಿತು. ಪ್ರವಾಸಿ ತಂಡದ ಪರ ಗ್ಲೆನ್ ಫಿಲಿಪ್ಸ್ 100 ರನ್ ಗಳಿಸಿ ಅಗ್ರ ಸ್ಕೋರರ್‌ಎನಿಸಿಕೊಂಡರೆ, ಟಾಮ್ ಬ್ಲಂಡೆಲ್ 51 ರನ್ ಗಳಿಸಿದರು. ಡ್ಯಾರಿಲ್ ಮಿಚೆಲ್ 44 ರನ್ ಮತ್ತು ಕೈಲ್ ಜೇಮಿಸನ್ 41 ರನ್ ಗಳಿಸಿದರು. ಇಂಗ್ಲೆಂಡ್ ಪರ ಜಾಕೋಬ್ ಬೆಥೆಲ್ ಗರಿಷ್ಠ 3 ವಿಕೆಟ್ ಪಡೆದರು.

ಮೊದಲ ಇನ್ನಿಂಗ್ಸ್‌ನಲ್ಲಿ ಇಂಗ್ಲೆಂಡ್ 291 ರನ್‌ಗಳಿಗೆ ಆಲೌಟ್..... ಇದಕ್ಕೆ ಪ್ರತಿಕ್ರಿಯೆಯಾಗಿ, ಇಂಗ್ಲೆಂಡ್ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ 291 ರನ್‌ಗಳಿಗೆ ಆಲೌಟ್ ಆಯಿತು. ಈ ಇನ್ನಿಂಗ್ಸ್‌ನಲ್ಲಿ ಎಮಿಲಿಯೊ ಅತ್ಯಧಿಕ 53 ರನ್ ಗಳಿಸಿದರು. ಅರ್ಧಶತಕಗಳಲ್ಲಿ ಮ್ಯಾಥ್ಯೂ ಫಿಶರ್(ಔಟಾಗದೆ 50) ಕೂಡ ಸೇರಿದ್ದರು. ಕಿವೀಸ್ ಪರ ಮ್ಯಾಟ್ ಹೆನ್ರಿ ಐದು ವಿಕೆಟ್ ಪಡೆದರೆ, ವಿಲಿಯಂ ಒ'ರೂರ್ಕ್ ಎರಡು ವಿಕೆಟ್ ಪಡೆದರು. ನ್ಯೂಜಿಲೆಂಡ್ ತನ್ನ ಮೊದಲ ಇನ್ನಿಂಗ್ಸ್ ಆಧಾರದ ಮೇಲೆ 100 ರನ್ ಮುನ್ನಡೆ ಸಾಧಿಸಿತ್ತು. ಈ ತಂಡವು ತನ್ನ ಎರಡನೇ ಇನ್ನಿಂಗ್ಸ್‌ನಲ್ಲಿ 362 ರನ್‌ಗಳನ್ನು ಗಳಿಸಿತು. ಈ ಇನ್ನಿಂಗ್ಸ್‌ನಲ್ಲಿ ಹೆನ್ರಿ ನಿಕೋಲ್ಸ್ 121 ರನ್ ಗಳಿಸಿದರೆ, ರಚಿನ್ ರವೀಂದ್ರ (76) ಮತ್ತು ಡ್ಯಾರಿಲ್ ಮಿಚೆಲ್ (68) ಅರ್ಧಶತಕ ಗಳಿಸಿದರು. ಇಂಗ್ಲೆಂಡ್ ಪರ ಜೋಫ್ರಾ ಆರ್ಚರ್ ಮತ್ತು ಮ್ಯಾಥ್ಯೂ ಫಿಶರ್ ತಲಾ ಮೂರು ವಿಕೆಟ್ ಪಡೆದರು. ಗೆಲ್ಲಲು 463 ರನ್‌ಗಳ ಬೃಹತ್ ಗುರಿಯನ್ನು ಬೆನ್ನಟ್ಟಿದ ಇಂಗ್ಲೆಂಡ್ ತಂಡವು ನಾಲ್ಕನೇ ದಿನದ ಅಂತ್ಯಕ್ಕೆ 182/5 ರನ್ ಗಳಿಸಲಷ್ಟೇ ಶಕ್ತವಾಯಿತು. ಐದನೇ ದಿನದಂದು, ಕಿವೀಸ್‌ಗೆ ಐದು ವಿಕೆಟ್‌ಗಳ ಅಗತ್ಯವಿದ್ದಾಗ, ಇಂಗ್ಲೆಂಡ್ ಗೆಲ್ಲಲು 281 ರನ್‌ಗಳ ಅಗತ್ಯವಿತ್ತು, ಆದರೆ ಮೊದಲ ಸೆಷನ್‌ನಲ್ಲಿ 209 ರನ್‌ಗಳಿಗೆ ಎಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು. ಜೋ ರೂಟ್(77) ಹಾಗೂ ಹ್ಯಾರಿ ಬ್ರೂಕ್(58) ಅರೆಶತಕದ ಹೊರತಾಗಿಯೂ ಉಳಿದ ಬ್ಯಾಟರ್‌ಗಳ ವೈಫಲ್ಯದಿಂದ ತಂಡವು ಸೋಲನ್ನು ಕಂಡಿತು. ಕಿವೀಸ್ ಪರ ಮ್ಯಾಟ್ ಹೆನ್ರಿ 6 ವಿಕೆಟ್ ಪಡೆದರೆ, ಕೈಲ್ ಜೇಮಿಸನ್ 3 ವಿಕೆಟ್ ಕಬಳಿಸಿದರು.





